ಪ್ರಚಾರ ಪುಸ್ತಕ ಮಾಲೆ

117

ಅಣ್ಣನ ಆದರ್ಶ

ಡಾ॥ ಟಿ. ಜಿ. ಸಿದ್ಧಪ್ಪಾರಾಧ್ಯ

ಪ್ರಸಾರಾಂಗ ★ ಮೈಸೂರು ವಿಶ್ವವಿದ್ಯಾನಿಲಯ ★

ಪ್ರಚಾರ ಪುಸ್ತಕಮಾಲೆ—೧೧೭

ಅಣ್ಣನ ಆದರ್ಶ

ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ, ಎಂ.ಎ., ಪಿಎಚ್.ಡಿ.

ಪ್ರಸಾರಾಂಗ
ಮೈಸೂರು ವಿಶ್ವವಿದ್ಯಾನಿಲಯ

೧೯೮೭

ಮೊದಲನೆಯ ಮುದ್ರಣ : ೧೯೬೭

ಮೂರನೆಯ ಮುದ್ರಣ : ೧೯೮೨

೧೦,೦೦೦ ಪ್ರತಿಗಳು

ಬೆಲೆ : ರೂ. ೧–೦೦

ಪ್ರಕಾಶಕರು

ನಿರ್ದೇಶಕರು, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು–೬

ಮುದ್ರಕರು

ನಿರ್ದೇಶಕರು, ವಿಶ್ವವಿದ್ಯಾನಿಲಯ ಮುದ್ರಣಾಲಯ, ಮೈಸೂರು–೬

ಮುನ್ನುಡಿ

ನಮ್ಮ ವಿಶ್ವವಿದ್ಯಾನಿಲಯದ ಮೊದಲನೆಯ ಛಾನ್ಸಲರೂ ಆಳಿದ ಮಹಾಸ್ವಾಮಿಯವರೂ ಆದ ಶ್ರೀ ನಾಲ್ವಡಿ ಕೃಷ್ಣರಾಜ ಒಡೆಯರ್ ಬಹದ್ದೂರ್ ಅವರು ಮೊದಲನೆಯ 'ಸೆನೆಟ್' ಸಭೆಯ ಪ್ರಾರಂಭೋತ್ಸವದ ಸಮಯದಲ್ಲಿಯೂ, ಮೊದಲನೆಯ 'ಕಾನ್ವೊಕೇಷನ್' ಸಮಾರಂಭದ ಕಾಲದಲ್ಲಿಯೂ ವಿಶ್ವವಿದ್ಯಾನಿಲಯದ ವಿದ್ಯೆ ಪಟ್ಟಣಗಳಲ್ಲಿ ಮಾತ್ರ ಕೇಂದ್ರೀಕೃತವಾಗದೆ ನಾಡಿನ ಮೂಲೆ ಮೂಲೆಗೂ ಪ್ರಸರಿಸಿ, ಉಚ್ಚಶಿಕ್ಷಣವನ್ನು ಪಡೆಯಲು ಅವಕಾಶ ಹೊಂದದ ಸಾಮಾನ್ಯ ಜನರ ಹೃದಯವನ್ನು ಬೆಳಗಿ, ಸಮಷ್ಟಿಪ್ರಜ್ಞೆಯ ವಿಕಾಸಕ್ಕೆ ಕಾರಣವಾಗಬೇಕು ಎಂಬ ಮಹದಾಶಯವನ್ನು ವ್ಯಕ್ತಪಡಿಸಿದ್ದರು. ಅವರ ಆಶಯ ಇಂದು ಫಲದಾಯಕವಾಗುತ್ತಿದೆ. ನಮ್ಮ ವಿಶ್ವವಿದ್ಯಾನಿಲಯದ ಪ್ರಸಾರಾಂಗ, ನಾಡಿನ ಮೂಲೆಮೂಲೆಯಲ್ಲಿ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಿ, ಸಂಸ್ಕೃತಿಯ ಪ್ರಸಾರ ಕಾರ್ಯವನ್ನು ಬಹಳ ಸಮರ್ಪಕವಾದ ರೀತಿಯಲ್ಲಿ ನೆರವೇರಿಸುತ್ತಿದೆ.

ಜನರು ಬಯಸಿದೆಡೆಗಳಲ್ಲಿ ಈ ಪ್ರಚಾರೋಪನ್ಯಾಸಗಳನ್ನು ಏರ್ಪಡಿಸಲಾಗುತ್ತಿದೆ. ವಿಶ್ವವಿದ್ಯಾನಿಲಯದಲ್ಲಿ ಅನೇಕ ವರ್ಷಗಳು ಪಾಠ ಹೇಳಿ ಮಿಗಿಲಾದ ಜ್ಞಾನವನ್ನು ಗಳಿಸಿರುವ ಘನ ವಿದ್ವಾಂಸರು ಜನರು ಅಪೇಕ್ಷಿಸುವ ವಿಷಯಗಳನ್ನು ಕುರಿತು ಸರಳವೂ, ಸುಲಭಗ್ರಾಹ್ಯವೂ ಆದ ಕನ್ನಡ ಭಾಷೆಯ ಮೂಲಕ ತಿಳುವಳಿಕೆ ಕೊಡುತ್ತಾರೆ. ಜ್ಞಾನವನ್ನು ಹಂಚುವುದರಲ್ಲೂ ಆನಂದವಿದೆ. ಅಧ್ಯಾಪಕ ವೃಂದದವರು ಹಳ್ಳಿಗಳಲ್ಲಿಯೇ ಒಂದೆರಡು ದಿನ ನೆಲೆಸಿ, ಸಾಮಾನ್ಯ ಜನರಂತೆಯೇ ಇದ್ದು

ಕೊಂಡು, ಗಳಿಸಿರುವ ಜ್ಞಾನವನ್ನು ಜನಸಾಮಾನ್ಯರ ಹೃದಯ ದಲ್ಲಿ ಬಿತ್ತಿ, ತಾವೂ ಆನಂದವನ್ನು ಅನುಭವಿಸುತ್ತಾ ಮತ್ತು ಇತರರಿಗೂ ಆನಂದವನ್ನುಂಟುಮಾಡುತ್ತಾರೆ. ಈ ಉಪನ್ಯಾಸ ಗಳು ವಿಶ್ವವಿದ್ಯಾನಿಲಯದ ಮೆಟ್ಟಲನ್ನು ಹತ್ತಲು ಅವಕಾಶವಿಲ್ಲ ದವರಿಗೆ ವಿಶ್ವವಿದ್ಯಾನಿಲಯ ವಿದ್ಯೆಯ ಸೌಲಭ್ಯವನ್ನು ನೀಡಲು ನೆರವಾಗುತ್ತವೆ. ವಿಶ್ವವಿದ್ಯಾನಿಲಯದಲ್ಲಿ ಜ್ಞಾನವನ್ನು ಗಳಿಸಿ, ನಾಡಿನ ಬೇರೆ ಬೇರೆ ಭಾಗಗಳಲ್ಲಿ ವಿವಿಧ ಕಾರ್ಯರಂಗಗಳಲ್ಲಿ ನಿರತರಾಗಿರುವ ಜನರಿಗೆ ಮಾರ್ಗದರ್ಶಕವಾಗುತ್ತವೆ. ನಮ್ಮ ಸಮಾಜದಲ್ಲಿನ ಭೇದಭಾವಗಳನ್ನು ಹೋಗಲಾಡಿಸಿ ಸಮಾನತೆ ಯನ್ನು ಸ್ಥಾಪಿಸಲು ಸಹಾಯಕವಾಗುತ್ತವೆ; ವಿಶ್ವವಿದ್ಯಾ ನಿಲಯಕ್ಕೂ ಸಾಮಾನ್ಯ ಜನತೆಗೂ ಮಧ್ಯೆ ಇರುವ ದೊಡ್ಡ ಅಂತರವನ್ನು ಪರಿಹರಿಸಲು ನೆರವಾಗುತ್ತವೆ; ಜನರಲ್ಲಿ ಜ್ಞಾನೋದಯವನ್ನುಂಟುಮಾಡಿ, ಅವರ ದುಃಖಕ್ಕೆ ಮೂಲ ಕಾರಣವಾದ ಅಸಮಾನತೆಯನ್ನು ಹೋಗಲಾಡಿಸಿ, ವಿಶಾಲ ಭಾವನೆಯು ಮೂಡುವಂತೆ ಮಾಡುತ್ತವೆ.

ಪ್ರಚಾರೋಪನ್ಯಾಸಗಳನ್ನು ಕಿರುಹೊತ್ತಿಗೆಗಳ ರೂಪದಲ್ಲಿ ಪ್ರಕಟಿಸಲಾಗುತ್ತಿದೆ. ಈ ಉಪನ್ಯಾಸಗಳನ್ನು ಕೇಳಲು ಅವಕಾಶ ಸಿಕ್ಕದವರು ಈ ಹೊತ್ತಗೆಗಳನ್ನು ಕೊಂಡು ಓದಿ ತಿಳುವಳಿಕೆ ಪಡೆಯಲು ಅವಕಾಶವಿದೆ. ಈ ಮಾಲೆಯ ಪುಸ್ತಕಗಳು ಹೆಚ್ಚು ಜನಪ್ರಿಯವಾಗಿವೆ. ಪುಸ್ತಕಗಳು ಅಚ್ಚಿನ ಮನೆಯಿಂದ ಹೊರಬಿದ್ದ ಕೂಡಲೆ ಜನರು ಆದರದಿಂದ ಕೊಂಡು ಓದುತ್ತಾರೆ. ಈ ಮಾಲೆ ಯಲ್ಲಿ ಈಗಾಗಲೇ ಭೌತವಿಜ್ಞಾನ, ರಸಾಯನವಿಜ್ಞಾನ, ಪ್ರಾಣಿ ವಿಜ್ಞಾನ, ವೈದ್ಯವಿಜ್ಞಾನ, ಗಣಿತವಿಜ್ಞಾನ, ಸಮಾಜವಿಜ್ಞಾನ, ಅರ್ಥಶಾಸ್ತ್ರ, ತತ್ತ್ವಶಾಸ್ತ್ರ, ಸಾಹಿತ್ಯ ಮತ್ತು ಕಲೆ ಮುಂತಾದ

ವಿಷಯಂಗಳನ್ನು ಕುರಿತ ನೂರಹದಿನಾರು ಪುಸ್ತಕಗಳು ಪ್ರಕಟ ವಾಗಿವೆ ಎಂಬುದನ್ನು ತಿಳಿಸಲು ನನಗೆ ಬಹಳ ಸಂತೋಷವಾಗಿದೆ.

ಈ ಮಾಲೆಯಲ್ಲಿ ಈಗ ಹೊರಬೀಳುತ್ತಿರುವ ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ ಅವರ 'ಅಣ್ಣನ ಆದರ್ಶ' ಹೆಚ್ಚು ಜನಪ್ರಿಯ ವಾಗಲೆಂದು ನಾನು ಆಶಿಸುತ್ತೇನೆ.

ನಾರಾಯಣರಾವ್ ಅಪ್ಪೂರಾವ್ ನಿಕಂ
ಕುಲಪತಿಗಳು

ಕೃತಜ್ಞತೆ

ಬಸವಣ್ಣನು ಸಾಮಾನ್ಯ ಮಾನವನಂತೆ ಲೋಕದಲ್ಲಿ ವ್ಯವಹರಿಸುತ್ತಲೇ ಆತ್ಮಶಕ್ತಿಯ ಪೂರ್ಣವಿಕಾಸವನ್ನು ಗಳಿಸಿದ ಮಹಾವ್ಯಕ್ತಿ. ಇವನು ವೀರಶೈವಧರ್ಮದ ಪ್ರಚಾರಕಾರ್ಯದಲ್ಲಿ ಪ್ರಾಮಾಣಿಕತೆಯಿಂದ ತನ್ನ ಸೇವೆಯನ್ನು ಸಲ್ಲಿಸಿದ್ದಾನೆ. ಆದರೂ ಇವನನ್ನು ಧರ್ಮಸ್ಥಾಪಕನೆಂದು ಅನೇಕರು ಭಾವಿಸಿದ್ದಾರೆ. ಶರಣರ ಕಾಲದ ಜೀವನವನ್ನು ನೋಡಿದರೆ ಈ ಭಾವನೆ ನಿರಾಧಾರವೆಂದು ಕಾಣುತ್ತದೆ. ಶರಣರೆಲ್ಲರೂ ಹಿಂದಿನ ವೀರಶೈವ ಸಂಪ್ರದಾಯವನ್ನು ಸ್ಮರಿಸಿಕೊಂಡೇ ದೀಕ್ಷೆಯೇ ಮೊದಲಾದ ಕರ್ಮಗಳನ್ನು ಆಚರಿಸಿರುವುದಾಗಿ ತಿಳಿದುಬರುತ್ತದೆ. ಶರಣರಿಗೆ ಕೇವಲ ಹತ್ತಿರದವನಾದ ಭೀಮಕವಿಯು ಬಸವಪುರಾಣದಲ್ಲಿ ಈ ವಿಷಯವನ್ನು ಸ್ಪಷ್ಟಪಡಿಸಿದ್ದಾನೆ. ಸಿದ್ಧರಾಮನಿಗೆ ಲಿಂಗಧಾರಣೆ ಮಾಡುವ ಪ್ರಸಂಗ ಒದಗಿದಾಗ, ಅಲ್ಲಮಪ್ರಭುವಿನ ಸಾನ್ನಿಧ್ಯದಲ್ಲಿ ಚನ್ನಬಸವಣ್ಣನು ನಾಲ್ಕು ಕಲಶಗಳನ್ನು ಇಟ್ಟು ಭಕ್ತಿಯಿಂದ ಅರ್ಚಿಸಿ ಅದಕ್ಕೆ ಸಂಬಂಧಿಸಿದ ಸೂತ್ರವನ್ನು ಸಿದ್ಧರಾಮನ ಕೈಗೆ ಕೊಡುತ್ತಾನೆ. ಇದೆಲ್ಲಾ ಏನು ಎಂದು ಸಿದ್ಧರಾಮನು ಕೇಳುತ್ತಾನೆ. ಅದಕ್ಕೆ ಚನ್ನಬಸವಣ್ಣನು ನಾಲ್ಕು ಕಲಶಗಳು ನಾಲ್ಕು ಗುರುಪೀಠಗಳ ಆಚಾರ್ಯರನ್ನು ಪ್ರತಿನಿಧಿಸುವುದಾಗಿ ತಿಳಿಸುತ್ತಾನೆ. ರೇಣುಕಾಚಾರ್ಯ–ಮರುಳಾರಾಧ್ಯ–ವಿಶ್ವಾರಾಧ್ಯ–ಪಂಡಿತಾರಾಧ್ಯ ಇವರೇ ಈ ನಾಲ್ವರು ಆಚಾರ್ಯರು. ಈಶ್ವರನ ನಾಲ್ಕು ಮುಖಗಳಿಂದ ಅವತರಿಸಿ ಇವರು ಬಹಳ ಹಿಂದೆಯೇ ಭೂಲೋಕದಲ್ಲಿ ವೀರಶೈವಧರ್ಮವನ್ನು ಸ್ಥಾಪಿಸಿರುವರೆಂದು ಚನ್ನಬಸವಣ್ಣನು ತಿಳಿಸಿದ ಮೇಲೆ,

ಸಿದ್ಧರಾಮನು ನಾಲ್ವರು ಆಚಾರ್ಯರನ್ನು ಸ್ಮರಿಸುತ್ತ ದೀಕ್ಷೆಯಲ್ಲಿ ಇಷ್ಟಲಿಂಗವನ್ನು ಪಡೆಯುತ್ತಾನೆ. ಈಶ್ವರನ ಐದನೆಯ ಮುಖದಿಂದ ಹೊರಟ ಆಕಾಶತತ್ತ್ವವನ್ನು ಪ್ರತಿನಿಧಿಸಿದ ಏಕೋರಾಮಾರಾಧ್ಯರು ಹಿಂದೆಯೇ ನಿರಂಜನ ಜಂಗಮರಾಗಿದ್ದು ಅಲ್ಲಮಪ್ರಭುವೆಂಬ ಹೆಸರಿನಿಂದ ಅವತರಿಸಿ ಎದುರಿಗೆ ಇದ್ದುದರಿಂದ, ಸಿದ್ಧರಾಮನು ಆ ಪ್ರಭುವನ್ನು ಆರಾಧಿಸಿ ಅವನಿಂದ ಮಂತ್ರೋಪದೇಶವನ್ನು ಪಡೆದು ಧನ್ಯನಾಗುತ್ತಾನೆ. ಹೀಗೆ ಹಿಂದಿನಿಂದ ರೂಢಿಯಲ್ಲಿದ್ದ ಗುರುಜಂಗಮರ ಅರ್ಚನೆಯ ಸಂಪ್ರದಾಯವು ಶರಣರ ಕಾಲದಲ್ಲಿಯೂ ಆಚರಣೆಯಲ್ಲಿದ್ದುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇದನ್ನು ಶರಣರು ಹೆಚ್ಚು ಬಳಕೆಗೆ ತಂದು ಅದರ ಆಚರಣೆಯಲ್ಲಿ ಯಾವ ಕ್ಲೇಶವೂ ಇಲ್ಲವೆಂಬುದನ್ನು ಎಲ್ಲರಿಗೂ ಮನವರಿಕೆ ಮಾಡಿದರು.

ಬಸವಣ್ಣನಂತೂ ಗುರುಜಂಗಮರಲ್ಲಿ ಅನನ್ಯಭಕ್ತಿಯಿಂದ ನಡೆದುಕೊಂಡಿದ್ದಾನೆ. ಅವನು ಭಕ್ತನಾಗಿದ್ದುಕೊಂಡೇ ಭಕ್ತಿಯ ಬೆಳವಣಿಗೆಯಿಂದ ಪೂರ್ಣವಿಕಾಸವನ್ನು ಹೊಂದಿ ಶಿವನಲ್ಲಿ ಸಮರಸವಾಗಿ ಬೆರೆತನು. ಈ ಸ್ಥಿತಿಯಲ್ಲಿ ಅವನು ನಮಗೆ ಮಾನ್ಯನೂ, ಸನ್ಮಾರ್ಗದರ್ಶಕನೂ ಆಗಿರುವನೆಂಬುದು ನಿರ್ವಿವಾದವೆನಿಸಿದೆ. ಆದರೂ ಹಿಂದಿನ ಆಚಾರ್ಯಪರಂಪರೆಯನ್ನು ಮರೆತು ಬಸವಣ್ಣನನ್ನು ಗುರುಪದವಿಗೆ ಏರಿಸುವ ಉತ್ಸಾಹದ ಬಿರುಸಿನಲ್ಲಿ ಅವನನ್ನು ಧರ್ಮಸ್ಥಾಪಕನೆಂದು ಭಾವಿಸುವುದು ಯುಕ್ತವಲ್ಲ. ಹಿಂದಿನಿಂದ ಬಳಕೆಯಲ್ಲಿ ಬಂದಿದ್ದ ವೀರಶೈವ ಧರ್ಮವನ್ನೇ ಆಚರಣೆಗೆ ಹೊಂದಿಸಿ ಅವನು ಅದ್ಭುತವಾದ ಕೀರ್ತಿಯನ್ನು ಗಳಿಸಿದ್ದಾನೆ. ಕೇವಲ ಆಚಾರ್ಯರನ್ನೇ ಹೆಚ್ಚಾಗಿ ಗೌರವಿಸಿ ಬಸವಾದಿ ಶರಣರನ್ನು ನಿಂದಿಸುವುದಾಗಲೀ, ಶರಣರನ್ನೇ

ಹೆಚ್ಚು ಗೌರವಿಸಿ ಆಚಾರ್ಯರನ್ನು ನಿಂದಿಸುವುದಾಗಲೀ ಯಾರಿಗೂ ಶ್ರೇಯಸ್ಕರವಲ್ಲ. ಶರಣರೇ ಆಚಾರ್ಯರನ್ನು ಗೌರವಿಸಿರುವಾಗ, ಭಕ್ತರಾದ ನಾವು ಅವರನ್ನು ಕೈಬಿಟ್ಟರೆ ಹೇಗೆ ಬದುಕಬಲ್ಲೆವು ? ಆಚಾರ್ಯರೂ ವೀರಶೈವಧರ್ಮಕ್ಕೆ ಬಸವಾದಿ ಶರಣರಂತೆಯೇ ಹೆಚ್ಚು ಸೇವೆಯನ್ನು ಸಲ್ಲಿಸಿದ್ದಾರೆ. ಅವರು ಬ್ರಹ್ಮಸೂತ್ರಗಳಿಗೆ ಬರೆದಿರುವ ಭಾಷ್ಯಗಳನ್ನು ಶ್ರೀಪತಿಪಂಡಿತರು ಶ್ರೀಕರಭಾಷ್ಯದಲ್ಲಿ ಗಹನವಾದ ಸಮಸ್ಯೆಗಳ ಪರಿಹಾರಕ್ಕಾಗಿ ಅನೇಕ ಕಡೆಗಳಲ್ಲಿ ಉಲ್ಲೇಖಿಸಿದ್ದಾರೆ. ಪಂಚಾಚಾರ್ಯರು ಗುರುಜಂಗಮರ ಸಮನ್ವಯ ದೃಷ್ಟಿಯಿಂದ ವೀರಶೈವಧರ್ಮವನ್ನು ಜಗತ್ತಿನಲ್ಲಿ ಮೊದಲೇ ಸ್ಥಾಪಿಸಿ ಆ ಕಾಲದ ಜನರಿಗೆ ಉಪದೇಶಿಸಿ ತಮ್ಮ ಪೀಠಗಳನ್ನು ಸ್ಥಾಪಿಸಿದ್ದಾರೆ. ಇದೆಲ್ಲವನ್ನೂ ಮರೆತು ಕೇವಲ ಬಸವಾದಿ ಶರಣರೇ ವೀರಶೈವಧರ್ಮಸ್ಥಾಪಕರೆಂದು ಭ್ರಮಿಸುವುದು ಹಿತತಕರವಲ್ಲ. ಆಚಾರ್ಯರಾಗಲೀ, ಶರಣರಾಗಲೀ, ಯಾರೂ ಭೌತಿಕವಾಗಿ ನಮ್ಮೆದುರಿಗೆ ಇಲ್ಲದಿದ್ದರೂ, ಆಧ್ಯಾತ್ಮಿಕವಾಗಿ ಅವರೆಲ್ಲರೂ ನಮ್ಮಲ್ಲಿ ನೆಲಸಿದ್ದಾರೆ. ದೀಕ್ಷಾದಿಸಂಸ್ಕಾರಗಳಲ್ಲಿ ನಾಲ್ವರು ಗುರುಪೀಠದ ಆಚಾರ್ಯರನ್ನು ನಾಲ್ಕು ಕಲಶಗಳಲ್ಲೂ, ಮಧ್ಯದ ಕಲಶದಲ್ಲಿ ನಿರಂಜನಜಂಗಮರಾದ ಏಕೋರಾಮರಾಧ್ಯರನ್ನೂ ಅರ್ಚಿಸುವುದು ಈಗಲೂ ರೂಢಿಯಲ್ಲಿದೆ. ಅದರಂತೆಯೇ ಭಕ್ತನು ಗುರುಲಿಂಗಜಂಗಮರನ್ನು ತನ್ನ ಪ್ರಾಣವೆಂದು ಭಾವಿಸಿ ಶ್ರದ್ಧೆಯಿಂದ ಅರ್ಚಿಸಬೇಕೆಂಬ ಪದ್ಧತಿಯನ್ನು ಬಸವಾದಿ ಶರಣರು ಆಚರಿಸಿ ತೋರಿಸಿದ್ದರಿಂದ, ಈ ಪದ್ಧತಿ ಈಗಲೂ ಭಕ್ತರಲ್ಲಿ ಹಾಸುಹೊಕ್ಕಾಗಿ ಹೊಂದಿಕೊಂಡಿದೆ. ಹೀಗೆ ಆಚಾರ್ಯರು ತೋರಿಸಿಕೊಟ್ಟ ಮಾರ್ಗವನ್ನು ಶರಣರು ಹೆಚ್ಚು ಬೆಳಕಿಗೆ ತಂದಿರುವುದರಿಂದ, ಏರುಪೇರುಗಳಿಗವಕಾಶವಿಲ್ಲದಂತೆ

ವಿವೇಕಿಯು ಧರ್ಮಸ್ಥಾಪಕರಾದ ಆಚಾರ್ಯರನ್ನೂ, ಧರ್ಮೋದ್ಧಾರಕರಾದ ಬಸವಾದಿಶರಣರನ್ನು ಯಥೋಚಿತವಾಗಿ ಗೌರವಿಸುತ್ತಾ, ಯಾರ ವಿಷಯದಲ್ಲೂ ಉದಾಸೀನವಾಗದಂತೆ ವರ್ತಿಸುತ್ತ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬೇಕಾಗಿದೆ.

ಹಿಂದಿನ ಆಚಾರ್ಯಪರಂಪರೆಯೊಡನೆ ಸಮರಸವಾಗಿ ಹೊಂದಿಕೊಂಡು ಧರ್ಮಪ್ರಚಾರಕಾರ್ಯವನ್ನು ಸಹನೆಯಿಂದ ನೆರವೇರಿಸಿದ ಅಣ್ಣನ ಆದರ್ಶವು ಸಾಧಕರೆಲ್ಲರಿಗೂ ಉತ್ತಮ ನಿದರ್ಶನವಾಗಿದೆ. ಅಣ್ಣನ ವಿಶಾಲದೃಷ್ಟಿ, ಉದಾರವರ್ತನೆ, ಧಾರ್ಮಿಕಶ್ರದ್ಧೆ, ಆತ್ಮಶೋಧನೆ, ಕಷ್ಟಸಹಿಷ್ಣುತೆ, ನಡೆನುಡಿ ಶುದ್ಧಿ ಇವು ಜನತೆಯಲ್ಲಿ ಬೆಳಕಿಗೆ ಬರಲೆಂಬ ಸದಾಶಯದಿಂದ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಶಾಖೆಯು 'ಅಣ್ಣನ ಆದರ್ಶ'ವನ್ನು ವಾಚಕರ ಮುಂದೆ ಇಡಲಿದೆ.

ಚಿತ್ರದುರ್ಗ ಮತ್ತು ಬಳ್ಳಾರಿಗಳಲ್ಲಿ ಪ್ರಸಾರಶಾಖೆಯ ಆಶ್ರಯದಲ್ಲಿ ಮಾಡಿದ ಉಪನ್ಯಾಸಗಳ ಆಧಾರದ ಮೇಲೆ ಅಣ್ಣನ ಆದರ್ಶವನ್ನು ಇಲ್ಲಿ ಪ್ರಕಟಣೆಗೆ ಸಿದ್ಧಗೊಳಿಸಲಾಗಿದೆ. ಈ ಅಣ್ಣನ ಆದರ್ಶವು ವಾಚಕರೆಲ್ಲರ ಹೃದಯದಲ್ಲೂ ಆತ್ಮಜ್ಯೋತಿಯನ್ನು ಕೆರಳಿಸಲೆಂದು ಪ್ರಾರ್ಥಿಸುತ್ತೇನೆ. ಈ ಸೇವಾವಕಾಶವನ್ನು ದೊರಕಿಸಿದ್ದಕ್ಕಾಗಿ ಪ್ರಸಾರಾಂಗದ ಮುಖ್ಯಾಧಿಕಾರಿಗಳಾದ ಶ್ರೀ ಪಿ. ಮಲ್ಲಿಕಾರ್ಜುನಪ್ಪ, ಎಂ.ಎಸ್‌ಸಿ. ಅವರಿಗೂ ಸಹಾಯಾಧಿಕಾರಿಗಳಾದ ಶ್ರೀ ನರಸಣ್ಣ, ಎಂ.ಎ. ಅವರಿಗೂ ಹೃತ್ಪೂರ್ವಕವಾಗಿ ಕೃತಜ್ಞತೆಯನ್ನು ಸಲ್ಲಿಸುತ್ತೇನೆ,

ಟಿ. ಜಿ. ಸಿದ್ಧಪ್ಪಾರಾಧ್ಯ

ಭಕ್ತಕಿಂಕರ

ವಿಷಯ ಸೂಚಿಕೆ

ಅವತರಣಿಕೆ

ಸಮಸ್ತ ಮಾನವರಿಗೂ ಹಿರಿಯ ಅಣ್ಣನಂತೆ, ಶುದ್ಧವಾದ ನಡೆನುಡಿಗಳಿಂದ ದಿವ್ಯ ಆದರ್ಶನಾಗಿರುವ ಬಸವಣ್ಣನನ್ನು ಇಲ್ಲಿ ಅಣ್ಣನೆಂದು ಕರೆಯಲಾಗಿದೆ. ಅವನು ಬ್ರಾಹ್ಮಣ ವಂಶದಲ್ಲಿ ಜನಿಸಿ, ಅದಕ್ಕೆ ಸಂಬಂಧಿಸಿದ ವಿವಿಧ ಕರ್ಮಗಳನ್ನು ತೊರೆದು, ಶಿವಾರ್ಚನವೆಂಬ ವೀರವ್ರತವೊಂದನ್ನೇಆಚರಿಸಬೇಕೆಂದು ವೀರಶೈವ ಧರ್ಮವನ್ನಾಶ್ರಯಿಸಿದನು. ಅವನು ಅವತರಿಸಿದ ಕಾಲದಲ್ಲಿ ಜೈನಧರ್ಮವೂ ಕರ್ಣಾಟಕದಲ್ಲಿ ಪ್ರಬಲವಾಗಿ ವ್ಯಾಪಿಸಿತ್ತು. ವರ್ಣಾಶ್ರಮಧರ್ಮಗಳನ್ನೂ, ಯಜ್ಞಯಾಗಾದಿ ಕರ್ಮಗಳನ್ನೂ ಪುರಸ್ಕರಿಸುವ ಬ್ರಾಹ್ಮಣರೊಡನೆಯೂ ಅಹಿಂಸಾವ್ರತವನ್ನಾಚರಿಸುವ ಜೈನರೊಡನೆಯೂ ಅವನು ಬಾಳಿ ಬದುಕಿ ವೀರಶೈವ ಧರ್ಮವನ್ನು ಉದ್ಧರಿಸುವ ಗುರುತರವಾದ ಹೊಣೆಯನ್ನು ಹೊತ್ತಿದ್ದನು. ಮನವಚನ ಕಾಯಗಳಲ್ಲೂ ಸರ್ವಜೀವಿಗಳಿಗೆ ಲೇಸನ್ನೇ ಬಯಸುವ ವಿಶಾಲ ಧರ್ಮವನ್ನು ಅವನು ಆಚರಿಸಿ ಜಗತ್ತಿಗೆ ಸಾರಿದನು. ದಯವೇ ಧರ್ಮದ ಮೂಲವೆಂಬ ಉದಾತ್ತತತ್ತ್ವವನ್ನು ಮಾನವಲೋಕಕ್ಕೆ ಸಾರಿದನು. ಮೃದುವಚನವೇ ಸಕಲ ಜಪತಪಗಳೆಂಬ ಉದಾರವಾದ ಆಶಯವನ್ನು ಸರ್ವರ ಹೃದಯದಲ್ಲಿ ಬಿತ್ತಿದನು. ವಿಶ್ವಪ್ರೇಮ, ಸದ್ವರ್ತನೆ, ವಿನಯಗಳೇ ಪರಮಾತ್ಮನ ಒಲುಮೆಯ ಹಾದಿ ಎಂಬುದನ್ನು ಸರ್ವರಿಗೂ ಮನವರಿಕೆ ಮಾಡಿದನು. ಅಂಗಗುಣಗಳಾದ ವೈಷಮ್ಯ ವೈವಿಧ್ಯಗಳನ್ನು ದೂರಮಾಡಿ, ಲಿಂಗಗುಣಗಳಾದ ಸಮತೆ ಏಕರೂಪತೆಗಳನ್ನು ಸರ್ವರಲ್ಲಿಯೂ ನೆಲೆಗೊಳಿಸಿದನು. ಜೈನಧರ್ಮದ ಅಹಿಂಸಾಪ್ರಿಯತೆಯನ್ನೂ, ಬ್ರಾಹ್ಮಣರ ಬ್ರಾಹ್ಮೀ

ಸ್ಥಿತಿಯನ್ನೂ, ವೀರಶೈವಧರ್ಮದಲ್ಲಿ ಸಮರಸವಾಗಿ ಹೊಂದಿಸಿ ಅದರ ಉತ್ಕೃಷ್ಟತೆಯನ್ನು ಎತ್ತಿ ಹಿಡಿದನು.

ಭಗವಂತನು ಸಾಕಾರನೂ ನಿರಾಕಾರನೂ ಆಗಿರುವನೆಂಬು ದನ್ನೂ. ಅವನ ನಿರಾಕಾರಸ್ಥಿತಿಯ ಪೂರ್ಣ ಪರಿಚಯಮಾಡಿಸಿ ಕೊಡಲಿಕ್ಕಾಗಿ ಅವನೇ ಸಾಕಾರರೂಪವನ್ನು ಧರಿಸಿ, ಗುರು ಜಂಗಮರೂಪದಿಂದ ಸಂಚರಿಸುತ್ತಿರುವನೆಂಬುದನ್ನೂ ಅಣ್ಣನು ಮನಗಂಡನು. ಇಲ್ಲಿ ನಿರಾಕಾರವೆಂದರೆ ಪರಮಾತ್ಮನ ಅವ್ಯಕ್ತ ಸ್ಥಿತಿ. ಅವ್ಯಕ್ತದ ಉಪಾಸನೆ ಸಾಮಾನ್ಯ ಮಾನವರಿಗೆ ಸಾಧ್ಯ ವಾಗದು. “ಅವ್ಯಕ್ತಾ ಹಿ ಗತಿರ್ದುಃಖಂ ದೇಹವದ್ಭಿರವಾಪ್ಯತೇ” ಎಂದು ಗೀತೆಯಲ್ಲಿ ಭಗವಂತನು ಇದನ್ನು ಸ್ಪಷ್ಟಪಡಿಸಿದ್ದಾನೆ. ತನ್ನ ಅವ್ಯಕ್ತಸ್ಥಿತಿಯನ್ನು ತಿಳಿಸಲಿಕ್ಕಾಗಿ ತಾನೇ ವ್ಯಕ್ತರೂಪದಿಂದ ಅವತರಿಸುವುದು ಪರಮಾತ್ಮನ ಸ್ವಭಾವ. ಹೀಗೆ ಅವನು ಅವ್ಯಕ್ತವಾಗಿ ಸರ್ವ ಮಾನವರ ಹೃದಯದಲ್ಲೂ ಕರಿಯು ಕನ್ನಡಿ ಯೊಳಗಡಗಿದಂತೆ ಅಡಗಿದ್ದಾನೆ. ಕನ್ನೆಯ ಸ್ನೇಹದಂತೆಯೂ, ಉದಕದೊಳಗೆ ಬಚ್ಚಿಟ್ಟ ಬಯಕೆಯ ಕಿಚ್ಚಿನಂತೆಯೂ, ಶಶಿಯೊಳ ಗಣ ರಸದ ರುಚಿಯಂತೆಯೂ, ಪುಷ್ಪದೊಳಗಣ ಪರಿಮಳ ದಂತೆಯೂ ಅವನು ನಮ್ಮೊಳಗೆ ಗೋಪ್ಯವಾಗಿ ನೆಲಸಿರುವನೆಂದು ಅಣ್ಣನೂ ಹೇಳಿದ್ದಾನೆ. “ಬೀಜೇ ಯಥಾಂಕುರಸ್ಸಿದ್ಧಃ ತಥಾತ್ಮನಿ ಶಿವಃ ಸ್ಥಿತಃ” ಎಂದು ರೇಣುಕಾಚಾರ್ಯರು ಅಗಸ್ತ್ಯಮಹರ್ಷಿ ಗಳಿಗೆ ಉಪದೇಶಿಸುವಾಗ ಇದೇ ಅಂಶವನ್ನು ಬಹಳ ಹಿಂದೆಯೇ ಸ್ಪಷ್ಟಪಡಿಸಿದ್ದಾರೆ. ‘ಅಕ್ಷರಾಣಾಂ ಅಕಾರೋऽಸ್ಮಿ’ ಎಂದು ಭಗ ವದ್ಗೀತೆಯೂ ಸಹ ಎಲ್ಲಾ ಅಕ್ಷರಗಳಲ್ಲೂ ಅಕಾರವಿರುವಂತೆ, ಅಕ್ಷರಸ್ವರೂಪರಾದ ಎಲ್ಲಾ ಜೀವರಲ್ಲಿಯೂ ಪರಮಾತ್ಮನು ಸೂತ್ರದಂತೆ ಒಂದೇ ವಿಧವಾಗಿ ನೆಲಸಿರುವನೆಂದು ಹೇಳಿದೆ.

"ಅಂಗುಷ್ಠಮಾತ್ರಃ ಪುರುಷೋ ಜ್ಯೋತಿರಿವಾಧೂಮಕಃ । ಮಧ್ಯ ಆತ್ಮನಿ ತಿಷ್ಠತಿ" ಎಂದು ಕಠೋಪನಿಷತ್ತು ಹೃದಯದಲ್ಲಿ ಅಂಗುಷ್ಠ ಪರಿಮಿತವಾದ ಚೈತನ್ಯವು ಜ್ಯೋತಿಯಾಗಿ ಪ್ರಕಾಶಿಸುತ್ತಿರುವುದೆಂದು ತಿಳಿಸುತ್ತದೆ. ಆದ್ದರಿಂದ ಬಸವಣ್ಣನು ತನ್ನ ಹೃದಯದಲ್ಲಿ ನೆಲಸಿದ್ದ ಮಹಾಪ್ರಕಾಶವನ್ನು ಕಂಡು ಅದರಲ್ಲಿ ಸಮರಸವಾಗಿ ಬೆರೆತು ತನ್ನ ಎಲ್ಲಾ ದುಃಖಗಳನ್ನೂ ಪೂರ್ಣವಾಗಿ ಬಗೆಹರಿಸಿಕೊಳ್ಳುವ ದಿವ್ಯವಾದ ಆದರ್ಶವನ್ನು ತನ್ನ ಮುಂದಿಟ್ಟುಕೊಂಡು ಅದರ ಸಾಧನೆಗಾಗಿ ತನ್ನ ಜೀವನವನ್ನೇ ಮೀಸಲಾಗಿಟ್ಟನು. ಸರ್ವ ಹೃದಯಗಳಲ್ಲಿ ಸಮವಾಗಿ ನೆಲಸಿರುವ ಚಿತ್ಪ್ರಕಾಶವನ್ನು ಪೂರ್ಣವಾಗಿ ಅನುಭವಿಸುವುದೇ ಅವನ ಜೀವನದ ಧ್ಯೇಯವಾಗಿತ್ತು. ಇದರ ಸಾಧನೆಗಾಗಿ ಪರಮಾತ್ಮನ ವ್ಯಕ್ತರೂಪಗಳನ್ನು ಅವನು ಮನಃಪೂರ್ವಕವಾಗಿ ದೃಢನಿಷ್ಠೆಯಿಂದ ನಂಬಿದ್ದನು. ಈ ವ್ಯಕ್ತರೂಪಗಳಲ್ಲಿ ಕೆಲವರು ಪರಮಾತ್ಮನ ಅವ್ಯಕ್ತಸ್ಥಿತಿಯನ್ನು ಉಪದೇಶಿಸುವವರು. ಇಂತಹವರನ್ನು ಗುರುಗಳೆಂದೂ, ಆರಾಧ್ಯರೆಂದೂ, ಆಚಾರ್ಯರೆಂದೂ ಅಣ್ಣನು ಭಾವಿಸಿ ಗೌರವಿಸಿದನು. ಆದರೆ ಕೆಲವರು ಆ ಸ್ಥಿತಿಯನ್ನು ಆಚರಣೆಯ ಮೂಲಕ ತೋರಿಸುತ್ತಿದ್ದರು. ಇಂತಹವರನ್ನು ಅಣ್ಣನು ಜಂಗಮರೆಂದೂ, ಷಟ್ಸ್ಥಲ ಬ್ರಹ್ಮಿಗಳೆಂದೂ ಭಾವಿಸಿ ಗೌರವಿಸಿದನು.

ಲಿಂಗತತ್ವವನ್ನು ಗುರುಜಂಗಮರಿಬ್ಬರೂ ತಿಳಿದವರೇ ಆಗಿರುವರು. ಅವರಿಬ್ಬರಲ್ಲಿ ಗುರುವು ಸಾಮಾನ್ಯ ಜನರಿಗೆ ಅವರ ಹೃದಯದಲ್ಲೇ ಅಡಗಿರುವ ಚಿತ್ಪ್ರಕಾಶವನ್ನು ಹೊರಕ್ಕೆ ತಂದು ಇಷ್ಟಲಿಂಗವೆಂಬ ಪ್ರಿಯವಾದ ರೂಪದಿಂದ ಅನುಗ್ರಹಿಸುವನು. ಶಿವನು ಜೀವರಿಗೆ ಭಕ್ತಿಮಾರ್ಗವನ್ನು ಉಪದೇಶಿಸುತ್ತ, ತನ್ನ

ದರ್ಶನಸ್ಪರ್ಶಗಳಿಂದ ಅವರಲ್ಲಿ ಭಕ್ತಿಯನ್ನು ಹುಟ್ಟಿಸಿ, ಅವರ ದೃಷ್ಟಿಯನ್ನು ಪ್ರಪಂಚದಿಂದ ಪರಮಾತ್ಮನ ಕಡೆಗೆ ತಿರುಗಿಸುವನು: ಮಾನವನಿಗೆ ವಿಷಯಾಭಿಲಾಷೆಯನ್ನು ತೊರೆಸಿ ನಿತ್ಯಾನಂದದ ಪರಿಚಯ ಮಾಡಿಸುವನು; ಅವನನ್ನು ಕ್ಷಣಿಕ ಸುಖದಿಂದ ಆನಂದಸಾಗರದ ಕಡೆಗೆ ಒಯ್ಯುವನು. ವಿಷಯಸುಖದಲ್ಲಿ ಮೈ ಮರೆತಿರುವ ಪಶುಸದೃಶನಾದ ಜೀವನು ಗುರೂಪದೇಶದಿಂದ ಹೀಗೆ ನಿರ್ಮಲಹೃದಯನೂ ಸಾತ್ತ್ವಿಕನೂ ಆಗಿ ಭಕ್ತನೆನಿಸುವನು. ಈ ರೀತಿಯಲ್ಲಿ ಗುರುವು ಭಕ್ತಿಪಂಥವನ್ನು ಉಪದೇಶಿಸಿ ತೋರಿಸಿದರೆ, ಜಂಗಮನು ತನ್ನ ನಿರಭಿಮಾನದ ಆಚರಣೆಯ ಮೂಲಕ ತೋರಿಸುವನು. ಜಂಗಮನೆಂದರೆ ನಿರಭಿಮಾನದ ನಿರಂಜನ ಮೂರ್ತಿ; ಎಲ್ಲಾ ಬಗೆಯ ಆಶೆ ಆಕಾಂಕ್ಷೆಗಳನ್ನು ಪೂರ್ಣವಾಗಿ ತೊರೆದು ಲೋಕಹಿತಾರ್ಥವಾಗಿ ಸಂಚರಿಸುವ ವಿಶ್ವಪ್ರೇಮಿ. ಲೋಕದಲ್ಲಿ ಸಂಚರಿಸುತ್ತಿದ್ದರೂ ಲೋಕದ ಆಸಕ್ತಿಯಿಂದ ದೂರನಾಗಿ ನಿರ್ಲಿಪ್ತನೂ ಪೂರ್ಣಕಾಮನೂ ಆಗಿ ಜಂಗಮನು ತನ್ನ ನಡೆವಳಿಕೆಯಿಂದಲೇ ಭಕ್ತರಿಗೆ ದಿವ್ಯೋಪದೇಶ ಮಾಡುವನು. ಹೀಗೆ ಗುರುಜಂಗಮರಿಬ್ಬರನ್ನೂ ಸಮಾನದೃಷ್ಟಿಯಿಂದ ಉಪಚರಿಸುವುದು ಭಕ್ತನ ಕರ್ತವ್ಯವೆಂಬ ದಿವ್ಯ ಆದರ್ಶವನ್ನು ಬಸವಣ್ಣನು ಮಾನವರಿಗೆ ಆಚರಿಸಿ ತಿಳಿಸಿದ್ದಾನೆ. ಇವರಿಬ್ಬರೂ ಶಿವತತ್ತ್ವವನ್ನು ತಿಳಿದು ಶಿವನೇ ಆಗಿದ್ದರೂ, ಇವರಲ್ಲಿ ಗುರುವು ಶಿವನ ಲೀಲಾವಸ್ಥೆಯನ್ನೂ, ಜಂಗಮನು ಶಿವನ ಕೇವಲಾವಸ್ಥೆಯನ್ನೂ ವ್ಯಕ್ತಿರೂಪದಿಂದ ಪ್ರತಿನಿಧಿಸುತ್ತ, ಭಕ್ತನ ಸಾರ್ವತ್ರಿಕ ಹಿತವನ್ನು ಸಾಧಿಸುತ್ತಿರುವರು. ರೇಣುಕಾಚಾರ್ಯ, ಮರುಳಾರಾಧ್ಯ, ವಿಶ್ವಾರಾಧ್ಯ, ಪಂಡಿತಾರಾಧ್ಯ, ಎಂಬ ನಾಲ್ವರು ಗುರುಗಳೂ ಏಕೋರಾಮಾರಾಧ್ಯರೆಂಬ ಜಂಗಮರೂ ಬಹಳ ಹಿಂದೆಯೇ ಆವ

ತರಿಸಿ ವೀರಶೈವ ಧರ್ಮವನ್ನು ಜಗತ್ತಿನಲ್ಲಿ ಪ್ರಚಾರಮಾಡಿದ್ದರು. ಅವರು ಸ್ಥಾಪಿಸಿದ ಮಠಗಳಲ್ಲಿ ಅವರ ಅನುಯಾಯಿಗಳು ಗುರು ಪೀಠಗಳಲ್ಲೂ ಜಂಗಮಪೀಠದಲ್ಲೂ ನೆಲಸಿ ತಮ್ಮ ದಿವ್ಯಜ್ಞಾನ ವನ್ನು ಭಕ್ತರಿಗೆ ಉಪದೇಶಿಸುತ್ತಲಿದ್ದರು. ಅಣ್ಣನು ಈ ಪ್ರಾಚೀನ ಸಂಪ್ರದಾಯುವನ್ನು ಅನುಸರಿಸಿಕೊಂಡು ಬಂದು ಅದನ್ನು ಮತ್ತಷ್ಟು ಬೆಳಕಿಗೆ ತಂದನು. ಅವನು ಹಾಗೆ ಪ್ರೋತ್ಸಾಹ ನೀಡಿದ್ದರಿಂದಲೇ ವೀರಶೈವಧರ್ಮವು ವಿಶೇಷವಾದ ವ್ಯಾಪ್ತಿಯನ್ನು ಪಡೆಯಿತು.

ಈ ಕಾರ್ಯದಲ್ಲಿ ಅಲ್ಲಮಪ್ರಭುವಿನಂತಹ ಜಂಗಮನ ನೆರವೂ ಅಣ್ಣನಿಗೆ ದೊರೆಯಿತು. ಅಲ್ಲಮಪ್ರಭುವು ಪರಮಾತ್ಮನ ಚಿತ್ ಸ್ವರೂಪನಾಗಿ ಚಿತ್ಪ್ರಕಾಶದ ಅನುಭವವನ್ನು ಸರ್ವರಿಗೂ ಮಾಡಿ ಸಲಿಕ್ಕಾಗಿ ಕರ್ಣಾಟಕದ ಎಲ್ಲಾ ಭಾಗಗಳಲ್ಲಿಯೂ ನಿರಂಜನನಾಗಿ ಸಂಚರಿಸಿದ ಜಂಗಮಮೂರ್ತಿ. ಅವನು ಆಕಾಶಸ್ವರೂಪನಾದ್ದ ರಿಂದ ಜೀವಭಾವದ ಹಂಗಿಲ್ಲದೆ ಆತ್ಮಾರ್ಪಣಪೂರ್ವಕವಾಗಿ ಪರಮಾತ್ಮನಿಗೆ ಶರಣಾಗತನಾಗಿ ಶಿವಭಾವದಿಂದಲೇ ವ್ಯವಹರಿಸಿದ ಪಾವನಮೂರ್ತಿ. ತನ್ನ ಹೃದಯದೊಳಗೆ ಗುಪ್ತವಾಗಿ ಅಡಗಿದ್ದ ಗುಹೇಶ್ವರನ ಪೂರ್ಣಾನುಭವವನ್ನು ಪಡೆದು ಭಕ್ತರಿಗೆ ತಾನು ಅಲ್ಲಮನೆಂದು ಕಾಣಿಸಿಕೊಳ್ಳದೆ, ಗುಹೇಶ್ವರನ ಶರಣನೆಂದೇ ಕಾಣಿಸಿಕೊಳ್ಳುತ್ತಿದ್ದನು. ಹೀಗೆ ವ್ಯಕ್ತಿತ್ವವನ್ನು ತೊರೆದು ಶಿವ ಭಾವವನ್ನು ಆಚರಿಸಿ ತೋರಿಸುತ್ತ—ಭಕ್ತರನ್ನು ಉದ್ಧರಿಸಿದ ಅಲ್ಲಮಪ್ರಭುವು ನಿರಭಿಮಾನದಿಂದ ಶೂನ್ಯಸ್ಥಿತಿಯಲ್ಲಿದ್ದು ಸನಾತನ ವಾದ ಶೂನ್ಯಪೀಠವನ್ನಲಂಕರಿಸಿದ್ದನು. ಬಸವಣ್ಣನು ಗುರು ಪೀಠದವರೊಡನೆಯೂ ಶೂನ್ಯಪೀಠದವರೊಡನೆಯೂ ಸಮ ಭಾವದಿಂದ ಸಹಕರಿಸುತ್ತ ಇಬ್ಬರನ್ನೂ ಶಿವಸ್ವರೂಪರೆಂದು ಉಪ

ಚರಿಸುತ್ತ, ಭಕ್ತಿಗೌರವಗಳಿಂದ ಆದರಿಸುತ್ತಿದ್ದನು. ಭಕ್ತನಿಗೆ ಭಕ್ತಿಯನ್ನು ಹುಟ್ಟಿಸಲಿಕ್ಕೂ ಬೆಳೆಸಲಿಕ್ಕೂ ಎಲ್ಲಾ ಕಾಲಗಳಲ್ಲಿಯೂ ಅವಶ್ಯವಾಗಿ ಗುರುಜಂಗಮರಿಬ್ಬರೂ ಬೇಕಾಗಿರುವುದರಿಂದಲೂ, ವೀರಶೈವಧರ್ಮವನ್ನು ಮೊದಲಿಗೆ ಪ್ರಚಾರಮಾಡಿದ ಆಚಾರ್ಯ ರಲ್ಲೂ ಸಹ ಗುರುಜಂಗಮರಿಬ್ಬರೂ ಸಮರಸವಾಗಿ ಕಲೆತು ಭಕ್ತರನ್ನು ಉದ್ಧರಿಸುವ ಸಂಪ್ರದಾಯವು ರೂಢಿಯಲ್ಲಿದ್ದು ದರಿಂದಲೂ ಅಣ್ಣನು ಇಬ್ಬರನ್ನೂ ಸಮಾನದೃಷ್ಟಿಯಿಂದ ಕಂಡು ಗೌರವಿಸುವುದೇ ತನ್ನ ಧರ್ಮವೆಂಬ ದಿವ್ಯ ಆದರ್ಶವನ್ನು ನುಡಿದು ನಡೆದು ತೋರಿಸಿದನು. ಅವನ ಈ ಬಗೆಯ ಸೇವೆಯಿಂದಲೇ ಗುರುಜಂಗಮರ ಮಠಗಳು ಕರ್ಣಾಟಕದಲ್ಲಿ ಹೇರಳವಾಗಿ ನೆಲಸಿ ಸಮರಸಭಾವದಿಂದಲೂ ಸೌಹಾರ್ದದಿಂದಲೂ ಸಮಾಜದ ಸೇವೆ ಮಾಡಲು ಅವಕಾಶವಾಯಿತು. ಹೀಗೆ ಗುರುಜಂಗಮರ ಸಮನ್ವಯ ಸಹಕಾರಗಳಿಂದಲೇ ಭಕ್ತನು ಉದ್ಧಾರವಾಗಬೇಕಾಗಿದೆ. ಭಕ್ತನ ಪ್ರಗತಿ ಇಬ್ಬರನ್ನೂ ಅವಲಂಬಿಸಿರುವುದರಿಂದಲೂ, ಇಬ್ಬರಿಗೂ ಬೇರೆ ಬೇರೆ ಕಾರ್ಯಗಳಿರುವುದರಿಂದಲೂ, ಅದನ್ನು ಇಬ್ಬರೂ ಒಟ್ಟಿಗೆ ಕಲೆತು ಮಾಡಬೇಕಾಗಿರುವುದರಿಂದಲೂ, ವೀರ ಶೈವ ಧರ್ಮವು ಆಚಾರ್ಯರ ಕಾಲದಿಂದಾರಂಭಿಸಿ, ಶರಣರ ಕಾಲ ವನ್ನೊಳಗೊಂಡು, ಇಂದಿಗೂ ಅವರಿಬ್ಬರ ಆವಶ್ಯಕತೆಯನ್ನು ಎತ್ತಿ ಹಿಡಿದಿದೆ. ದೀಕ್ಷೆಯೇ ಮೊದಲಾದ ಎಲ್ಲಾ ಕರ್ಮಗಳಲ್ಲೂ ಅವರಿಬ್ಬರೂ ಒಮ್ಮನದಿಂದ ಒಂದೆಡೆ ಕಲೆತು ಭಕ್ತನನ್ನು ಅನುಗ್ರಹಿಸುವ ಪದ್ಧತಿ ವೀರಶೈವಧರ್ಮದಲ್ಲಿ ಪ್ರಾಚೀನಕಾಲದಿಂದಲೂ ಬೆಳೆದುಬಂದಿದೆ. ಹಾಗೆ ಅವರಿಬ್ಬರೂ ಏಕಭಾವನೆಯಿಂದ ಕಲೆಯದಿದ್ದರೆ, ಅವರು ಗುರುಜಂಗಮರೆನಿಸಿಕೊಳ್ಳಲು ಅರ್ಹರಾಗ ಲಾರರು. ಪರಮಶಿವನ ಲೀಲಾಕೈವಲ್ಯಗಳನ್ನು ಪ್ರತಿನಿಧಿಸಲು

ಅವರು ಅನರ್ಹರೆನಿಸುವರು. ಒಂದೇ ಸದ್ವಸ್ತು ಈ ಎರಡು ರೂಪಗಳಿಂದಲೂ ಮಾನವನ ಹಿತವನ್ನು ಸಾಧಿಸಬೇಕಾಗಿರುವು ದರಿಂದ, ಇವರಿಬ್ಬರೂ ತಮ್ಮ ಪ್ರತ್ಯೇಕತೆಯನ್ನು ಮರೆತು, ಒಂದೆಡೆ ಕಲೆತು ಮಾನವನ ಹಿತವನ್ನು ಚಿಂತಿಸಬೇಕೆಂಬ ದಿವ್ಯ ದರ್ಶನವನ್ನು ಅಣ್ಣನು ತನ್ನ ಆಚರಣೆಯಿಂದ ತೋರಿಸಿದ್ದಾನೆ. ಇದು ಅವಶ್ಯವಾಗಿ ವೀರಶೈವಧರ್ಮದ ನಾಯಕರಾದ ಗುರುಗಳೂ ಜಂಗಮರೂ ಗಮನಿಸಬೇಕಾದ ಅಂಶ. ಇದರಲ್ಲಿಯೇ ಮಾನವ ಕಲ್ಯಾಣವಡಗಿದೆ.

ಹೊಲಬುಗೆಟ್ಟ ಶಿಶು ತನ್ನ ತಾಯನರಸುವಂತೆ ಅಣ್ಣನು ಗುರು ಜಂಗಮರ ಸಂಗವನ್ನು ನಿರಂತರವೂ ಬಯಸುತ್ತಿದ್ದನು. ತನ್ನ ದೇಹೇಂದ್ರಿಯಗಳನ್ನೂ ಸಕಲೈಶ್ವರ್ಯವನ್ನೂ ಅವರ ಸೇವೆಗಾಗಿಯೇ ಪರಮಾತ್ಮನು ಅನುಗ್ರಹಿಸಿರುವನೆಂದು ಅಣ್ಣನು ದೃಢವಾಗಿ ನಂಬಿದ್ದನು. ಅವನ ಕಾಲಕ್ಕೆ ಹಿಂದೆಯೇ ಗುರು ಜಂಗಮರಿದ್ದುದನ್ನು ಅವನು ಮನಗಂಡಿದ್ದನು. ಇದೂ ಅಲ್ಲದೆ ಜಂಗಮರು ಶಿವಧರ್ಮವನ್ನು ಪೂರ್ಣವಾಗಿ ಅರಿತು ಆಚರಿಸುತ್ತ ಅದರ ಪ್ರಸಾರಕ್ಕಾಗಿಯೇ ಲೋಕದಲ್ಲಿ ಸಂಚರಿಸುತ್ತಲೂ ಇದ್ದರು. ಬಸವಣ್ಣನು ಸತ್ಯಶುದ್ಧ ಕಾಯಕದಿಂದಲೂ, ತನ್ನ ವಿಹಿತವಾದ ನಡೆನುಡಿಗಳಿಂದಲೂ, ಅಂತರಂಗ ಬಹಿರಂಗ ಶುದ್ಧಿಗಳಿಂದಲೂ ಗುರುಜಂಗಮರ ಧರ್ಮಬೋಧೆ ಮತ್ತು ಪ್ರಚಾರಗಳಿಗೆ ಒಂದು ಹೊಸ ಕಳೆಯನ್ನೂ ದಿವ್ಯಸ್ಫೂರ್ತಿಯನ್ನೂ ನವಚೈತನ್ಯವನ್ನೂ ನೀಡಿದನು. ಜನರ ಮೂಢನಂಬಿಕೆ, ಅವಿಚಾರಶ್ರದ್ಧೆಗಳನ್ನು ಹೊರದೂಡಿ, ವಿವೇಕಪೂರ್ವಕವಾದ ಆತ್ಮವಿಶ್ವಾಸವನ್ನು ಅವರ ಹೃದಯದಲ್ಲಿ ಹುಟ್ಟಿಸಿದನು. ಅಂತರಂಗಶುದ್ಧಿಯೇ ಪರಮಾತ್ಮ ನನ್ನು ಒಲಿಸುವ ಋಜುಮಾರ್ಗವೆಂದು ಲೋಕಕ್ಕೆ ಸಾರಿದನು.

ಅವನ ಒಲುಮೆಯನ್ನು ಪಡೆಯಲು ವರ್ಣಾಶ್ರಮಧರ್ಮಗಳು ಅಡಚಣೆಯಾಗಲಾರವೆಂದು ಸಾರಿದನು. ಹೆಣ್ಣಾಗಲೀ, ಶೂದ್ರನಾಗಲೀ, ಎಲ್ಲರೂ ಪರಮಾತ್ಮನ ಸಾಕ್ಷಾತ್ಕಾರಕ್ಕೆ ಪೂರ್ಣಾಧಿಕಾರಿಗಳಿರುವರೆಂಬ ದಿವ್ಯ ಆದರ್ಶವನ್ನು ಮಾನವನ ಹೃದಯದಲ್ಲಿ ಬಿತ್ತಿದನು. ಪಂಚಮಹಾಪಾತಕಗಳನ್ನು ಮಾಡಿದವನಾದರೂ ತನ್ನ ಪಾಪ ಕೃತ್ಯಗಳಿಗೆ ಮನಸಾರೆ ವಿಷಾದಪಟ್ಟರೆ, ಪಶ್ಚಾತ್ತಾಪದಿಂದ ಶುದ್ಧನಾಗಿ ಭಗವಂತನ ಕೃಪೆಗೆ ಪಾತ್ರನಾಗುವನೆಂಬ ಉದಾರವಾದ ಆಶಯವನ್ನು ಅವನು ಜಗತ್ತಿಗೆ ಸಾರಿದನು. ಶರಣಾಗತಿಯಿಂದ ಮಾನವನ ಸರ್ವಪಾಪಗಳೂ ನಾಶವಾಗುವುವೆಂಬ ಸದ್ಭಾವನೆಯನ್ನು ಜಗತ್ತಿನಲ್ಲಿ ಹರಡಿದನು. ಹೀಗೆ ಹೊಟ್ಟೆಬಟ್ಟೆ ಸಮಸ್ಯೆಗಳನ್ನು ಬಿಡಿಸುವುದರಲ್ಲಿಯೇ ನಿರತನಾದ ಮಾನವನಿಗೆ ದಿವ್ಯಜ್ಯೋತಿಯ ದರ್ಶನಮಾಡಿಸಿ, ನಿತ್ಯಸುಖದೆಡೆಗೆ ಒಯ್ಯುತ್ತಿದ್ದುದರಿಂದ, ಬಸವಣ್ಣನು ಸರ್ವರಿಗೆ ಪ್ರಿಯನೂ, ಮಾನ್ಯನೂ, ಆಪ್ತ ಹಿತೈಷಿಯೂ ಆಗಿ ಅಣ್ಣನೆನಿಸಿರುವನು. ಅವನು ತಾಯಿಯಂತೆ ನಮ್ಮ ದೈಹಿಕಪ್ರಗತಿಗೂ, ಸದ್ಭಕ್ತನಂತೆ ಮಾನಸಿಕ–ಬೌದ್ಧಿಕ–ಆಧ್ಯಾತ್ಮಿಕ ಪ್ರಗತಿಗೂ ಸತತವೂ ಶ್ರಮಿಸಿದವನಾದ್ದರಿಂದ ಅವನು ನಮಗೆ ಅಣ್ಣನಂತೆ ಪೂಜ್ಯನೆನಿಸಿದ್ದಾನೆ.

ಮಾನವರೆಲ್ಲರೂ ಒಂದೇ ದಿವ್ಯಜ್ಯೋತಿಯಿಂದ ಬಂದು ಅದರ ಆಶ್ರಯದಲ್ಲಿಯೇ ಬಾಳುತ್ತ ಕೊನೆಗೆ ಅದರಲ್ಲಿಯೇ ಲೀನರಾಗುವರೆಂಬ ಉದಾತ್ತವಾದ ಆದರ್ಶವನ್ನು ಅವನು ಮನಗಂಡಿದ್ದನು. ತನ್ನ ಜೀವಿತದ ಅಲ್ಪಾವಧಿಯಲ್ಲಿ ಇದನ್ನು ಆಚರಿಸುತ್ತ ಇದರಂತೆ ಎಲ್ಲರೂ ನಡೆಯುವ ಸದವಕಾಶವನ್ನೂ, ಸತ್ಪ್ರೇರಣೆಯನ್ನೂ, ಸದ್ಬೋಧೆಯನ್ನೂ ಎಲ್ಲರಿಗೂ ಅನುಗ್ರಹಿಸಿದನು. ಕತ್ತಲೆಯಲ್ಲಿ ಪರದಾಡುವ ಜನತೆಯನ್ನು ಬೆಳಕಿನ ಕಡೆಗೆ ಸೆಳೆದು, ಅವರ ಮನಸ್ಸಿ

ಉದ್ಬುದ್ಧವಾಗುವಂತೆಯೂ ಬುದ್ಧಿಯು ನಿರ್ಮಲವಾಗು ವಂತೆಯೂ ಅವನು ಮಾರ್ಪಡಿಸಿದನು. ಅವ್ಯವಸ್ಥಿತವಾದ ನಾನಾ ಮಾರ್ಗಗಳನ್ನು ತೊರೆದು, ವ್ಯವಸ್ಥಿತವೂ ಬ್ರಹ್ಮನಿಷ್ಠವೂ ಆದ ಏಕೈಕಮಾರ್ಗದಲ್ಲಿ ಮಾನವನ ಬುದ್ಧಿ ಪ್ರಸರಿಸುವಂತೆ ಮಾಡಿದನು. ಮನಸ್ಸು ಪ್ರಪಂಚದ ಸುಖದುಃಖಗಳನ್ನು ಮೋಹಿಸುವುದಕ್ಕಿಂತಲೂ ಹೃದಯದ ಜ್ಞಾನರತ್ನವನ್ನು ಅಲಂಕರಿ ಸುವುದೇ ಅದಕ್ಕೆ ದಿವ್ಯವಾದ ಶೃಂಗಾರವೆಂದೂ, ಜ್ಞಾನಾನಂದ ಸ್ವರೂಪನಾದ ಪರಮಾತ್ಮನ ಧ್ಯಾನದಿಂದ ಮನಸ್ಸು ಜ್ಞಾನಾನಂದ ಮಯವಾಗಿ ಪರಿಣಮಿಸುವುದೆಂದೂ ದಿವ್ಯವಾದ ಆದರ್ಶವನ್ನು ಅವನು ಆ ಮನಸ್ಸಿನ ಮುಂದೆ ಇಟ್ಟಿರುವನು. ವಿಷಯಲೋಲ ವಾದ ಈ ಮನವು ನಿತ್ಯಾನಂದಸಾಗರದಲ್ಲಿ ಮುಳುಗುವ ದಿವ್ಯ ಸಂಘಟನೆಯನ್ನು ಅಣ್ಣನು ನಿರ್ಮಿಸಿರುವನು. ಹೀಗೆ ದೇಹ ವನ್ನು ಗುರುಹಿರಿಯರ ಸೇವೆಗೂ, ಮನವನ್ನು ಲಿಂಗದ ನೆನಹಿಗೂ, ಧನವನ್ನು ಜಂಗಮತೃಪ್ತಿಗೂ ಸರ್ವಜೀವಿಗಳ ಮೇಲ್ಮೆಗೂ ನಿರಭಿಮಾನದಿಂದ ಉಪಯೋಗಿಸಿ ಮಾನವನು ಧನ್ಯನಾಗುವ ಸುಯೋಗವನ್ನು ಅಣ್ಣನು ಸರ್ವರಿಗೂ ನಿಷ್ಪಕ್ಷ ಪಾತದೃಷ್ಟಿಯಿಂದ ಕರುಣಿಸಿರುವನು. ಸಂಶಯ ಭ್ರಾಂತಿಗಳಲ್ಲಿ ಸಿಲುಕಿ ನರಳುತ್ತಿರುವ ಜೀವನಿಗೆ ಅವನು ಸನ್ಮಾರ್ಗವನ್ನು ತೋರಿಸುವ ದಿವ್ಯಜ್ಯೋತಿಯಾಗಿ ಇಂದಿಗೂ ಎಲ್ಲರ ಹೃದಯ ದಲ್ಲೂ ನೆಲಸಿ, ಜೀವರನ್ನು ವಿಹಿತಮಾರ್ಗದಲ್ಲಿ ನಡೆಸುತ್ತ ಲಿರುವನು. ಆದ್ದರಿಂದಲೇ ಅವನು ಮಾನವನನ್ನು ಪರಮಾತ್ಮನ ಲೀಲಾವಿನೋದಕ್ಕೆ ಭೂಮಿಕೆಯನ್ನಾಗಿ ಏರ್ಪಡಿಸಿರುವನು. ಅವನು ತನ್ನನ್ನು ಪರಮಾತ್ಮನ ವಿಹಾರಕ್ಕೆ ರಂಗಮಂಟಪವ ನ್ನಾಗಿಯೂ, ಅವನ ಜಯಗಾನದ ವಿನೋದಕ್ಕೆ ತನ್ನನ್ನು ತಂಬೂರಿ

ಯನ್ನಾಗಿಯೂ ಉಪಯೋಗಿಸಿಕೊಂಡು ತನ್ನನ್ನು ಅನುಗ್ರಹಿಸು ವಂತೆ ನಿರಂತರವೂ ಭಕ್ತಿಯಿಂದ ಬೇಡಿಕೊಳ್ಳುತ್ತಾನೆ.

"ಎನ್ನ ದೇಹವ ದಂಡಿಗೆಯ ಮಾಡಯ್ಯ. ಎನ್ನ ಶಿರವ ಸೋರೆಯಬುರುಡೆಯ ಮಾಡಯ್ಯ. ಎನ್ನ ನರವ ತಂತಿಯ ಮಾಡಯ್ಯ. ಎನ್ನ ಬೆರಳ ಕಡ್ಡಿಯ ಮಾಡಯ್ಯ. ಮೂವತ್ತೆರಡು ರಾಗವ ಹಾಡಯ್ಯ. ಎನ್ನ ಹೃದಯದಲೊತ್ತಿ ಜಯಗಾನವ ಪಾಡಯ್ಯ." ಹೀಗೆ ಅವನು ತನ್ನ ಜೀವನವನ್ನು ಪರಮಾತ್ಮನ ರತಿಸುಖಕ್ಕೆ ಮೀಸಲಾಗಿಟ್ಟಿದ್ದನು. ದೇಹವು ಶಿವನನ್ನು ಪೂಜಿಸುವ ಕೃಪೆಗೂ, ಮನವು ಅವನನ್ನು ನೆನೆಯುವುದಕ್ಕೂ, ಧನವು ಅವನ ರತಿಸುಖಕ್ಕೂ ಮುಡುಪಾಗಿದ್ದುವು. ಹೀಗೆ ತನುಮನಧನ ಗಳೆಲ್ಲವನ್ನೂ ಭಗವತ್ಸೇವೆಗೆ ವಿನಿಯೋಗಿಸಿ ಪಾವನನಾಗಿದ್ದ ಬಸವಣ್ಣನು ಸರ್ವ ಮಾನವರ ಶ್ರೇಯೋಽಭಿವೃದ್ಧಿಗಳಿಗೆ ಆದರ್ಶವಾದ ದಿವ್ಯೋಪದೇಶವನ್ನು ನುಡಿದು ನಡೆದು ತೋರಿಸಿ ಅಣ್ಣನಂತೆ ಜಗತ್ತಿಗೆ ಮಾರ್ಗದರ್ಶಕನಾಗಿದ್ದಾನೆ.

ಅಣ್ಣನ ಆತ್ಮಶೋಧನೆ

ಇಂತಹ ಪವಿತ್ರವಾದ ಆದರ್ಶವನ್ನು ಜನತೆಗೆ ತೋರಿಸಲಿಕ್ಕೆ ಅವತರಿಸಿದ ಮಹಾತ್ಮನೇ ಬಸವಣ್ಣನು. ಕರ್ಣಾಟಕದಲ್ಲಿ ಹನ್ನೆರಡನೆಯ ಶತಮಾನದಲ್ಲಿ ಜನರು ಧರ್ಮಬಾಹಿರರಾಗಿ ದ್ದುದರಿಂದ, ಭಕ್ತಿಯ ದೈನಂದಿನಾಚರಣೆಯಿಂದ ಶಿವಧರ್ಮ ವನ್ನು ಜೀರ್ಣೋದ್ಧಾರಮಾಡಲಿಕ್ಕಾಗಿ ಪರಮೇಶ್ವರನು ತನ್ನ ವಾಹನವಾಗಿದ್ದ ವೃಷಭಯೋಗೀಶ್ವರನಿಗೆ ಆಜ್ಞಾಪಿಸುವನು. ಅವನು ಕರ್ಣಾಟಕದಲ್ಲಿ ಇಂಗಳೇಶ್ವರದ ಬಾಗೇವಾಡಿಯೆಂಬ ಗ್ರಾಮದಲ್ಲಿ ಮಾದಿರಾಜ ಮಾದಲಾಂಬಿಕೆಯರ ಮಗನಾಗಿ

ಅವತರಿಸುವನು. ಮಗುವು ಜನಿಸಿದಾಕ್ಷಣವೇ ಪರಮೇಶ್ವರನು ಸಂಗಮನಾಥನೆಂಬ ಹೆಸರಿನಿಂದ ಗುರುವಾಗಿ ಬಂದು ಮಗುವಿಗೆ ಲಿಂಗಧಾರಣಮಾಡಿ ಹೋಗುವನು. ಮಗುವಿಗೆ ಬಸವನೆಂದು ನಾಮಕರಣವೂ ಆಗುವುದು. ಮುಂದೆ ಬಸವಣ್ಣನಿಗೆ ಉಪನಯನಕರ್ಮವನ್ನೇರ್ಪಡಿಸಿದಾಗ, ಅವನು ಅದಕ್ಕೆ ಬೇಸರಗೊಂಡು, ವೀರಶೈವದೀಕ್ಷೆಯನ್ನು ಮೊಟ್ಟಮೊದಲೇ ಪಡೆದದ್ದರಿಂದ ತನಗೆ ಅನ್ಯಕರ್ಮಾಚರಣೆಯ ಆವಶ್ಯಕತೆ ಇಲ್ಲವೆಂದು ನಿರಾಕರಿಸಿ, ತಂಗಿ ನಾಗಲಾಂಬಿಕೆಯೊಡನೆ ತಂದೆಯ ಮನೆಯನ್ನು ತೊರೆಯುವನು. ಆ ಊರಿನ ಭಕ್ತರು ಅವರಿಬ್ಬರನ್ನೂ ತಮ್ಮ ಮಕ್ಕಳಂತೆ ಆದರಿಸುತ್ತ ತಮ್ಮಲ್ಲಿ ನಿಲ್ಲಿಸಿಕೊಳ್ಳುವರು. ಉಪನಯನಮಹೋತ್ಸವಕ್ಕಾಗಿ ಬಂದಿದ್ದ ಮಾದಲಾಂಬಿಕೆಯ ಸೋದರ ಬಲದೇವಮಂತ್ರಿ ಬಸವಣ್ಣನ ನಿಶ್ಚಲವಾದ ವೀರಶೈವ ಭಕ್ತಿಗೆ ಮೆಚ್ಚಿ ಅವನನ್ನು ಅವತಾರಪುರುಷನೆಂದು ಭಾವಿಸಿ, ತನ್ನ ಮಗಳಾದ ಗಂಗಾಂಬಿಕೆಯನ್ನು ಅವನಿಗೆ ಮದುವೆ ಮಾಡಿದನು. ಈ ವಿವಾಹವಾದನಂತರ ಹೆಂಡತಿ ಸೋದರಿಯರೊಡಗೂಡಿ ಬಸವಣ್ಣನು ಕೂಡಲಸಂಗಮನಾಥನ ದಿವ್ಯ ಕ್ಷೇತ್ರಕ್ಕೆ ತೆರಳುವನು.

ಹೀಗೆ ಬಸವಣ್ಣನು ಕರ್ಮಲತೆಯಂತಿರ್ದ ಬ್ರಾಹ್ಮಣಧರ್ಮವನ್ನು ತೊರೆದು ಸಂಗಮಕ್ಷೇತ್ರದಲ್ಲಿ ಸಂಗಮೇಶ್ವರನ ಸೇವೆಯಲ್ಲಿ ನಿರತನಾಗಿ ಸುಖದಿಂದಿರುವನು. ಆತನಿಗೆ ಶಿವನಲ್ಲಿದ್ದ ಭಕ್ತಿಯು ದಿನದಿನಕ್ಕೂ ಗಳಿಗೆ ಗಳಿಗೆಗೂ ಹೆಚ್ಚುತ್ತ ಬಂದಿತು. ಹೀಗೆ ದಿನಗಳು ಕಳೆಯುತ್ತಿರಲು, ಒಂದು ದಿನ ಬಸವಣ್ಣನು ಭಕ್ತಿಯಿಂದ ಶಿವಪೂಜೆಮಾಡಿ ಪ್ರಸಾದವನ್ನು ಸ್ವೀಕರಿಸಿ, ಧ್ಯಾನಮಗ್ನನಾಗಿ ಯೋಗನಿದ್ರೆಯಲ್ಲಿದ್ದಾಗ ಸಂಗಮನಾಥನು

ಸ್ವಪ್ನದಲ್ಲಿ ಕಾಣಿಸಿಕೊಂಡು, "ಎಲೆ ಮಗನೆ ಬಸವ, ಬಸವಣ್ಣ, ಬಸವದೇವ, ನಿನ್ನಂ ಮಹೀತಳದೊಳ್ ಮೆರೆದಪೆವು. ನೀ ಬಿಜ್ಜಳ ರಾಯನಿಪ್ಪ ಮಂಗಳವಾಡಕ್ಕೆ ಪೋಗು" ಎಂದು ಆಜ್ಞಾಪಿಸು ವನು. ಆದರೆ ಅಣ್ಣನಿಗೆ ಪರಮಾತ್ಮನ ಸೇವೆಯನ್ನು ಬಿಟ್ಟು ಹೊರಡಲು ಮನಸ್ಸಿರಲಿಲ್ಲ. ಆಗ ಅವನು ಸಂಗಮನಾಥನಲ್ಲಿ ಅನನ್ಯಭಕ್ತಿಯಿಂದ ಬೇಡಿಕೊಳ್ಳುವನು. "ದೇವ ದೇವ ಸಂಗ ಕಂಡೈ, ಕೆಟ್ಟೆಂ ಕೆಟ್ಟೆಂ, ತೊಟ್ಟನಿಂತು ಕಣ್ನೋಡದೆ, ಹಣ್ಣ ನೋಡದೆ ಹೋಗೆಂಬರೆ? ಗಗನದಿಂದಿಳಿವಂಗಾಧಾರಮಾಗುತ್ತೆ ತಪ್ಪುವರೆ? ಕಾಳ್ಗಿಚ್ಚಿನಿಂ ಬೇವಂಗೆ ತಂಪಿನ ಸೋನೆಯು ಮಳೆ ಯಾಗುತ್ತೆ ಮಾಣ್ಬರೆ? ಬೆಳದಿಂಗಳೇಕೆ ಬಿಸುಪೇಕೆ? ಅಮೃತ ವೇಕೆ ವಿಷವೇಕೆ? ಬೆಳಗೇಕೆ ತಮವೇಕೆ? ನೀನೇಕೆ ಈ ನುಡಿಯೇಕೆ? ಹೊದ್ದಿದರಂ ಹೋಗೆಂಬರೆ? ನಂಬಿದವರ ಗೋಣಂ ಕೊಯ್ವರೆ? ಶಿಶುವನಿರಿವರೆ? ಪಶುವಂ ಕೊಲುವರೆ? ಎನ್ನಂ ಬಿಡುವರೆ? ಕರುಣೆ ಕರುಣೆ, ಕರುಣಂ ಲೇಸಾಯ್ತು, ಅರ್ಚಿಸಿತಕ್ಕೆ ಫಲವಾಯ್ತು. ಇನ್ನೇನು ಇನ್ನೇನು?" ಎಂದು ಬಸವಣ್ಣನು ಸಂಗಮನಾಥನಲ್ಲಿ ಅನನ್ಯಭಕ್ತಿಯಿಂದ ಮೊರೆ ಯಿಡುವನು. ಮತ್ತೆ ಸ್ವಾಮಿ ಕನಸಿನಲ್ಲಿ ಕಾಣಿಸಿಕೊಂಡು "ಎಲೆ ಮಗನೆ, ಕಂದ, ಎಲೆ ಬಸವ, ನಿನ್ನನಗಲಿ ನಾನಿರಲಾರೆ, ನಿನ್ನೊಡನೆ ನಾನೂ ಬರುವೆನು. ನಿನಗೆ ಇಷ್ಟೊಂದು ಕ್ರೋಧ ವೇಕೆ? ನೀನು ಬಿಜ್ಜಳರಾಯನ ಬಳಿಗೆ ಹೊರಡು" ಎಂದು ಮತ್ತೆ ಸಂತೈಸುವನು. ಅಣ್ಣನು ಎಷ್ಟು ಸಂಕಟಪಟ್ಟರೂ ಫಲ ವಾಗಲಿಲ್ಲ. "ನಡೆಯಯ್ಯ ನಡೆ ಮಗನೆ, ನಡೆ ಕಂದ ಬಸವಣ್ಣ, ಪೊಡವಿಗಧಿಪತಿಯಾಗಿ ಬಾಳೆನ್ನ ಬಸವಣ್ಣ" ಎಂದು ಗುರುವು ಮತ್ತೆ ಸಮಾಧಾನಮಾಡಿ, ಅಣ್ಣನನ್ನು ಕಲ್ಯಾಣಪಟ್ಟಣಕ್ಕೆ

ಹೊರಡಿಸುವನು. ಕೊನೆಗೆ ಅಣ್ಣನು ಮನಸ್ಸಿಲ್ಲದಿದ್ದರೂ ಸಂಗಮನಾಥನ ಆಜ್ಞೆಯಂತೆ ಮಂಗಳವಾಡಕ್ಕೆ ಹೋಗಿ ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಪದವಿಗೆ ಸೇರುವನು. ಸಂಗಮನಾಥನ ಸೇವೆಯಲ್ಲಿ ನಿರತನಾಗಿ ಹೊತ್ತಾರೆ ಎದ್ದು ಅಗ್ಗವಣಿ ಪತ್ರರೆಯ ತಂದು, ಹೊತ್ತುಹೋಗದ ಮುನ್ನ ಶ್ರದ್ಧಾಭಕ್ತಿಗಳಿಂದ ಅರ್ಚಿಸುತ್ತಿರುವಾಗ, ಅಣ್ಣನು ಸಂಗಮನಾಥನಿಗೆ ಮಾಡುತ್ತಿದ್ದ ಮೊರೆ, ಅವನನ್ನು ಬಿಟ್ಟುಬರುವಾಗ ತಾನು ಪಡುವ ವ್ಯಥೆ ಲೋಕದ ಮಾನವರಿಗೆ ಆದರ್ಶವಾದ ದಿವ್ಯ ಬೋಧೆಯಾಗಿದೆ. ಇದು ನಮ್ಮ ಮನವನ್ನು ಕರಗಿಸುತ್ತದೆ.

ಅತ್ತಲಿತ್ತ ಹೋಗದಂತೆ ಹೆಳವನ ಮಾಡಯ್ಯ ತಂದೆ,
ಸುತ್ತಿಸುಳಿದು ನೋಡದಂತೆ ಅಂಧಕನಮಾಡಯ್ಯ ತಂದೆ,
ಮತ್ತೊಂದ ಕೇಳದಂತೆ ಕಿವುಡನ ಮಾಡಯ್ಯ ತಂದೆ,
ನಿಮ್ಮ ಶರಣರ ಪಾದವಲ್ಲದೆ ಅನ್ಯವಿಷಯಕ್ಕೆಳಸದಂತೆ ಇರಿಸು ದೇವ॥

ಎಂದು ಸ್ವಾಮಿಯನ್ನು ಬಸವಣ್ಣನು ಅಂಗಲಾಚಿ ಬೇಡಿಕೊಳ್ಳುತ್ತಿದ್ದನು. ಆದರೂ, ಶಿವನ ಸಂಕಲ್ಪದಂತೆ ಎಲ್ಲಾ ಕಾರ್ಯಗಳೂ ನಡೆಯಬೇಕಾಗಿದ್ದುದರಿಂದ, ಅಣ್ಣನ ಇಚ್ಛೆ ನೆರವೇರದೆ ಅವನು ಸಂಗಮನಾಥನನ್ನು ಬಿಟ್ಟು ತೆರಳಬೇಕಾಯಿತು.

ಪರಮೇಶ್ವರನು ಬಸವಣ್ಣನನ್ನು ಬ್ರಾಹ್ಮಣ ವಂಶದಲ್ಲಿ ಹುಟ್ಟಿಸಿ, ಜೈನರಾಜನ ಆಸ್ಥಾನದಲ್ಲಿ ಮಂತ್ರಿಪದವಿಗೆ ಸೇರಿಸಿ, ವೀರಶೈವಧರ್ಮವನ್ನು ಅವನ ಕಡೆಯಿಂದ ಉದ್ಧರಿಸಿರುವುದು ನಮಗೆ ಆಶ್ಚರ್ಯವಾಗಿ ಕಂಡರೂ, ಅವನಿಗೆ ಇದೊಂದು ಅನಾಯಾಸವಾದ ಲೀಲೆ ಎನಿಸಿರುವುದು. ಅವನಿಗೆ ಜಾತಿ ಮತ ಪಂಥಗಳ ಗೊಂದಲವಿಲ್ಲ. ಅವನ ದೃಷ್ಟಿಯಲ್ಲಿ ಎಲ್ಲಾ ಮತಗಳೂ ತನ್ನಲ್ಲಿಯೇ ಸೇರುವಂತಹ ದಿವ್ಯಸೋಪಾನಗಳು.

ಸರ್ವ ಮತಗಳ ಹಾಗೂ ಸರ್ವ ಧರ್ಮಗಳ ಸಹಿಷ್ಣುತೆ, ಸರ್ವ ಸಮದೃಷ್ಟಿ, ನಿಷ್ಪಕ್ಷಪಾತವರ್ತನೆ ಇವು ಈಶ್ವರನ ಉದಾತ್ತ ಸ್ವಭಾವವೆನಿಸಿವೆ. ಎಲ್ಲಾ ಮತಗಳೂ ಸತ್ಯಾನ್ವೇಷಣದ ಉತ್ತ ಮೋತ್ತಮ ಸಾಧನಗಳು. ಯಾವ ಮತವೂ ಸತ್ಯದಿಂದ ದೂರವಾಗಿಲ್ಲ. ಯಾವನು ಸ್ವಧರ್ಮವನ್ನು ಶ್ರದ್ಧೆಯಿಂದ ಅರಿತು ಆಚರಿಸುವನೋ, ಅವನು ಪರಧರ್ಮವನ್ನು ಎಂದಿಗೂ ದ್ವೇಷಿಸಲಾರನು. ಸರ್ವ ಪ್ರಾಣಿಗಳ ಹಿತವನ್ನು ಬಯಸುವ ವನು ವಿಭಿನ್ನ ಧರ್ಮಗಳ ಸ್ವರೂಪವನ್ನು ಅರಿತು ಅವುಗಳ ಸಾರವನ್ನು ಸ್ವಧರ್ಮದಲ್ಲಿ ಅಳವಡಿಸಿಕೊಂಡು, ಯಾರಿಗೂ ಉದ್ವೇಗವಾಗದಂತೆ, ಹಿತಮಿತಮೃದುವಚನಗಳಲ್ಲಿ ಸತ್ಯ ಧರ್ಮಗಳ ಆಚರಣೆಯನ್ನು ಜನತೆಗೆ ಬೋಧಿಸಬಲ್ಲನು ಎಂಬ ಈ ಬಗೆಯ ದಿವ್ಯ ಆದರ್ಶವನ್ನು ಮಾನವಜನಾಂಗಕ್ಕೆ ತಿಳಿಯ ಪಡಿಸಲಿಕ್ಕಾಗಿ ಪರಮೇಶ್ವರನು ಬಸವಣ್ಣನಿಗೆ ಬ್ರಾಹ್ಮಣ ಜೈನ ಸಂಸ್ಕೃತಿಗಳ ಸಂಪರ್ಕವನ್ನು ಏರ್ಪಡಿಸಿದನು. " ದಯವೇ ಧರ್ಮದ ಮೂಲ", " ಸರ್ವಭೂತ ಹಿತೇ ರತಿಃ", " ಪರೋಪಕಾ ರಾರ್ಥಮಿದಂ ಶರೀರಂ " ಎಂಬ ದಿವ್ಯ ಆದರ್ಶವನ್ನು ಮಾನವನು ಆಚರಿಸಬೇಕಾದರೆ, ಪರಧರ್ಮಗಳಲ್ಲಿ ದ್ವೇಷವಿಲ್ಲದೆ, ಸ್ವಧರ್ಮ ವನ್ನು ಚೆನ್ನಾಗಿ ತಿಳಿದು ಆಚರಿಸುತ್ತಿರಬೇಕು. ಭಿನ್ನ ಭಿನ್ನ ಸ್ವಭಾವದ, ವಿಭಿನ್ನ ಧರ್ಮದ ಜನರೊಂದಿಗೆ ಮಾನವನು ಬಾಳುತ್ತಲಿದ್ದರೆಯೇ ಹೃದಯವೈಶಾಲ್ಯ, ಮನೋನೈರ್ಮಲ್ಯ, ದೃಷ್ಟಿವೈಶಾಲ್ಯಗಳನ್ನು ಪಡೆದು ಸಮಭಾವನೆಯಿಂದಲೂ, ಪುರ ಸ್ಕಾರ ದೃಷ್ಟಿಯಿಂದಲೂ ಸರ್ವರನ್ನೂ ಆತ್ಮೀಯರೆಂದು ಭಾವಿಸಿ ಗೌರವಿಸಬಲ್ಲನು. ಮಾನವನಿಗೆ ಉದಾತ್ತ ವರ್ತನೆ—ಉದಾರ ತೇಜಸ್ಸು ಮತ್ತು ಅವ್ಯಾಜಪ್ರೇಮ ಇವೇ ಮೊದಲಾದ ಸದ್ಗುಣ

ಗಳು ಲಭಿಸಬೇಕಾದರೆ, ಅವನು ವಿಭಿನ್ನ ಧರ್ಮಗಳ ಸಂಪರ್ಕ ದಿಂದ ಉತ್ತಮಸಂಸ್ಕಾರ ಮತ್ತು ಉನ್ನತ ಶಿಕ್ಷಣಗಳನ್ನು ಹೊಂದಿರಬೇಕೆಂಬ ಅಭಿಪ್ರಾಯವನ್ನು ಮಾನವಸಮಾಜಕ್ಕೆ ದೊರಕಿಸಲಿಕ್ಕಾಗಿ ಪರಮೇಶ್ವರನು ಬಸವಣ್ಣನನ್ನು ಗಹನವಾದ ಕಾರ್ಯದಲ್ಲಿ ತೊಡಗಿಸುವನು. ಜಾತಿಯೆಂಬುದು ದೇಹಕ್ಕೆ ಸಂಬಂಧಿಸಿದ್ದೇ ಹೊರತು ಆತ್ಮನಿಗೆ ಸಂಬಂಧಿಸಿದ್ದಲ್ಲ. ಆತ್ಮನಿಗೆ ಹೆಣ್ಣು ಗಂಡು ಎಂಬ ಭೇದವಾಗಲೀ, ವರ್ಣಾಶ್ರಮಗಳ ಭೇದ ವಾಗಲೀ ಅಂಟುವುದಿಲ್ಲ. ಮಾನವರೆಲ್ಲರಲ್ಲೂ ನೆಲಸಿರುವ ಪರಮ ಶಿವನು ಒಬ್ಬನೇ ಆಗಿರುವುದರಿಂದ, ಸರ್ವಭೇದಗಳಿಂದಲೂ ದೂರನಾಗಿ, ಅಭೇದ ದೃಷ್ಟಿಯಿಂದಲೂ, ಮಧುರಬಾಂಧವ್ಯ ದಿಂದಲೂ ಅಭೇದಾನಂದವನ್ನನುಭವಿಸುವುದೇ ಮಾನವಜೀವನದ ಹೆಬ್ಬಯಕೆಯಾಗಿರಬೇಕೆಂಬ ದಿವ್ಯ ಆದರ್ಶವನ್ನು ಬಸವಣ್ಣನ ಜೀವನವು ಮಾನವಹೃದಯದಲ್ಲಿ ನೆಲೆಗೊಳಿಸಿರುವುದು.

ಬಸವಣ್ಣನು ಬಿಜ್ಜಳರಾಯನಲ್ಲಿ ಮಂತ್ರಿಪದವಿಯನ್ನು ಸ್ವೀಕರಿಸಿದ ಮೇಲೆ, ಅವನ ಜೀವನಪಥದಲ್ಲಿ ಅನೇಕ ಎಡರು ತೊಡರುಗಳು ಸಂಭವಿಸುವುದನ್ನೂ, ಆತ್ಮೋನ್ನತಿಯ ದಿವ್ಯ ಪ್ರಭಾವದಿಂದ ಅವುಗಳನ್ನು ಅವನು ದಾಟುವ ಬಗೆಯನ್ನೂ ನಾವು ಕಾಣಬಹುದಾಗಿದೆ. ಅವನ ಜೀವನಚರಿತ್ರೆಯು ಮಾನವರೆಲ್ಲರಿಗೂ ಬೋಧಪ್ರದವೂ ಮಾರ್ಗದರ್ಶಕವೂ ಆಗಿದೆ ನವಯೌವನ ಸುಂದರಿಯರು ಜೊತೆಯಲ್ಲಿ ಇರುವಾಗ್ಗೆ, ಅವನು ಸೌಂದರ್ಯರಸವನ್ನನುಭವಿಸುತ್ತಲಿರುವುದೆ ? ಅಥವಾ ಭಕ್ತಿ ಮಾರ್ಗವನ್ನು ಆಚರಿಸುವುದೆ ? ಹಣೆಯಲ್ಲಿ ವಿಭೂತಿಯನ್ನು ಧರಿಸಿ, ಕರ್ಮಕೋಟಲೆಯನ್ನು ಸುಟ್ಟು, ಪರಮಾತ್ಮನಿಗೆ ಶರಣಾ ಗತನಾಗಿ ಅವನ ಸೇವೆಮಾಡುತ್ತ ವೀರಶೈವಭಕ್ತಿಯನ್ನಾಚರಿಸು

ವುದೆ ? ಯಜ್ಞೋಪವೀತಧಾರಿಯಾಗಿ ಕರ್ಮಾಚರಣೆಯಲ್ಲಿ ನಿರತರಾದ ಜೈನ ಬ್ರಾಹ್ಮಣರ ಜೊತೆಯಲ್ಲಿ ಸೇರಿ ಭಕ್ತಿಯ ವೀರವ್ರತವನ್ನು ತೊರೆಯುವುದೆ ? ಬಾಯಾರಿದವನಿಗೆ ನೀರು ದೊರೆಯದಿದ್ದಾಗಲೂ, ಹಸಿದವನಿಗೆ ಆಹಾರ ದೊರೆಯದಿದ್ದಾಗಲೂ ಒದಗಬಹುದಾದ ಹೃದಯದ ಸಂಕಟಕ್ಕೆ ಒಳಗಾಗಿ ಅಣ್ಣನು ಶಾಂತಿಯಿಲ್ಲದೆ ಬಹಳವಾಗಿ ಒದ್ದಾಡಿರಬೇಕು. ಬಿಜ್ಜಳನ ಆಸ್ಥಾನದಲ್ಲಿ ಮಂತ್ರಿಪದವಿಯಲ್ಲಿ ಇದ್ದ ಅಣ್ಣನು ಸಂಗಮನಾಥನ ಆಜ್ಞೆಯಂತೆ ಗುರುಲಿಂಗಜಂಗಮರ ಸೇವೆಯನ್ನು ನಡೆಸಬೇಕೆ ? ಅಥವಾ ಪ್ರಪಂಚದ ಕಾರ್ಯಗಳನ್ನು ನಿರ್ವಹಿಸಬೇಕೆ ? ಎಂಬ ಅನೇಕ ಬಗೆಯ ವಿಷಮಸಮಸ್ಯೆಗಳು ಸಂಭವಿಸಿರಬೇಕು. ಇಂತಹ ವಿಷಮಪರಿಸ್ಥಿತಿಯಲ್ಲಿ, ಸಮಾಜದ ವ್ಯವಸ್ಥೆಯಲ್ಲಿ ಕಾಣುತ್ತಿದ್ದ ಹೆಚ್ಚುಕಡಮೆಗಳನ್ನೂ, ನ್ಯಾಯಾನ್ಯಾಯಗಳನ್ನೂ ಕಂಡು ಅಣ್ಣನು ಮನಸ್ಸಿನಲ್ಲಿ ನೊಂದಿರಬೇಕು. ವೈದಿಕರೊಡನೆ ತಾನು ಬೆರೆಯಬೇಕೆ ? ಅಥವಾ ಸಾಮಾನ್ಯ ಜನರೊಡನೆ ಸೇರಬೇಕೆ ? ಎಂದು ಅವನು ದೀರ್ಘವಾಗಿ ಆಲೋಚಿಸಿರಬೇಕು. ಆಗ ಉತ್ತಮಕುಲದವರು, ನೀಚಕುಲದವರು ಎಂಬ ಭೇದಭಾವನೆ ಸಮಾಜದಲ್ಲಿ ಪೂರ್ಣವಾಗಿ ವ್ಯಾಪಿಸಿತ್ತು. ಇಂತಹ ದುರವಸ್ಥೆಯಲ್ಲಿ ಅಣ್ಣನು ಭಕ್ತಿಗೇ ಪ್ರಾಧಾನ್ಯವನ್ನು ಕೊಟ್ಟು, ತನಗೆ ಜಾತಿ ಬೇಕಿಲ್ಲವೆಂದೂ ಉತ್ತಮಕುಲದ ಹೆಮ್ಮೆ ಬೇಕಿಲ್ಲವೆಂದೂ ತೀರ್ಮಾನಿಸಿದನು. ಹೀಗೆ ಅವನು ತನ್ನ ದೃಢ ಭಕ್ತಿಯ ಅವಲಂಬನದಿಂದ ಲೋಕವನ್ನೂ ಸಮಾಜವನ್ನೂ ಎದುರಿಸಿ ನಿಲ್ಲುವನು. ಮನುಷ್ಯರೆಲ್ಲರೂ ಉತ್ತಮ ಸಾಧನೆಯಿಂದ ದೇವತ್ವವೆಂಬ ಉನ್ನತಪದವಿಯನ್ನು ಪಡೆಯಬಹುದು ಎಂಬ ದಿವ್ಯ ಆದರ್ಶವನ್ನು ಅಣ್ಣನು ಜಗತ್ತಿಗೆ ತೋರಿಸಿಕೊಡುವನು. ನಂಬಿಕೆ

ಸಂಶಯ, ಜ್ಞಾನ ಅಜ್ಞಾನ, ಉತ್ಸಾಹ ವಿಷಾದ, ಸುಖ ದುಃಖ, ಸ್ತುತಿ ನಿಂದೆ ಮೊದಲಾದ ದ್ವಂದ್ವಯುದ್ಧಗಳಲ್ಲಿ ಅವನು ಸಿಕ್ಕಿ ಹೇಗೆ ತೇರ್ಗಡೆಯಾದನೆಂಬುವನ್ನು ನಾವು ಅವನ ನಿತ್ಯಜೀವನದಲ್ಲಿ ಕಾಣಬಹುದಾಗಿದೆ.

ಅಣ್ಣನು ಸಾಮಾನ್ಯಮಾನವನ ಸರ್ವತೋಮುಖವಾದ ವಿಕಾಸಕ್ಕೆ ಶ್ರಮಿಸಿದವನಾದ್ದರಿಂದ, ಅವನನ್ನು ವಿಶ್ವಪ್ರೇಮಿ ಎಂದೂ, ವಿಶ್ವಭ್ರಾತೃವೆಂದೂ ಮಾನವಸಮಾಜವು ಭಾವಿಸಿದೆ. ವಿಶ್ವವನ್ನೇ ತನ್ನ ಆಧ್ಯಾತ್ಮಕ್ಷೇತ್ರವೆಂದು ಅವನು ಭಾವಿಸಿ, ಸರ್ವರಿಗೂ ಅನ್ವಯಿಸುವಂತೆ ನೈತಿಕ, ಧಾರ್ಮಿಕ ಬೋಧೆಯ ದಿವ್ಯಾಮೃತವನ್ನು ಧಾರೆಯೆರೆದಿರುವನು. ಅವನು ಕರ್ಣಾಟಕದ ಜನತೆಗೆ ಅಚ್ಚುಮೆಚ್ಚಿನವನಾಗಿ ಸುಪರಿಚಿತವಾದ ಭಾಷೆಯಲ್ಲಿ ಉಪದೇಶಮಾಡಿರುವನು. ಮೇಲಾಗಿ ತಾನು ಆಚರಿಸಿ ಅನುಭವಿಸಿದ ತತ್ತ್ವಗಳನ್ನು ಮಾನವಸಮಾಜದ ಹಿತದೃಷ್ಟಿಯಿಂದ ತಿಳಿಭಾಷೆಯಲ್ಲಿ ನುಡಿದಿರುವನು. ತಾನು ನಡೆದದ್ದನ್ನೇ ನುಡಿದು ತೋರಿಸಿರುವನಾದ್ದರಿಂದ, ಅವನ ಮಾತು ಸರ್ವರಿಗೂ ಆದರಣೀಯವೆನಿಸಿದೆ. ಮನೆಯ ಹಿರಿಯಣ್ಣನು ತಮ್ಮಂದಿರನ್ನೂ ತಂಗಿಯರನ್ನೂ ಸಂತೈಸುವಂತೆ ಬಸವಣ್ಣನು ಸರ್ವರ ಆದಿವ್ಯಾಧಿಗಳನ್ನೂ ನಿವಾರಿಸಿ, ದಿವ್ಯೋಪದೇಶದಿಂದಲೂ ಶುದ್ಧವಾದ ಆಚರಣೆಯಿಂದಲೂ ಮಾನವಸಮಾಜವನ್ನು ಉದ್ಧರಿಸಿರುವನಾದ್ದರಿಂದ ಅವನನ್ನು ಅಣ್ಣನೆಂದು ಕರ್ಣಾಟಕವು ಭಾವಿಸಿರುವುದು ಸಮುಚಿತವೂ ವೀರ್ಯವತ್ತರವೂ ಆಗಿದೆ.

ಅವನು ಸಾಮಾನ್ಯಮಾನವನಂತೆ ಜೀವಿಸುತ್ತಿದ್ದರೂ, ದೇಹರಕ್ಷಣೆಯಷ್ಟರಲ್ಲೇ ತೃಪ್ತನಾಗದೆ, ಆತ್ಮವಿಕಾಸದಲ್ಲಿ ಪೂರ್ಣ ಲಕ್ಷ್ಯವಿಟ್ಟು ಅದಕ್ಕಾಗಿ ನಿರಂತರವೂ ಪರಮಾತ್ಮನಲ್ಲಿ ಮೊರೆ ಇಡುವ

ದಿವ್ಯವಾದ ಆದರ್ಶವನ್ನು ನಮ್ಮ ಎದುರಿಗೆ ಇಟ್ಟಿರುವನು. ಅವನು ಯಾವಾಗಲೂ ಪರಮಾತ್ಮನನ್ನು ಕರೆಯುತ್ತ, ಅವನಿಗಾಗಿ ಒರಲುತ್ತ, ಅವನನ್ನೇ ಅಂಗಲಾಚಿ ಬೇಡಿಕೊಳ್ಳುವ ರೀತಿ ಎಲ್ಲರ ಮನವನ್ನೂ ಕೆರಳಿಸುವಂತಿದೆ.

"ಅಯ್ಯಾ ಅಯ್ಯಾ ಎಂದು ಕರೆಯುತ್ತಲಿದ್ದೇನೆ. ಅಯ್ಯಾ ಅಯ್ಯಾ ಎಂದು ಒರಲುತ್ತಲಿದ್ದೇನೆ. ಓ ಎನ್ನಲಾಗದೆ ಅಯ್ಯಾ! ಆವಾಗಳೂ ನಿಮ್ಮ ಕರೆವುತ್ತಲಿದ್ದೇನೆ—ಓ ಎನ್ನದೆ ಮೌನವೇ ದೇವ?"

"ನೀವು ಹುಟ್ಟಿಸಿದಲ್ಲಿ ಹುಟ್ಟಿ ನೀ ಕೊಂದಲ್ಲಿ ಸಾಯದೆ ಎನ್ನ ವಶವೇ ಅಯ್ಯಾ. ನೀವಿರಿಸಿದಲ್ಲಿ ಇರದೆ ಎನ್ನ ವಶವೇ ಅಯ್ಯಾ! ಅಕಟಕಟಾ, ಎನ್ನವನೆನ್ನವನೆನ್ನಯ್ಯ ಕೂಡಲಸಂಗಮ ದೇವಯ್ಯ?"

"ದುರ್ವ್ಯಸನಿ ದುರಾಚಾರಿ ಎಂದೆನಿಸದಿರಯ್ಯಾ, ಎನ್ನ ಲಿಂಗವ್ಯಸನಿ, ಜಂಗಮಪ್ರೇಮಿ ಎಂದೆನಿಸಯ್ಯಾ—ಅವಶ್ಯಮನುಭೋಕ್ತವ್ಯಂ ಎಂದೆನಿಸದಿರಯ್ಯಾ! ಕೂಡಲಸಂಗಮದೇವ, ಸೆರಗೊಡ್ಡಿ ಬೇಡುವೆನು."

"ನನ್ನನ್ನು ನಿನ್ನವನೆಂದು ಭಾವಿಸಿದರೆ, ನಾನು ಬದುಕುವೆನು. ನೀನು ಮಾಡಿಸಿದಂತೆ ಮಾಡುವ ಸೇವಕ ನಾನು. ನನ್ನನ್ನು ದುರ್ಮಾರ್ಗಗಳಿಗೆ ಸಿಲುಕಿಸದೆ, ಗುರುಜಂಗಮರ ಸೇವೆ ಮತ್ತು ಲಿಂಗಧ್ಯಾನಗಳಲ್ಲಿ ನೇಮಿಸು" ಎಂದು ಬಸವಣ್ಣನು ಶಿವನಿಗೆ ಅಂಗಲಾಚಿ ಬೇಡಿಕೊಳ್ಳುವನು.

ಪರಮಾತ್ಮನ ಅನುಗ್ರಹದಿಂದ ಮಹಾತ್ಮರಿಗೆ ಹಿಂದಿನ ಜನ್ಮದ ಕುಂದುಕೊರತೆಗಳು ಗೋಚರವಾಗುವುದುಂಟು. ಅಣ್ಣನೂ ಸಹ ತನ್ನ ಹಿಂದಿನ ಜನ್ಮದ ಲೋಪದೋಷಗಳನ್ನು ದುಃಖದಿಂದ ಮುಚ್ಚುಮರೆಯಿಲ್ಲದೆ ಹೇಳಿಕೊಂಡಿದ್ದಾನೆ. "ಎನಗೆ ಭವಬಂಧನ

ಭವಪಾಶವಾದ ಕಾರಣವೇನಯ್ಯ. ಹಿಂದಣ ಜನ್ಮದಲ್ಲಿ ಲಿಂಗವ ಮರೆದೆನಾಗಿ, ಹಿಂದಣ ಸಿರಿಯಲ್ಲಿ ಜಂಗಮವ ಜರಿದೆನಾಗಿ, ಅರಿದಡೀ ಸಂಸಾರವ ಹೊದ್ದಲೀವೆನೆ, ಕೂಡಲಸಂಗಮದೇವ." ಹೀಗೆ ಮಾನವರೆಲ್ಲರಿಗೂ ಇಂದಿನ ದುಃಖ ಹಿಂದಿನ ಮರೆವಿನಿಂದ ಸಂಭವಿಸಿರುವುದಾಗಿ ಖಚಿತವಾದ ಸೂಚನೆ ಇಲ್ಲಿ ದೊರೆಯುತ್ತದೆ. ಒಂದು ನಿಮಿಷದ ಉದಾಸೀನವು ನಮ್ಮ ಜೀವನವನ್ನು ಪೂರ್ಣವಾಗಿ ನಾಶಮಾಡಬಲ್ಲದು. ಆದ್ದರಿಂದ ಮಾನವನು ಯಾವತ್ತೂ ಎಚ್ಚರವಿದ್ದು, ಪರಮಾತ್ಮನ ಧ್ಯಾನಮಾಡುತ್ತ, ಗುರುಹಿರಿಯರ ಸೇವೆಯಲ್ಲಿ ನಿರತನಾಗಿದ್ದು, ಲೋಕದ ಜನರನ್ನು ಆತ್ಮೀಯತೆಯಿಂದ ಪ್ರೀತಿಸಿ ಗೌರವಿಸುತ್ತ ಭವಪಾಶದಿಂದ ಪಾರಾಗುವ ಸುಯೋಗವನ್ನು ಅಣ್ಣನು ತನ್ನ ಸ್ವಂತ ದೃಷ್ಟಾಂತದಿಂದ ಸೂಚಿಸಿದ್ದಾನೆ.

ಬಹಳ ಹಿಂದಿನ ಕಾಲದಿಂದ ತನಗೂ ಪರಮಾತ್ಮನಿಗೂ ಸಂಬಂಧವಿರುವುದೆಂದು ಅಣ್ಣನು ಭಾವಿಸುತ್ತಾನೆ. "ಅಂದಿಂಗೆ ಎಳೆಯ ನೀನು, ಹಳೆಯ ನಾನು." "ಆಯಾ ಕಾಲಕ್ಕೆ ಎಳೆಯವನು ನೀನು-ಅಂದರೆ ನೀನು ನಿತ್ಯಸುಂದರನಿರುವೆ; ಎಲ್ಲಾ ಕಾಲಗಳಲ್ಲಿಯೂ ನೂತನವಾಗಿಯೇ ಇರುವೆ. ಹಾಗೆಯೇ ನಾನೂ ಸಹ ನಿನ್ನಷ್ಟೇ ಪುರಾತನನಾಗಿದ್ದೇನೆ. ನಾನೂ ನೀನೂ ಒಂದು ಗಳಿಗೆಯೂ ಬೇರೆಯಾಗಲಾರೆವು. ಇಬ್ಬರೂ ಯಾವತ್ತೂ ಕೂಡಿಯೇ ಇದ್ದೆವು. ನೀನು ಮಹಾಲಿಂಗಮೂರ್ತಿಯಾದರೆ, ನಾನು ನಿನ್ನ ಚಿತ್‌ಶಕ್ತಿಯಾಗಿ ನಿನಗೆ ಅಂಗನಾಗಿರುವೆನು. ನೀನು ನಿರಾಕಾರನಾಗಿದ್ದಲ್ಲಿ, ನಾನು ನಿನಗೆ ಜ್ಞಾನವೆಂಬ ವಾಹನವಾಗಿದ್ದೆನು. ನೀನು ನಾಟ್ಯಕ್ಕೆ ನಿಂತಾಗ, ನಾನು ಚೈತನ್ಯವೆಂಬ ವಾಹನವಾಗಿದ್ದೆನು. ನೀನು ಸಾಕಾರನಾದಾಗ, ನಾನು ವೃಷಭವೆಂಬ ವಾಹನವಾಗಿದ್ದೆನು. ನೀನು ಭವವನ್ನು ಪರಿಹರಿಸಲು

ಜಂಗಮವೇಷದಿಂದ ಬಂದಾಗ, ನಾನು ಭಕ್ತನೆಂಬ ವಾಹ
ವಾಗಿರುವೆನು." ಹೀಗೆ ಎಲ್ಲಾ ಜನ್ಮಗಳಲ್ಲೂ ತಾನು ಶಿವನೊಡ
ಕೂಡಿಯೇ ಇದ್ದುದನ್ನು ಅಣ್ಣನು ಸ್ಮರಿಸಿಕೊಳ್ಳುತ್ತಾನೆ. ಏಳೇಳ
ಜನ್ಮದಲ್ಲೂ ಶಿವನಿಗೇ ಭಕ್ತನಾಗಿ ಅವನ ಪ್ರಸಾದಕ್ಕೇ ಬಾಯ್ದೆ
ಯುವುದಾಗಿ ಅಣ್ಣ ಹೇಳಿದ್ದಾನೆ. ಮೊದಲನೆಯ ಜನ್ಮದ
ಶಿಲಾದನೆಂಬ ಗಣೇಶ್ವರನಾಗಿ ತಾನು ಪರಮಾತ್ಮನಿಗೆ ಭೃ
ನಾಗಿಯೂ, ಎರಡನೆಯ ಜನ್ಮದಲ್ಲಿ ಸ್ಕಂದನಾಗಿ ಅವ
ಪ್ರೇಮದ ಸೇವಕನಾಗಿಯೂ ಮೂರನೆಯ ಜನ್ಮದ
ನೀಲಲೋಹಿತನಾಗಿದ್ದು ಅವನ ಲೀಲಾವಿನೋದಮೂತಿ
ಯಾಗಿಯೂ, ಆಮೇಲೆ ಮನೋಹರನೆನಿಸಿ ಅವನಿಗೆ ಮನ
ಪ್ರೇರಕನಾಗಿಯೂ, ಅನಂತರ ಕಾಲಲೋಚನನೆಂಬ ಗಣೇಶ್ವ
ನಾಗಿದ್ದು ಅವನಿಗೆ ಸರ್ವಸಂಹಾರಕಾರ್ಯಗಳಿಗೆ ಉಪಯು
ನಾಗಿಯೂ, ಆರನೆಯ ಜನ್ಮದಲ್ಲಿ ವೃಷಭನೆಂಬ ಗಣೇಶ್ವ
ನಾಗಿದ್ದು ಅವನಿಗೆ ವಾಹನನಾಗಿಯೂ, ಏಳನೆಯ ಜನ
ದಲ್ಲಿ ಬಸವನೆಂದು ಅವತರಿಸಿ ಅವನ ಪ್ರಸಾದಭೋಗಿಯಾ
ಅವನೊಕ್ಕು ಮಿಕ್ಕುದಕ್ಕೆ ಯೋಗ್ಯನಾಗಲೆಂದು ತನ್ನನ್ನು ಇರಿ
ಕೊಂಡಿರುವುದಾಗಿಯೂ ಅಣ್ಣನು ಹೇಳುತ್ತಾನೆ. "ಎಲ್ಲ
ಜನ್ಮಗಳಲ್ಲಿಯೂ ನಿಮ್ಮ ಪ್ರಸಾದಕ್ಕಲ್ಲದೆ ಬಾಯ್ದೆರೆಯೆನ
ನೀವು ಬರಿಸಿದ ಭವಾಂತರದಲ್ಲಿ ನಾನು ಬರುತ್ತಿರುವೆನ
ನಿಮ್ಮನ್ನು ನೆನೆನೆನೆದು ನಾನು ಸುಖಿಯಾಗಿ ಬದುಕಿದೆನ
ನಿನಗೂ ನನಗೂ ಹಿಂದಿನಿಂದಲೂ ಸಂಬಂಧ ಬೆಳೆದುಬಂದಿ
ನಿನ್ನ ಇಚ್ಛೆಯಂತೆಯೇ ನಾನು ಹುಟ್ಟಿ ಬಂದಿರುವೆನು. ಹುಟ್ಟಿಂದ
ಲೋಕದಲ್ಲಿ ಹುಟ್ಟಿಸಿ ಇಳಿಯಬಿಟ್ಟರೆ, ಲೋಕದ ಜನ
ನಿಮ್ಮನ್ನು ನೋಡಿ ನಗುವರು. ನೀನೇ ನನಗೆ ಪ್ರಪಂಚದ

ಸಂಸಾರ, ಮದುವೆ ಸಂಬಂಧಗಳನ್ನು ಕಲ್ಪಿಸಿ, ಅದರಲ್ಲಿ ನನ್ನನ್ನು ಸಿಲುಕಿಸಿ ಈಗ ಕೈಬಿಟ್ಟರೆ ನಾನು ಬದುಕುವುದು ಹೇಗೆ? ನಾನು ನಿನ್ನೊಡನೆ ಸೇರುವ ಬಗೆ ಹೇಗೆ? ನೀನೊಡ್ಡಿದ ಮಾಯೆಯನ್ನು ಜಯಿಸಲು ನಾನು ಶಕ್ತನಲ್ಲ. ನೀನೇ ಒಲಿದು ನನ್ನನ್ನು ನಿನ್ನವನನ್ನಾಗಿ ಮಾಡಿಕೊಂಡು ಉದ್ಧರಿಸಬೇಕು" ಎಂದು ಪರಮಾತ್ಮನಲ್ಲಿ ದೃಢಭಕ್ತಿಯಿಂದ ಅಣ್ಣನು ಮೊರೆಯಿಡುತ್ತಾನೆ.

"ಅಯ್ಯಾ ನೀ ಮಾಡಲಾದ ಜಗತ್ತು, ನೀ ಮಾಡಲಾದ ಮದುವೆ, ನೀ ಮಾಡಲಾದ ಸಂಸಾರ, ನೀ ಮಾಡಲಾದ ದುಃಖ, ನೀ ಬಿಡಿಸಿದರೆ ಬಿಟ್ಟಿತ್ತು ತಾಮಸವಯ್ಯ. ನಾನೀ ಮಾಯೆಯ ಗೆದ್ದೆನೆಂಬ ಹಮ್ಮಿದೇಕೆ?" ಎಂದು ಪರಮಾತ್ಮನಿಗೆ ಅಣ್ಣನು ಮೊರೆಯಿಡುವನು. ಎಲ್ಲಾ ವಿಧದಲ್ಲಿಯೂ ಅವನೇ ತನ್ನ ರಕ್ಷಕ ನೆಂಬ ಅರಿವು ಕಣ್ದೆರೆಯುವುದು. ಆದರೆ, ತನಗೆ ಅಸಾಧ್ಯವಾದ ಅಜ್ಞಾನಾಂಧಕಾರವು ಕವಿದಿರುವುದರಿಂದ, ಅವನನ್ನು ಮರೆಯುವ ಸನ್ನಿವೇಶ ಸಂಭವಿಸಿದೆಯಾದರೂ, ಅಣ್ಣನ ಮನವು ಶಿವನನ್ನೇ ಎಡೆಬಿಡದೆ ನೆನೆಯುತ್ತಿರುವುದು.

"ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯ, ಎನ್ನವನು ಕಾಯಯ್ಯಾ ಕಾಯಯ್ಯಾ, ಹುರುಳಿಲ್ಲ ಹುರುಳಿಲ್ಲ, ಕೂಡಲ ಸಂಗಮದೇವ." ಎಂದು ತನ್ನನ್ನು ಪರಮಾತ್ಮನ ಸೇವೆಗೆ ಉಪಯೋಗಿಸಿಕೊಂಡು ಅನುಗ್ರಹಿಸುವಂತೆ ಅಣ್ಣನು ಬೇಡಿ ಕೊಳ್ಳುತ್ತಾನೆ. ಪ್ರಪಂಚದ ಸುಖದುಃಖಗಳಿಗೂ ಸಂಪತ್ತು ವಿಪತ್ತುಗಳಿಗೂ ಸಿಕ್ಕಿಕೊಂಡಿದ್ದುದರಿಂದ ಯಾವಾಗ ಇಲ್ಲಿಂದ ಪಾರಾದೆನೆಂಬ ತವಕವೂ ಅವನಿಗೆ ಬಹಳವಾಗಿತ್ತು. ಗುರು ಲಿಂಗಜಂಗಮಸೇವೆಯಲ್ಲಿ ಲೋಪವೆಲ್ಲಿ ಬರುವುದೋ, ತಾನು ಮಾಡುವ ಭಕ್ತಿಯಲ್ಲಿ ದೋಷವೆಲ್ಲಿ ಸೇರುವುದೋ ಎಂಬ

ಶಂಕೆಯೂ ಬಾಧಿಸುತ್ತಿತ್ತು. ಶಿವಧರ್ಮವನ್ನು ಉದ್ಧರಿಸ
ಬೇಕೆಂಬ ಆತುರವೂ ಅವನನ್ನು ಕಾಡಿಸುತ್ತಿತ್ತು. ಸಂಸಾರದಲ್ಲಿ
ಸಿಕ್ಕಿದ ಅಣ್ಣನ ಜೀವನಚರಿತ್ರೆ ಪ್ರಬಲವಾದೊಂದು ಮನೋ
ಯುದ್ಧವೇ ಆಗಿತ್ತು. ಹುಟ್ಟೆಂದು ಲೋಕದಲ್ಲಿ ಹುಟ್ಟಿಸಿ ಈಗ
ತನ್ನನ್ನು ಬೇರೆ ಮಾಡುವುದು ಶಿವನಿಗೆ ತಕ್ಕುದಲ್ಲವೆಂದೂ
ಈಗಲೂ ತನ್ನನ್ನು ಅವನ ಜೊತೆಯಲ್ಲಿ ಅವನ ಸೇವೆಗೆ
ನೇಮಿಸಿಕೊಂಡು ತನ್ನನ್ನು ಅನುಗ್ರಹಿಸಬೇಕೆಂದೂ, ವಿನಯದಿಂದ
ಅಣ್ಣನು ಬೇಡಿಕೊಳ್ಳುವನು. ಆದರೂ ಪರಮಾತ್ಮನಿಂದ ಅಗಲಿ
ಬಂದಿದ್ದು, ಪುನಃ ಅವನೊಡನೆ ಬೆರೆಯುವುದಕ್ಕೆ ಭಕ್ತಿಯೇ
ಯುಕ್ತವಾದ ಮಾರ್ಗವೆಂದು ಅಣ್ಣನು ಭಕ್ತಿಯನ್ನಾಶ್ರಯಿಸಿ
ದನು. ಈಶ್ವರನು ಭಕ್ತಿಗೆ ಒಲಿಯುವಂತೆ ಬೇರೆ ಕರ್ಮಗಳಿಗೆ
ಒಲಿಯುವುದಿಲ್ಲವೆಂದು ಅವನ ದೃಢವಿಶ್ವಾಸ. ಯಜ್ಞದಲ್ಲಿ
ಪ್ರಾಣಿಹಿಂಸೆ ಆಗುವುದರಿಂದ, 'ಸರ್ವಂ ಶಿವಮಯಂ ಜಗತ್'
ಎಂದು ತಿಳಿದ ಅಣ್ಣನು ವೇದಶಾಸ್ತ್ರಗಳು ಯಜ್ಞಾದಿ
ಕರ್ಮಗಳನ್ನು ಬೋಧಿಸುವುದರಿಂದ ಈಶ್ವರನಿಗೆ ದೂರವೆಂದು
ಭಾವಿಸಿದ್ದನು. "ಶಾಸ್ತ್ರ ಘನವೆಂಬೆನೆ, ಕರ್ಮವ ಭಜಿಸುತ್ತಿದೆ.
ವೇದ ಘನವೆಂಬೆನೆ, ಪ್ರಾಣಿವಧೆಯ ಹೇಳುತ್ತಿದೆ. ಸ್ಮೃತಿ
ಘನವೆಂಬೆನೆ, ಮುಂದಿಟ್ಟು ಅರಸುತ್ತಿದೆ. ಅಲ್ಲೆಲ್ಲಿಯೂ ನೀವಿಲ್ಲದ
ಕಾರಣ, ತ್ರಿವಿಧದಾಸೋಹದಲ್ಲಲ್ಲದೆ ಕಾಣಬಾರದು ಕೂಡಲ
ಸಂಗಮದೇವ." ವೇದಶಾಸ್ತ್ರಗಳಲ್ಲಿ ಪರಮಾತ್ಮನಿಲ್ಲದ ಕಾರಣ
ಗುರುಲಿಂಗಜಂಗಮ ದಾಸೋಹದಲ್ಲಿಯೇ ಅವನನ್ನು ಕಾಣ
ಬೇಕೆಂಬುದು ಅಣ್ಣನ ಮತ. "ಗೀತವ ಹಾಡಿದೊಡೇನು ?
ಶಾಸ್ತ್ರಪುರಾಣಗಳ ಕೇಳಿದೊಡೇನು ? ವೇದವೇದಾಂತವ ನೋಡಿ
ದೊಡೇನು ? ಮನ ಒಲಿದು ಲಿಂಗಜಂಗಮವ ಪೂಜಿಸಲರಿಯ

ದವರು ? ಎಲ್ಲರಲ್ಲಿ ಅನುಭಾವಿಯಾದಡೇನು ? ಭಕ್ತಿ ಇಲ್ಲದವರನೊಲ್ಲ ಕೂಡಲಸಂಗಮದೇವ." "ನಾದಪ್ರಿಯನೂ ಅಲ್ಲ. ವೇದಪ್ರಿಯನೂ ಅಲ್ಲ. ಭಕ್ತಿಪ್ರಿಯ, ನಮ್ಮ ಕೂಡಲಸಂಗಮದೇವ."

ಹೀಗೆ ಭಕ್ತಿಯಿಂದಲೇ ಪರಮಾತ್ಮನನ್ನು ಮೆಚ್ಚಿಸಲಿಕ್ಕೆ ಅಣ್ಣನು ಉದ್ಯುಕ್ತನಾದನು. ಈ ಭಕ್ತಿಮಾರ್ಗವೂ ದುರ್ಗಮವಾದುದೆಂಬುದನ್ನು ಅವನು ತಿಳಿದಿದ್ದನು. ಬರಿದಾದ ಬಾಯಿಮಾತಿನಲ್ಲಿ ಭಕ್ತಿ ಎಂದರಾಗದು. ಸರ್ವವನ್ನೂ ಶಿವಾರ್ಪಣ ಮಾಡುವ ಬುದ್ಧಿ ಹುಟ್ಟುವುದು ಸುಲಭವಲ್ಲ. ಇದು ತನ್ನದು, ತಾನು ಕೊಡುತ್ತೇನೆ ಎಂಬ ಭಾವನೆ ಭಕ್ತಿಮಾರ್ಗಕ್ಕೆ ಸಲ್ಲದು. ಒಂದು ಕ್ಷಣ ಕಾಲವಾದರೂ ಏಕಾಗ್ರಚಿತ್ತತೆಯಿಂದ ಈಶ್ವರನನ್ನು ನೆನೆದರೆ ಅವನು ಒಲಿಯಬಹುದು. ಆದರೆ ಸಕಲವನ್ನು ಶಿವಾರ್ಪಣ ಮಾಡುವ ಬುದ್ಧಿಯು ಒಮ್ಮೆ ಹುಟ್ಟಿದರೆ, ಒಂದು ಕ್ಷಣವೂ ಸ್ಥಿರವಾಗಿ ನಿಲ್ಲಲಾರದು. ಆದರೆ ಈಶ್ವರನು ನಟನೆ ಡಂಭಾಚಾರಗಳಿಗೆ ಒಲಿಯುವವನಲ್ಲ. ಅಂತರಂಗಶುದ್ಧಿಯಿಲ್ಲದವನಿಗೆ ಅವನು ಎಂದಿಗೂ ಒಲಿಯನು.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗಶುದ್ಧಿ, ಇದೇ ನಮ್ಮ ಕೂಡಲಸಂಗಮದೇವನನೊಲಿಸುವ ಪರಿ." ಪರಮಾತ್ಮನನ್ನು ಒಲಿಸಲಿಕ್ಕೆ ದೃಢಭಕ್ತಿ ಬೇಕು. ಆ ಭಕ್ತಿ ಬೆಳೆಯಬೇಕಾದರೆ, ಒಳಹೊರಶುದ್ಧಿ ಅವಶ್ಯಕ. ಗುರುಲಿಂಗಜಂಗಮರನ್ನು ಅರ್ಚಿಸುವಾಗ ಭಕ್ತನಿಗೆ ತನು ಕರಗದಿದ್ದರೆ, ಆ ಮಜ್ಜನವು ಶಿವನಿಗೆ ಸಲ್ಲದು.

ಹಾಗೆಯೇ ಮನಕರಗದವರಿಂದ ಶಿವನು ಪುಷ್ಪವನೊಲ್ಲನು ; ಸದ್ವರ್ತನೆಯಿಲ್ಲದವರಿಂದ ಗಂಧಾಕ್ಷತೆಯನೊಲ್ಲನು ; ಅರಿವು ಕಣ್ದೆರೆಯದವರಿಂದ ಅವನು ಆರತಿಯನೊಲ್ಲನು ; ಭಾವ ಶುದ್ಧವಿಲ್ಲದವರಿಂದ ಧೂಪವನೊಲ್ಲನು ; ತೃಪ್ತಿಯಿಲ್ಲದವರಿಂದ ನೈವೇದ್ಯವನೊಲ್ಲನು ; ತ್ರಿಕರಣಶುದ್ಧವಿಲ್ಲದವರಿಂದ ತಾಂಬೂಲವನೊಲ್ಲನು. ಹೃದಯಶುದ್ಧಿಯಿಲ್ಲದವರಲ್ಲಿ ಅವನು ಇರಲೂ ಒಲ್ಲನು. ಅಘೋರತಪಸ್ಸನ್ನಾಚರಿಸಿದರೂ ಫಲವಿಲ್ಲ. ಅಂತರಂಗ ಶುದ್ಧವಿಲ್ಲದವರನ್ನು ಅವನು ನಂಬಲಾರನು. ಹೀಗೆ ನಡೆನುಡಿ ಶುದ್ಧವಿಲ್ಲದವನು ಸ್ವಾಮಿಯ ಅನುಗ್ರಹವನ್ನು ಎಂದಿಗೂ ಪಡೆಯಲಾರನು. ಅವನಲ್ಲಿ ಭಕ್ತಿಮಾರ್ಗವು ಅಳವಡದು. ಇದನ್ನು ಅಣ್ಣನು ಸ್ಪಷ್ಟಪಡಿಸುತ್ತಾನೆ: “ಸ್ವಾಮಿ ಭೃತ್ಯ ಸಂಬಂಧಕ್ಕೆ ಆವುದು ಪಥವೆಂದರೆ, ದಿಟವ ನುಡಿವುದು, ನುಡಿದಂತೆ ನಡೆವುದು. ನುಡಿದು ಹುಸಿವ, ನಡೆದು ತಪ್ಪುವ ಪ್ರಪಂಚಿಯನೊಲ್ಲ ನಮ್ಮ ಕೂಡಲಸಂಗಮದೇವ.” ಅಣ್ಣನು ತನ್ನ ನಡೆನುಡಿಗಳಲ್ಲಿ ಕೂಡಲಸಂಗಮದೇವನನ್ನು ಹೀಗೆ ಪ್ರಮಾಣವಾಗಿಟ್ಟುಕೊಂಡಿದ್ದಾನೆ. ಕೂಡಲಸಂಗಮನಾಥನು ಅವನ ಉಪಾಸ್ಯದೇವ. ಅವನೇ ಗುರುವಾಗಿ ಬಂದು ಅಣ್ಣನಿಗೆ ಇಷ್ಟಲಿಂಗವನ್ನು ಅನುಗ್ರಹಿಸಿರುವನು. ಆದ್ದರಿಂದ ಅಣ್ಣನು ತನ್ನ ಲಿಂಗವನ್ನೂ, ಇತರ ಭಕ್ತರನ್ನೂ ಮತ್ತು ಶರಣರನ್ನೂ ಕೂಡಲಸಂಗಮದೇವನೆಂದೇ ಉದ್ದೇಶಿಸಿ ವ್ಯವಹರಿಸುತ್ತಾನೆ. ಇದು ವಚನಕಾರರ ಪದ್ಧತಿ. ಇದು ಅವರ ನಿರಂಹಂಭಾವಸ್ಥಿತಿಯನ್ನೂ, ನಿರಭಿಮಾನತೆಯನ್ನೂ, ದಾಸೋಽಹಂಭಾವವನ್ನೂ ವ್ಯಕ್ತಪಡಿಸುತ್ತದೆ. ಅವರ ನಡೆನುಡಿಗಳು, ಆಚಾರ ವ್ಯವಹಾರಗಳು, ಊಟ ಉಪಚಾರಗಳು ಎಲ್ಲವೂ ಲಿಂಗಮುಖವಾಗಿಯೇ

ನಡೆಯಲಿವೆ. ಇದನ್ನು ಮುಗ್ಗೆಮ್ಮಾಯಿದೇವನು ಬಹು ಸೊಗ ಸಾಗಿ ವರ್ಣಿಸಿದ್ದಾನೆ (ಶತಕತ್ರಯ ೧-೬೦):

ನುಡಿವೆಡೆಯಲ್ಲಿ ನೋಡುವೆಡೆಯಲ್ಲಿ ರಮಿಪ್ಪೆಡೆಯಲ್ಲಿ ವಸ್ತುವಂ
ಪಿಡಿವೆಡೆಯಲ್ಲಿ ಭೋಗಿಪೆಡೆಯಲ್ಲಿ ಸುಖಂಬಡೆವಲ್ಲಿ ದೇಹವಂ ಬಿಡು
ವೆಡೆಯಲ್ಲಿ ಲಿಂಗಕಳೆ ಲಿಂಗಗುಣಂ ಘನಲಿಂಗಯೋಗಮಾ
ದೊಡೆ ಬಳಿಕಾ ಮಹಾತ್ಮನಸದೇನೆನ ಬರ್ಪುದದಂ ಶಿವಾಧವಾ ॥

ನಡೆಯುವಾಗ, ನುಡಿಯುವಾಗ, ನೋಡುವಾಗ, ಭೋಗ್ಯ ವಸ್ತುವಿನಲ್ಲಿ ರಮಿಸುವಾಗ, ಒಂದು ವಸ್ತುವನ್ನು ಸ್ವೀಕರಿಸುವಾಗ ಮತ್ತು ಕೊಡುವಾಗ, ಮಕ್ಕಳನ್ನು ಮುದ್ದಿಸುವಾಗ, ಹೆಂಡತಿ ಯೊಡನೆ ಸುಖಪಡುವಾಗ, ದೇಹವನ್ನು ಬಿಡುವಾಗ, ಲೋಕದಲ್ಲಿ ವ್ಯವಹರಿಸುವಾಗ ಲಿಂಗಕಳೆ ಲಿಂಗಗುಣ ಇವೇ ನಮ್ಮಲ್ಲಿ ಪಡಿ ಯಚ್ಚಾದರೆ, ನಮ್ಮ ಜೀವನ ಸುಸಂಘಟಿತವೂ ವ್ಯವಸ್ಥಿತವೂ ಆಗಿ ಘನಲಿಂಗಯೋಗವೆನಿಸುವುದು. ಅಂತಹ ಮಹಾತ್ಮನಿಗೆ ಜೀವನದಲ್ಲಿ ಅಸಹ್ಯವಾದ ಘಟನೆಗಳೇ ಸಂಭವಿಸವು. ಅವನಲ್ಲಿ ಅಹಂಕಾರ ಮತ್ತು ಅಭಿಮಾನಗಳ ದುಷ್ಪ್ರವೃತ್ತಿಗೆ ಅವಕಾಶವಿರ ಲಾರದು. ಅಹಂಕಾರ ಮನವನಿಂಬುಗೊಂಡಲ್ಲಿ ದೇವನು ದೂರ ಸರಿಯುವನು. ಆದರೆ ಅಹಂಕಾರರಹಿತನಾದ ಭಕ್ತನಲ್ಲಿ ಅವನು ಸದಾ ಸನ್ನಿಹಿತನಾಗಿರುವನು.

ಶಿವನೂ ಸಹ ಭಕ್ತರನ್ನು ಸಂಸಾರದಲ್ಲಿ ಸಿಕ್ಕಿಸಿ ಪರೀಕ್ಷಿಸದೆ ಬಿಡನು ; ಚಿನ್ನವನ್ನು ಒರೆಗಲ್ಲಿನಲ್ಲಿ ತಿಕ್ಕುವಂತೆ ಭಕ್ತರನ್ನು ಕಷ್ಟಕ್ಕೆ ಸಿಕ್ಕಿಸಿ ಪರೀಕ್ಷಿಸುವನು. ನೀನೇ ಗತಿ ಎಂದು ಮನ ವಚನ ಕಾಯಗಳಲ್ಲೂ ಶರಣಾಗತನಾಗಿ ಭಕ್ತನು ಶುದ್ಧವರ್ಣದ ಅಪರಂಜಿ ಯಾದರೆ, ಶಿವನೊಡನೆ ಬೆರೆಯಲು ಆಗ ಅವನಿಗೆ ಹೆಚ್ಚುಕಾಲ ಹಿಡಿಯುವುದಿಲ್ಲ. “ಭಕ್ತನಾಗಿ ಅವನನ್ನು ಹಿಡಿಯಲು

ಹೋದರೆ, ನುಗ್ಗು ಮಾಡುವ, ನುಸಿಯ ಮಾಡುವ, ಮಣ್ಣ
ಮಾಡುವ, ಮಸಿಯ ಮಾಡುವ ಅವನನ್ನು ನೆರೆನಂಬಿದೆನಾದಡೆ
ಕಡೆಗೆ ತನ್ನಂತೆ ಮಾಡುವ."

"ಹರ ತನ್ನ ಭಕ್ತರ ತಿರಿವಂತೆ ಮಾಡುವ, ಒರೆದು ನೋಡುವ
ಸುವರ್ಣದ ಚಿನ್ನದಂತೆ. ಅರೆದು ನೋಡುವ ಚಂದನದಂತೆ
ಅರೆದು ನೋಡುವ ಕಬ್ಬಿನ ಕೋಲಿನಂತೆ. ಬೆದರದೆ ಬೆಚ್ಚದ
ಇದ್ದರೆ ಕರವಿಡಿದೆತ್ತುವ ನಮ್ಮ ಕೂಡಲ ಸಂಗಮದೇವ."
ಶ್ರೀಗಂಧದ ಕೊರಡನ್ನು ಸಾಣೆಕಲ್ಲಿನಮೇಲೆ ತೆಯ್ದು ಗಂಧವನ್ನು
ಪಡೆಯುವಂತೆಯೂ, ಕಬ್ಬನ್ನು ಗಾಣಕ್ಕೆ ಕೊಟ್ಟು ರಸವನ್ನು
ಹೊರಡಿಸುವಂತೆಯೂ ಪರಮಾತ್ಮನು ಭಕ್ತರನ್ನು ಪ್ರಪಂಚದ
ಕ್ಲೇಶವೆಂಬ ಒರೆಗಲ್ಲಿನಲ್ಲಿ ತೆಯ್ದು ಅವರಿಂದ ಭಕ್ತಿರಸವನ್ನು
ಹೊರಡಿಸಿ, ತಾನು ಅದನ್ನು ಒಪ್ಪಿಸಿಕೊಳ್ಳುವನು.

"ತನುವಕೊಟ್ಟು ಗುರುವನೊಲಿಸಲೇಬೇಕು. ಮನವಕೊಟ್ಟು
ಲಿಂಗವನೊಲಿಸಲೇಬೇಕು. ಧನವಕೊಟ್ಟು ಜಂಗಮವನೊಲಿಸಲೇ
ಬೇಕು. ಈ ತ್ರಿವಿಧವ ಹೊರಗುಮಾಡಿ, ಹರೆಯಹೊಯ್ದು
ಕುರುಹ ಪೂಜಿಸುವವರ ಮೆಚ್ಚ ಕೂಡಲಸಂಗಮದೇವ."
"ಮಾತಿನಮಾಲೆಯಲ್ಲಿಪ್ಪುದೆ ಭಕ್ತಿ? ಮಾಡಿ ತನು ಸವೆಯದನ್ನಕ್ಕ
ಮನ ಸವೆಯದನ್ನಕ್ಕ, ಧನ ಸವೆಯದನ್ನಕ್ಕ ಅಪ್ಪುದೆ ಭಕ್ತಿ?"

"ನೆಚ್ಚಿದೆನೆಂದರೆ, ಮೆಚ್ಚಿದೆನೆಂದರೆ, ಸಲೆ ಮಾರುವೋದೆ
ನೆಂದರೆ, ತನುವನಲ್ಲಾಡಿಸಿ ನೋಡುವೆ ನೀನು, ಮನವನಲ್ಲಾಡಿಸಿ
ನೋಡುವೆ ನೀನು, ಧನವನಲ್ಲಾಡಿಸಿ ನೋಡುವೆ ನೀನು?
ಇವಕ್ಕೆಲ್ಲಕಂಜದಿದ್ದರೆ, ಭಕ್ತಿಕಂಪಿತ ನಮ್ಮ ಕೂಡಲಸಂಗಮದೇವ."

ಹೀಗೆ ಭಕ್ತಿಮಾರ್ಗ ದುಃಖದಾಯಕವಾಗಿದ್ದರೂ, ಹಿಂದಿನವರು
ಅವರಿಂದಲೇ ತಮ್ಮ ಗುರಿ ಸಾಧಿಸಿದ್ದುದನ್ನು ಅಣ್ಣನು ತಿಳಿದಿದ್ದನು.

ಸಿಂಧುಬಲ್ಲಾಳನು ತನ್ನ ವಧುವನ್ನೇ ಜಂಗಮಕ್ಕೆ ಅರ್ಪಿಸಿದನು. ಸಿರಿಯಾಳನು ತನ್ನ ಮಗನನ್ನೇ ಕೊಂದು ಜಂಗಮಕ್ಕೆ ನೀಡಿದನು. ಅವರ ದೃಢಭಕ್ತಿ, ಜಂಗಮಸೇವೆ ಅಸದೃಶವಾದುವು. ಸಾಮಾನ್ಯ ಜನರಿಗೆ ಅದು ಸಾಧ್ಯವಿಲ್ಲ. ಭಕ್ತಿಯೆಂದರೆ ಹೀಗೆಯೆ. ಅದು ಗರಗಸದಂತೆ ಹೋಗುತ್ತ ಕೊಯ್ಯುವುದು, ಬರುತ್ತ ಕೊಯ್ಯುವುದು. ಘಟಸರ್ಪದೊಡನೆ ಸರಸವಾಡಿದಂತೆ ಅದು ಭಕ್ತನನ್ನು ಹಿಂದೆ ಮುಂದೆ ಹಿಡಿಯದೆ ಬಿಡುವುದೆ? ಆದರೂ ಗುರುಕೃಪೆಯಿಂದ ಅಣ್ಣನ ಭಕ್ತಿ ನಿರಾತಂಕವಾಗಿ ಮುಂದುವರಿದು ಅವನು ಸದ್ಭಕ್ತನೆನಿಸಿದನು.

"ಎರೆದೆಲೆಯಂತೆ ಒಳಗೊಂದು ಹೊರಗೊಂದಾದರೆ ಮೆಚ್ಚುವನೆ? ಬಾರದ ಭವಂಗಳಲ್ಲಿ ಬರಿಸುವನಲ್ಲದೆ ಮೆಚ್ಚುವನೆ? ಅಘೋರನರಕವನುಣಿಸುವನಲ್ಲದೆ ಮೆಚ್ಚುವನೆ? ಉಡುವಿನ ನಾಲಗೆಯಂತೆ ಎರಡಾದರೆ ಕೂಡಲಸಂಗಯ್ಯ ಮೆಚ್ಚುವನೆ?" ಹೀಗೆ ನಡೆನುಡಿ ಶುದ್ಧಿಯಿಂದಲೂ ತನುಮನಧನಗಳ ಸಮರ್ಪಣೆಯಿಂದಲೂ ಹಿಂದಿನ ಪುರಾತನರಂತೆ ತಾನೂ ಭಕ್ತಿಯಿಂದ ಈಶ್ವರನನ್ನು ಮೆಚ್ಚಿಸಬೇಕೆಂದು ಅಣ್ಣನ ಉದ್ದೇಶವಾಗಿತ್ತು. ಅದಕ್ಕೆ ಮನಸ್ಸನ್ನು ಜಯಿಸಿಕೊಳ್ಳುವ ಶಕ್ತಿ ಬೇಕು. ಮನದ ಸ್ವಭಾವ ಯಾವಾಗಲೂ ವಕ್ರವಾದುದು. ಅದು ತನ್ನನ್ನು ತಾನು ವಿಚಾರಿಸಲೊಲ್ಲದು; ಆದರೆ ಉಳಿದುದೆಲ್ಲವನ್ನೂ ವಿಚಾರಿಸಬಲ್ಲದು; ಒಮ್ಮೆ ನಂಬುತ್ತದೆ, ಮತ್ತೆ ಸಂಶಯಪಡುತ್ತದೆ. ಇಂತಹ ಮನಸ್ಸನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಣ್ಣನು ಬಹಳ ಪ್ರಯತ್ನಪಟ್ಟು ಕೊನೆಗೆ ಎಲ್ಲಾ ಕಾಲದಲ್ಲೂ ಲಿಂಗದ ನೆನಹನ್ನು ಕರುಣಿಸುವಂತೆ ಬೇಡುವನು.

"ಕೊಂಬೆಯ ಮೇಲಣ ಮರ್ಕಟನಂತೆ ಲಂಘಿಸುವುದೆನ್ನ

ಮನವು. ನಿಂದಲ್ಲಿ ನಿಲ್ಲಲೀಯದೆನ್ನ ಮನವು. ಹೊಂದಿದಲ್ಲಿ ಹೊಂದಲೀಯದೆನ್ನ ಮನವು. ದೇವ ನಿಮ್ಮ ಚರಣಕಮಲದಲ್ಲಿ ಭ್ರಮರನಾಗಿರಿಸು ನಿಮ್ಮ ಧರ್ಮ."

"ಮರವನೇರಿದ ಮರ್ಕಟನಂತೆ ಹಲವು ಕೊಂಬಿಂಗೆ ಹಾಯುತ್ತಲಿದ್ದೇನೆ. ಬೆಂದ ಮನವ ನಾನೆಂತು ನಂಬುವೆನಯ್ಯ, ಎಂತು ನೆಚ್ಚುವೆನಯ್ಯ. ಎನ್ನ ತಂದೆ ಕೂಡಲಸಂಗಮದೇವರಲ್ಲಿಗೆ ಹೋಗಲೀಯದಯ್ಯ ಎನ್ನ ಮನ."

"ಅಂದಣವನೇರಿದ ಸೊಣಗನಂತೆ ಕಂಡದೆ ಬಿಡದು ಮುನ್ನಿನ ಸ್ವಭಾವವನು. ಸುಡುಸುಡು, ಮನವಿದು ವಿಷಯಕ್ಕೆ ಹರಿವುದು. ಮೃಡ, ನಿಮ್ಮನನುದಿನ ನೆನೆಯಲೀಯದು. ಎನ್ನೊಡೆಯ, ದೇವ, ನಿಮ್ಮ ಚರಣವ ನೆನೆವಂತೆ ಕರುಣಿಸು. ಸೆರಗೊಡ್ಡಿ ಬೇಡುವೆ ನಿಮ್ಮ ಧರ್ಮ." "ತುಪ್ಪದ ಸವಿಗೆ ಅಲಗ ನೆಕ್ಕುವ ಸೊಣಗನಂತೆ ಎನ್ನ ಬಾಳುವೆ. ಸಂಸಾರಸಂಗವ ಬಿಡದು ನೋಡೆನ್ನ ಮನವು. ಈ ನಾಯಿತನವ ಮಾಣಿಸು, ದೇವ ನಿಮ್ಮ ಧರ್ಮ". "ತನ್ನಿಚ್ಛೆಯ ನುಡಿದರೆ ಮೆಚ್ಚುವುದೀ ಮನವು. ಇದಿರಿಚ್ಛೆಯ ನುಡಿದರೆ ಮೆಚ್ಚದೀ ಮನವು. ಕೂಡಲಸಂಗನ ಶರಣರ ನೆಚ್ಚದ ಮನವ ಕಿಚ್ಚಿನೊಳಗಿಕ್ಕು." "ಸಂಸಾರವೆಂಬ ಬಲೆಯಲ್ಲಿ ಸಿಲುಕಿದೆನಯ್ಯಾ. ಎನ್ನವನೆಂದು ಕಾಯಯ್ಯಾ" ಎಂದು ಅಣ್ಣನು ಲಿಂಗದೇವನನ್ನು ಬಹಳವಾಗಿ ಬೇಡುವನು. ಕಪ್ಪೆ ಸರ್ಪನ ನೆರಳಲ್ಲಿ ಇರುವಂತೆ ಅಣ್ಣನಿಗೆ ಸಂಸಾರ ಕಾಣುವುದು. ಚಂದ್ರನನ್ನು ರಾಹು ನುಂಗುವಂತೆ ಸಂಸಾರವು ಅವನ ದೇಹೇಂದ್ರಿಯ ಮನಗಳನ್ನು ಪೂರ್ಣವಾಗಿ ಗ್ರಹಣಮಾಡಿರುವುದು. ಇದಕ್ಕೆ ಬಿಡುಗಡೆ ಎಂದು ಆದೀತೆಂದು ಅವನು ಸಂಗಮ ದೇವನನ್ನು ವಿನಯದಿಂದ ಕೇಳುವನು. ಸಂಸಾರಸಾಗರ ಉರದುದ್ದವೇ, ಕೊರಳುದ್ದವೇ ?

ಇದರಲ್ಲಿ ಅಣ್ಣನೇ ಮುಳುಗುತ್ತಿರುವನು. ಇದು ಶಿರದುದ್ದವಾದ ಬಳಿಕ ಅವನು ಹೇಳುವುದೇನಿದೆ? "ಅಯ್ಯಾ ಅಯ್ಯಾ ಎನ್ನ ಹುಯ್ಯಲ ಕೇಳಯ್ಯ, ನಾನೇವೆನೇವೆನಯ್ಯಾ?" ಎಂದು ಅಣ್ಣ ಪರಿತಪಿಸುವನು. ಈ ಸಂಸಾರದ ಸುಖ ಅವನಿಗೆ ಶೂಲದ ಮೇಲಣ ಭೋಗವಾಗಿದೆ. ಹಾವಿಗೂ ಹಾವಾಡಿಗನಿಗೂ ಇರುವ ಸ್ನೇಹದಂತೆ ತನ್ನ ಮನವೇ ತನಗೆ ಹಗೆಯಾದ ಬಳಿಕ ಇನ್ನು ಯಾರಿಗೆ ದೂರುವುದು?

"ಒಲೆ ಹತ್ತಿ ಉರಿದೊಡೆ ನಿಲಬಹುದಲ್ಲದೆ, ಧರೆ ಹತ್ತಿ ಉರಿದೊಡೆ ನಿಲ್ಲಬಹುದೆ? ಏರಿ ನೀರುಂಬಡೆ, ಬೇಲಿ ಕಾಯ ಮೇವಡೆ, ನಾರಿ ತನ್ನ ಮನೆಯಲ್ಲಿ ಕಳೆವಡೆ, ತಾಯಿ ಮೊಲೆವಾಲು ನಂಜಾಗಿ ಕೊಲುವಡೆ ಇನ್ನಾರಿಗೆ ದೂರುವೆ ದೇವಾ?"

"ಇಂದಿಂಗೆಂತು ನಾಳಿಂಗೆಂತು ಎಂದು ಬೆಂದೊಡಲ ಹೊರೆಯಹೋಯಿತ್ತೆನ್ನ ಸಂಸಾರ, ಹಿಂದೆ ನಾನಾ ಯೋನಿಯಲ್ಲಿ ಬಂದೆನೆಂಬ ಹೇಯವಿಲ್ಲ. ಮುಂದೆ ಮುಕ್ತಿಯಾಗಬೇಕೆಂಬ ಯುಕ್ತಿ ಇಲ್ಲ. ಎಂದೆಂದು ಸದಾಶಿವನ ಕುಂದದೆ ನೆನೆಯಲೀಯದೆ ಕೊಂದುದಯ್ಯಾ ಈ ಮಾಯೆ, ಕೂಡಲ ಸಂಗಮದೇವ!"

ಇವತ್ತಿಗೇನಾಗಬೇಕು, ನಾಳೆಗೆ ಏನು ರೂಢಿಸಬೇಕು ಎಂದು ಬೆಂದೊಡಲ ಹೊರೆಯುವುದೇ ಈ ಸಂಸಾರದಲ್ಲಿ ಮಾನವನ ಚಿಂತನೆಯಾಗಿದೆ. ಹಿಂದೆ ಭವಪಾಶದಲ್ಲಿ ಎಷ್ಟು ನೊಂದೆನೆಂಬ ಬೇಸರವೇ ಅವನಿಗೆ ಆಗಿಲ್ಲ. ಇನ್ನು ಮುಂದೆಯಾದರೂ ಭವದ ಬಿಡುಗಡೆಯಾಗಬೇಕೆಂಬ ಬಯಕೆಯೂ ಇಲ್ಲ. ಎಂದೆಂದು ಶಿವನನ್ನು ನೆನೆಯಲೀಯದೆ ಈ ಮಾಯೆ ಪ್ರಪಂಚದ ಆಶೆಯನ್ನು ಹುಟ್ಟಿಸಿ ತನ್ನನ್ನು ಕೊಲ್ಲುತ್ತಿರುವುದೆಂದು ಅಣ್ಣನು ನೊಂದ ಹೃದಯದಿಂದ ತನ್ನ ಮನೋಜಯದ ಬಗ್ಗೆ ಅಶಕ್ತತೆಯನ್ನು

ಹೇಳಿಕೊಳ್ಳುವನು. ಸಂಸಾರದಲ್ಲಿ ಬರುವ ಸುಖವಾದರೋ ಸಾಸಿವೆಯಷ್ಟೇ ಅತ್ಯಲ್ಪವಾದುದು. ಇವಕ್ಕೆ ಸಾಗರದಷ್ಟು ದುಃಖವನ್ನು ಮಾನವನು ಅನುಭವಿಸುತ್ತಿರುವುದು ತಿಳಿಗೇಡಿತನ. ಸಂಸಾರವೆಂಬ ಸರ್ಪ ಮುಟ್ಟಿ, ಇಂದ್ರಿಯ ಸುಖವೆಂಬ ವಿಷ ಮುಟ್ಟಿ, ಅಣ್ಣನು ಮುಂದುಗಾಣದೆ ಹೊರಳಿ ಬೀಳುತ್ತಿರುವನು. "ಅರಿಯದೆ ಜನನಿಯ ಜಠರದಲ್ಲಿ ಬಾರದ ಭವಂಗಳಲ್ಲಿ ಬರಿಸಿದೆ ತಂದೆ, ಹುಟ್ಟಿದ್ದೆ ತಪ್ಪಾಯಿತೆ ಎಲೆಲಿಂಗವೇ. ಮುನ್ನ ಹುಟ್ಟಿದು ದಕ್ಕೆ ಕೃಪೆಮಾಡು. ಇನ್ನು ಹುಟ್ಟಿಂದರೆ ನಿಮ್ಮಾಣೆ" ಎಂದು ದೇವನಲ್ಲಿ ಭಕ್ತಿಯಿಂದ ಬೇಡುತ್ತಾನೆ ಅಣ್ಣನು. ಹೀಗೆ ಸಂಸಾರ ಸರ್ವಗ್ರಾಸಿಯಾಗಿ ನುಂಗಿರುವಾಗ, ಇದರ ದಂದುಗ ಎಂದು ಹಿಂಗುವುದು? ಮನದಲ್ಲಿ ಪರಿಣಾಮವಹುದೆಂದು ? ತಾನು ಪರಮಸಂತೋಷದಲ್ಲಿ ಇರುವುದೆಂದು ? ಇದೇ ಅಣ್ಣನ ದೈನಂದಿನ ಚಿಂತೆ. ಚಕೋರಪಕ್ಷಿಗೆ ಚಂದ್ರಮನ ಬೆಳಕಿನ ಚಿಂತೆ, ಅಂಬುಜಕ್ಕೆ ಭಾನುವಿನ ಉದಯದ ಚಿಂತೆ. ಭ್ರಮರಕ್ಕೆ ಪರಿಮಳದ ಬಂಡುಂಬ ಚಿಂತೆ. ಅಣ್ಣನಿಗೂ ಹಾಗೆಯೇ ಕೂಡಲಸಂಗಮದೇವನ ಚಿಂತೆ. "ದೇವನೊಲಿವನೋ ಇಲ್ಲವೋ ? ಎಂದು, ಎಂತು ಒಲಿಯುವನು?" ಇದೇ ಅಣ್ಣನ ಹೆಜ್ಜೆ ಹೆಜ್ಜೆಯ ಚಿಂತೆ.

ಈ ಸಂಸಾರದಲ್ಲಿ ಒಬ್ಬೊಬ್ಬರಿಗೂ ನಿಜವಾಗಿ ಯಾವ ಸಂಬಂಧವೂ ಇಲ್ಲ. ಪರಮಾತ್ಮನೊಬ್ಬನೇ ಎಲ್ಲರಿಗೂ ಸಂಬಂಧಿಸಿದವನು. ಆವನೊಬ್ಬನೇ ಜಗದಲ್ಲಿ ಎಲ್ಲರಿಗೂ ನೆಂಟನೆಂದು ಅಣ್ಣನು ಅವನನ್ನೇ ದೃಢವಾಗಿ ನಂಬುವನು. ಲೋಕದ ಜನರು ಈ ಮಾತನ್ನು ಯಾವತ್ತೂ ನೆನಪಿನಲ್ಲಿಡಬೇಕಾಗಿದೆ.

"ಚಂದ್ರೋದಯಕ್ಕೆ ಅಂಬುಧಿ ಹೆಚ್ಚುವುದಯ್ಯ, ಚಂದ್ರ

ಯೊಂದೆ ಕುಂದುವುದಯ್ಯಾ. ಚಂದ್ರಂಗೆ ರಾಹು ಅಡ್ಡಬಂದಲ್ಲಿ, ಅಂಬುಧಿ ಬೊಬ್ಬಿಟ್ಟಿತ್ತೆ ? ಅಂಬುಧಿಯು ಮುನಿ ಆಪೋಷಣವ ಕೊಂಬಲ್ಲಿ ಚಂದ್ರಮನಡ್ಡಬಂದನೆ ? ಆರಿಗಾರೂ ಇಲ್ಲ. ಕೆಟ್ಟವಂಗೆ ಳೆ ಇಲ್ಲ, ಜಗದ ನಂಟ ನೀನೇ ಅಯ್ಯಾ." ಹೀಗೆ ಲೋಕದ ಮಾನವರಿಗೆ ಪರಮಾತ್ಮನಲ್ಲದೆ ಬೇರೆ ಯಾವ ಗತಿಯೂ ಇಲ್ಲ ಬ ಅಂಶವನ್ನು ಅಣ್ಣನು ಹೃದಯಂಗಮವಾಗಿ ಚಿತ್ರಿಸಿರು ನು. ಈ ಮಾತು ನಮಗೆ ಅಪದ್ಧನವೆನಿಸಬಲ್ಲದು.

ಈ ಸಂಸಾರದಲ್ಲಿ ಬರುವ ವಿಷಯಸುಖವೂ ದೇವನ ಕೃಪೆ ಇಲ್ಲದೆ ದೊರಕದು. ಲೇಸ ಕಂಡ ಮನ ಬಯಸಿ ಬಯಸಿ ಆಸೆ ಮಾಡಿದಡಿಲ್ಲ. ತಾಳಿಮರಕ್ಕೆ ಕೈಯ ನೀಡಿ, ಮೇಲೆ ನೋಡಿ ನೋಡಿ, ಗೋಣು ನೊಂದುದು. ಶಿವನೀವಕಾಲಕ್ಕಲ್ಲದೆ ಏನೂ ಬರುವಂತಿಲ್ಲ. ಎಷ್ಟು ಬರಬೇಕೋ ಅಷ್ಟೇ ಆ ಕಾಲಕ್ಕಲ್ಲದೆ ಬಾರದು. ನಾವು ಎಷ್ಟೇ ಪ್ರಯತ್ನಪಟ್ಟರೂ ಅವನ ಅನುಗ್ರಹ ಇಲ್ಲದೆ ಆಕಾಲದಲ್ಲಿ ಏನೂ ಬರಲಾರದು. ಬರಬೇಕಾದ್ದಕ್ಕಿಂತಲೂ ಹೆಚ್ಚು ಬಾರದು. ಬಾರದು ಒಪ್ಪದು, ಒಪ್ಪದು ತಪ್ಪದು. ಬರಬೇಕಾದುದು ತನ್ನ ಬಹಕಾಲಕ್ಕಲ್ಲದೆ ಬಾರದು. "ಹರನೀವ ಕಾಲಕ್ಕೆ ಸಿರಿಯು ಬೆನ್ನಲ್ಲಿ ಬಕ್ಕು, ನೆರೆಯದ ವಸ್ತು ದೊರೆವುದು ನೋಡಯ್ಯ. ಅರಸು ಪರಿವಾರ ಕೈವಾರ ನೋಡಯ್ಯ. ಪರಮ ನಿರಂಜನನ ಮರೆವ ಕಾಲಕ್ಕೆ ತುಂಬಿದ ಹರವಿಯ ಕಲ್ಲು ಕೊಂಡಂತೆ." ಪರಮಾತ್ಮನ ಅನುಗ್ರಹವಿಲ್ಲದೆ ಐಹಿಕ ಸುಖವೂ ದೊರೆಯದು. ಅವನನ್ನು ಮರೆಯುವ ಕಾಲಕ್ಕೆ ಎಲ್ಲವೂ ಒಮ್ಮೆಗೆ ಮರೆಯಾಗುವುದು. ದರಿದ್ರ ಶ್ರೀಮಂತನನ್ನು ನೆನೆದಾಕ್ಷಣಕ್ಕೆ ಶ್ರೀಮಂತನಾಗಲಾರನು. ಕುರೂಪಿ ಸುರೂಪಿಯ ನೆನೆದ ಮಾತ್ರ ದಿಂದಲೇ ಸುರೂಪಿಯಾಗಲಾರನು. ಪರಮಾತ್ಮನೊಲಿದರೆ

ಕೊರಡೂ ಚಿಗುರುವುದು, ಬಲು ಬರಡೂ ಹಯನಾಗಬಲ್ಲದು
ವಿಷವೂ ಅಮೃತವಾಗಬಲ್ಲದು. ಶಿವನೊಲಿದರೆ ಸಕಲ ಪ
ಪದಾರ್ಥವೂ ಎದುರಿಗೇ ದೊರೆಯುವುದು. ಆದಕ್ಕಾಗಿಯೆ
ಅಣ್ಣನು ಲೋಕದ ಮಾನವರಿಗೆ ಹೃತ್ಪೂರ್ವಕವಾಗಿ ಎಚ್ಚರಿ
ದ್ದಾನೆ. "ಎಲೆ ಎಲೆ ಮಾನವ, ಅಳಿಯಾಸೆ ಬೇಡೆಲೊ
ಕಾಡಬೆಳದಿಂಗಳ ಸಿರಿ ಸ್ಥಿರವಲ್ಲ. ಕೇಡಿಲ್ಲದ ಪದವಿಯ ಕೊಡಲ
ದೇವನ ಮರೆಯದೆ ಪೂಜಿಸು." "ಸಂಸಾರವೆಂಬುದೊಂದ
ಗಾಳಿಯ ಸೊಡರು. ಸಿರಿ ಎಂಬುದೊಂದು ಸಂತೆಯ ಮಂ
ಕಂಡಯ್ಯಾ. ಇದ ನೆಚ್ಚಿ ಕೆಡಬೇಡ ಸಿರಿ ಎಂಬುದ. ಮರೆಯ
ಪೂಜಿಸು ದೇವನ." ಹೀಗೆ ಮನುಷ್ಯನ ಕಣ್ಮನಗಳನ್ನು ಅಣ್ಣನ
ಪ್ರಾಪಂಚಿಕ ವಿಷಯಗಳ ಕಡೆಯಿಂದ ಪರಮಾರ್ಥತತ್ತ್ವದ ಕಡೆ
ತಿರುಗಿಸುವನು.

ಹೀಗೆ ಆತ್ಮಶೋಧನೆಯಲ್ಲಿ ತೊಡಗಿದ್ದ ಅಣ್ಣನು ಪರಮಾತ
ನೊಡನೆ ಸ್ಪರ್ಧಿಸಿದರೂ ತನ್ನ ಲೋಪದೋಷಗಳನ್ನೆಣಿಸ
ತನ್ನನ್ನು ಕರುಣಿಸುವಂತೆ ಬೇಡಿಕೊಳ್ಳುವನು. ತನ್ನ
ಗುಣಾವಗುಣಗಳನ್ನು ಹುಡುಕಿದರೆ ಸುಖವಿಲ್ಲ. ಶಿವನನ
ಮೆಚ್ಚಿಸಲಿಕ್ಕೆ ತನ್ನಿಂದ ಸಾಧ್ಯವಾಗದು. ಅಪ್ರತಿಮಮಹಿ
ನನ್ನು ಸಾಮಾನ್ಯಮಾನವನು ಹೇಗೆ ಮೆಚ್ಚಿಸಿಯಾನು
ಆದರೂ ಅವನ ಇಚ್ಛೆಯಂತೆ ತಾನು ಹುಟ್ಟಿದ್ದರಿಂದ ತನ್ನಿಂ
ಏನಾದರಿಷ್ಟು ಸೇವೆ ಮಾಡಿಸಿಕೊಂಡೇ ಅವನು ಸಂತೋ
ಗೊಳ್ಳಬೇಕೆಂದು ಅಣ್ಣನು ಬೇಡಿಕೊಳ್ಳುವನು.

"ಎನ್ನ ಗುಣ ಅವಗುಣವ ಸಂಪಾದಿಸುವೆ ಅಯ್ಯಾ
ನಿಮಗಾನು ಪ್ರತಿಯೆ ? ದೇವಾ, ನೀವು ಮಾಡಲಾನಾದೆನು
"ಎನ್ನ ಚಿತ್ತವು ಅತ್ತಿಯ ಹಣ್ಣು ನೋಡಯ್ಯಾ, ವಿಚಾರಿಸಿದೊ

ಏನೂ ಹುರುಳಿಲ್ಲವಯ್ಯಾ. ಪ್ರಪಂಚದ ಡಂಬಿನಲ್ಲಿ ಎನ್ನನೊಂದು ರೂಪುಮಾಡಿ ನೀವಿರಿಸಿದಿರಯ್ಯಾ ದೇವ." "ಎನ್ನ ನಡೆಯೊಂದು ಪರಿ, ನುಡಿಯೊಂದು ಪರಿ. ಎನ್ನೊಳಗೇನು ಶುದ್ಧವಿಲ್ಲ ನೋಡಯ್ಯಾ, ನುಡಿಗೆ ತಕ್ಕ ನಡೆಯ ಕಂಡರೆ, ದೇವನೊಳಗಿಪ್ಪ ನೋಡಯ್ಯಾ."

"ಆನುಮಾಡಿದ ತಪ್ಪನೆಣಿಸಿಹೆನೆಂದರೆ ಗಣನೆಯಿಲ್ಲ. ನಡೆದು ತಪ್ಪುವೆ, ನುಡಿದು ತಪ್ಪುವೆ, ಮಾಡಿ ತಪ್ಪುವೆ, ನೀಡಿ ತಪ್ಪುವೆ, ಕೂಡಿ ತಪ್ಪುವೆ, ಅರಿದು ತಪ್ಪುವೆ, ಮರೆದು ತಪ್ಪುವೆ, ಎನ್ನ ತಪ್ಪ ನೊಪ್ಪಮಾಡಿಕೊಂಬುದಲ್ಲದೆ ಚಿತ್ತಕ್ಕೆ ತರಲಾಗದು, ಕೂಡಲ ಸಂಗಮದೇವ." ಹೀಗೆ ತನ್ನ ತಪ್ಪುಗಳನ್ನೆಣಿಸದೆ, ಪರಮಾತ್ಮನು ತಾನಾಗಿಯೇ ತನ್ನ ಅಲ್ಪಭಕ್ತಿಗೆ ಸಂತೋಷಗೊಂಡು ತನ್ನನ್ನು ಅನುಗ್ರಹಿಸಲೆಂದು ಅಣ್ಣನು ವಿನಯದಿಂದ ಬೇಡುವನು. ಕರಣೇಂದ್ರಿಯಗಳೆಂಬ ನಾಯಿ ಮುಟ್ಟದ ಮುನ್ನ, ತನ್ನ ಮನವು ಪರಮಾತ್ಮನೊಡನೆ ಸೇರಲೆಂದು ಅಣ್ಣನು ಪ್ರಭುವಿಗೆ ಮೊರೆ ಇಡುವನು. "ನಾನು ಒಬ್ಬನು, ಸುಡುವರೈವರು. ಮೇಲೆ ಕಿಚ್ಚು ಘನ, ನಿಲ್ಲಲು ಬಾರದು." "ಮುನಿದೆ ನಾದೊಡೆ ಒಮ್ಮೆ ಜರಿದರೆ ಸಾಲದೇ, ಅಕಟಕಟ ಮದನಂಗೆ ಮಾರುಗೊಡುವರೆ? ಹಗೆಗೆ ಮಾರುಗೊಟ್ಟು, ನಿನ್ನವರ ಒಪ್ಪಿಸುವರೆ ದೇವ ?" ಎಂದು ಪರಮಾತ್ಮನ ಮೇಲೆ ಅಣ್ಣ ಕೊಂಚ ಕೋಪಿಸಿಕೊಳ್ಳುವನು. ಕಾಯವಿಕಾರ, ಮನೋ ವಿಕಾರ, ಇಂದ್ರಿಯವಿಕಾರ ಇವು ಅವನನ್ನು ಕಾಡಿಸಹತ್ತುವವು. ಇವುಗಳ ಸುಳಿಯಲ್ಲಿ ತನ್ನನ್ನು ಸಿಲುಕಿಸದಂತೆಯೂ, ತನ್ನ ಚಿತ್ತವನ್ನು ಅನ್ಯವಸ್ತುಗಳಿಂದ ತೆಗೆಸಿ ಪರಮಾತ್ಮನ ಕಡೆಗೇ ತಿರಿಸುವಂತೆಯೂ ಅವನು ನಮ್ರತೆಯಿಂದ ಕೇಳಿಕೊಳ್ಳುವನು.

3

ಕೆಸರಿನಲ್ಲಿ ಬಿದ್ದ ಪಶುವಿನಂತೆ ಅವನು ದೆಸೆದೆಸೆಗೆ ಬಾಯಿಬಿಡು
ತ್ತಿರುವನು. ವಿಷಯವೆಂಬ ಹಸುರನ್ನು ತನ್ನ ಮುಂದೆ ತಂದು
ಪಸರಿಸದಂತೆ ಅಣ್ಣನು ಅಂಗಲಾಚಿ ಬೇಡುವನು. ಪಶುವೇನ
ಬಲ್ಲದು, ಹಸುರೆಂದೆಳಸುವುದು. ತನ್ನನ್ನು ವಿಷಯರಹಿತನನ್ನು
ಮಾಡಿ ಭಕ್ತಿರಸವ ಮೇಯಿಸಿ, ಸುಬುದ್ಧಿ ಎಂಬ ಉದಕವನೆರೆದು
ಕೃಪೆಮಾಡುವಂತೆ ಅಣ್ಣನು ಕೇಳಿಕೊಳ್ಳುವನು. ನರವಿಂಧ್ಯ
ದೊಳಗೆ ತನ್ನನ್ನು ಹುಲುಗಿಳಿಯಮಾಡಿ ಶಿವಶಿವಾ ಎಂದೋದಿ
ಸುವಂತೆಯೂ, ಭಕ್ತಿ ಎಂಬ ಪಂಜರದೊಳಗಿಕ್ಕಿ ಸಲಹು
ವಂತೆಯೂ ಅವನು ಬೇಡುವ ಚಿತ್ರ ಹೃದಯವಿದ್ರಾವಕ
ವಾಗಿದೆ. "ನೀನಲ್ಲದೆ ಮತ್ತಾರೂ ಎನ್ನವರಿಲ್ಲ ನೋಡಯ್ಯ,
ನೀನಲ್ಲದೊಳಕೊಂಬುವರಿಲ್ಲ ನೋಡಯ್ಯ." "ಬಡ ಪಶು
ಪಂಕದಲ್ಲಿ ಬಿದ್ದರೆ ಕಾಲ ಬಡಿವುದಲ್ಲದೆ ಬೇರೆ ಗತಿಯುಂಟೆ ?
ಶಿವಶಿವಾ, ಹೋದೆಹೆ ಹೋದೆಹೆನಯ್ಯಾ, ನಿಮ್ಮ ಮನದತ್ತಲೆನ್ನ
ತೆಗೆಯಯ್ಯಾ" ಎಂದು ಯಾವಾಗಲೂ ಪರಮಾತ್ಮನನ್ನು
ನೋಡುವಂತೆ, ಕೇಳುವಂತೆ, ನೆನೆಯುವಂತೆ, ಅವನ ಶರಣರ
ಪಾದವಲ್ಲದನ್ಯವಿಷಯಕ್ಕೆ ಎಳಸದಂತೆ ಮಾಡೆಂದು ಅಣ್ಣನು
ಪ್ರಾರ್ಥಿಸುತ್ತಾನೆ. ತನ್ನ ಹಾನಿವೃದ್ಧಿ, ಯೋಗಕ್ಷೇಮ, ಮಾನ
ಅವಮಾನಗಳೆಲ್ಲವನ್ನೂ ಅವನವೆಂದು ಅವನಿಗೇ ಒಪ್ಪಿಸುತ್ತಾನೆ.
ಒಂದು ನಿಮಿಷವಾದರೂ ಶರಣರ ಸಂಗದಲ್ಲಿರಿಸುವಂತೆಯೂ
ಮತ್ತೆ ಅನ್ಯವ ತೋರದಿರುವಂತೆಯೂ ಅಂಗಲಾಚಿ ಬೇಡು
ತ್ತಾನೆ. ಇವನು ಯಾರು, ಇವನು ಯಾರ ಕಡೆಯವನು ಎಂದು
ಕೇಳದಂತೆಯೂ, ಇವನು ನಮ್ಮವನು, ನಮ್ಮ ಮನೆಯ ಮಗ
ಎಂದು ಭಾವಿಸುವಂತೆಯೂ ಲಿಂಗದೇವನಿಗೆ ಅಣ್ಣನು ನಮ್ರ
ಯಿಂದ ಬೇಡಿಕೊಳ್ಳುತ್ತಾನೆ. ಮನಸ್ಸಿಗೆ ಅನೇಕವೇಳೆ ಅವನ

ಹೀಗೆ ಸಂಬೋಧಿಸುತ್ತಿದ್ದನು: "ಲಿಂಗವ ನಂಬು ಕಂಡ್ಯಾ ಮನವೇ, ಜಂಗಮವ ನಂಬು ಕಂಡ್ಯಾ ಮನವೇ, ಕೂಡಲ ಸಂಗಮದೇವರ ಬಿಡದೆ ಬೆಂಬತ್ತು ಕಂಡ್ಯಾ ಮನವೇ." ಬೆಂದ ಮನಕ್ಕೆ ಅವನು ಹೀಗೆ ಸೈರಣೆಯಿಂದಲೂ ಸಹನೆಯಿಂದಲೂ ಬಹಳವಾಗಿ ವಿವೇಕ ಹೇಳುತ್ತಿದ್ದನು. ಕೊನೆಗೆ ಸಂಸಾರಬಂಧನ ವನ್ನು ಮಾಣಿಸಿ ತನಗೆ ಕೃಪೆಮಾಡಿ ಪರಮಾತ್ಮನ ಪಾದದಲ್ಲಿ ತನ್ನನ್ನು ಭ್ರಮರನಾಗಿರಿಸುವಂತೆಯೂ, ತನ್ನಲ್ಲಿ ಗುಣದೋಷ ಗಳನ್ನು ಅರಸದೆ ಅನುಗ್ರಹಿಸಬೇಕೆಂದೂ ಬೇಡುವನು.

"ಮೇರು ಗುಣವನರಸುವುದೇ ಕಾಗೆಯಲ್ಲಿ? ಪರುಷ ಗುಣವನರಸುವುದೇ ಕಬ್ಬಿಣದಲ್ಲಿ? ಸಾಧು ಗುಣವನರಸುವದೇ ಅವಗುಣಿಯಲ್ಲಿ? ಚಂದನ ಗುಣವನರಸುವುದೇ ತರುಗಳಲ್ಲಿ? ಸರ್ವಗುಣಸಂಪನ್ನ ಲಿಂಗವೇ ನೀನೆನ್ನಲ್ಲಿ ಅವಗುಣವನರಸು ವುದೇ ಕೂಡಲಸಂಗಮದೇವಾ?" ಎಂದು ಲೋಕದ ಉದಾ ಹರಣೆಗಳೊಡನೆ ತನ್ನ ನಿಲುವನ್ನು ಅಣ್ಣನು ಸಮರ್ಥಿಸುತ್ತಾನೆ.

ಇಷ್ಟಾದರೂ ಅಣ್ಣನ ಉದ್ದೇಶವು ಸುಲಭವಾಗಿ ನೆರ ವೇರಲು ಅನೇಕ ಪ್ರತಿಬಂಧಕಗಳಿದ್ದುವು; ರಾಜಕಾರ್ಯಗಳ ಗೌರವದಿಂದ ಲಿಂಗದ ನಿರಂತರಧ್ಯಾನಸೇವೆಗಳಿಗೆ ಅವನಿಗೆ ವಿರಾಮವಿರಲಿಲ್ಲ. ಸಂಗಮಕ್ಷೇತ್ರದಲ್ಲಿದ್ದಾಗ ಸೇವೆ ನಿರಾತಂಕ ವಾಗಿ ನಡೆಯುತ್ತಿತ್ತು; ಸಂಸಾರಬಂಧನಗಳಿರಲಿಲ್ಲ; ಪ್ರತಿವಾದಿ ಗಳ ಕುಹಕ ಕುಚೇಷ್ಟೆಗಳಿರಲಿಲ್ಲ; ಧರ್ಮಪ್ರಚಾರದ ಜಂಜಾಟ ವಿರಲಿಲ್ಲ. ಪ್ರಶಾಂತವಾತಾವರಣದಲ್ಲಿ ಮುಂಜಾನೆ ಎದ್ದು ಲಿಂಗ ಪೂಜೆಮಾಡಿ, ಅಂಗೈಯೊಳಗಿನ ಲಿಂಗವ ನೋಡುತ್ತ ಕಂಗಳು ಜಡೆಗೋಡಿವರಿವುತ್ತ ಸುರಿವುತ್ತ, ತಾನು ಆಗಾಗ್ಗೆ ಮೂರ್ಛೆ ಗೊಳ್ಳುತ್ತ, ಮತ್ತೆ ಎಚ್ಚೆತ್ತು ಪೂಜೆಮಾಡುತ್ತ, ತನ್ನದೇ ಆದ

ನೂತನ ಮಾರ್ಗದಲ್ಲಿ ಅರ್ಚನೆಮಾಡುತ್ತಿದ್ದನು. ಈಗಲಾದರೋ
ಅವನಿಗೆ ರಾಜಕಾರ್ಯಗಳು ಹೇರಳವಾಗಿರುವುವು. ಇದೂ
ಅಲ್ಲದೆ, ಅವನಿಗೆ ಒಂದಕ್ಕೆ ಎರಡು ಮದುವೆಗಳೂ ಆಗಿದ್ದುವು-
ಗಂಗಾಂಬಿಕೆ, ನೀಲಾಂಬಿಕೆಯರೊಡನೆ ಸಂಸಾರ ಗಂಟುಬಿದ್ದಿತ್ತು.
ನಿಶ್ಚಿಂತೆಯಿಂದ ಇದ್ದವನಿಗೆ ಈ ತೊಡಕುಗಳನ್ನು ಪರಮಾತ್ಮನೇ
ತಂದೊಡ್ಡಿದನು. ಇದೂ ಒಂದು ಉಗ್ರವೂ ತೀಕ್ಷ್ಣವೂ ಆದ
ಸತ್ತ್ವಪರೀಕ್ಷೆ. ಸಂಸಾರದೊಳಗಿದ್ದು ಸಂಸಾರವನ್ನು ಗೆಲ್ಲುವ
ಕಷ್ಟವಾದ ಸಾಧನೆ. ಇದರೊಳಗಿದ್ದರೂ ಇದಕ್ಕೆ ಅಂಟದಂತೆಯೂ,
ಪರಮಾತ್ಮನ ಚಿಂತನೆಮಾಡುವಂತೆಯೂ, ಅವನ ಭಕ್ತರಿಗೂ
ಶರಣರಿಗೂ ವಿನಯದಿಂದ ಸೇವೆಮಾಡುವಂತೆಯೂ ತನಗೆ
ಕರುಣಿಸುವಂತೆ ಅಣ್ಣನು ಈಶ್ವರನನ್ನೇ ಬೇಡುವನು.

ಮನಸ್ಸು ವಿಷಯಸುಖಗಳನ್ನು ಬಯಸುತ್ತ ಈಶ್ವರನನ್ನು
ಮರೆಯುತ್ತ ಅಣ್ಣನನ್ನು ದುರ್ಮಾರ್ಗಕ್ಕೆ ಸೆಳೆಯುತ್ತಿರುವಾಗ
ಅಣ್ಣನು ಈಶ್ವರನ ಚಿಂತನೆಯಲ್ಲಿಯೇ ಮಗ್ನನಾಗಿ, ದೃಢಭಕ್ತಿ
ಎಂಬ ಪಾಶದಿಂದ ಮನಸ್ಸನ್ನು ಈಶ್ವರನ ಪಾದಾರವಿಂದಗಳಲ್ಲಿ
ಕಟ್ಟಿಹಾಕಲು ಶ್ರಮಿಸಿದನು. ಅವನು ಸಾಮಾನ್ಯಜನರಂತೆ
ಸಂಸಾರದ ವ್ಯಾಮೋಹ ಮತ್ತು ಸುಖದ ಭ್ರಮೆಗಳಿಗೆ ಒಳಗಾಗ-
ಲಿಲ್ಲ; ಅವುಗಳಲ್ಲಿ ತಿರುಳಿಲ್ಲವೆಂದು ತಿಳಿದು ಅವನ್ನು ಅಲ್ಲಗಳೆ-
ದನು. ಹಾಗೆಯೇ ಪ್ರತಿಯೊಬ್ಬರೂ ಆತ್ಮಪರೀಕ್ಷೆ ಮಾಡಿಕೊಂಡು
ಈ ದೇಹದಲ್ಲಿ 'ನಶ್ವರವಾದುದು ಯಾವುದು, ಸ್ಥಿರವಾದುದು
ಯಾವುದು?' ಎಂದು ವಿವೇಚಿಸಿ, ಅಲ್ಪಸುಖಕ್ಕಾಗಿ ತನ್ನನು
ಬಲಿಕೊಡದೆ ಶಿವನೊಡನೆ ಬೆರೆಯಬೇಕೆಂದು ಅಣ್ಣನು ತನ್ನ
ಉದಾಹರಣೆಯಿಂದ ತೋರಿಸಿಕೊಟ್ಟನು. ಈ ಸಂಸಾರದಿಂದ
ಮುಕ್ತರಾಗಬೇಕಾದರೂ ಭಗವದನುಗ್ರಹವೇ ಅತ್ಯಾವಶ್ಯಕ

ನಮ್ಮನ್ನು ತೊಡಕಿಗೆ ಸಿಕ್ಕಿಸಿದವನೇ ನಮ್ಮನ್ನು ಆ ತೊಡಕಿನಿಂದ ಬಿಡಿಸಬೇಕು ಎಂದು ಅಣ್ಣನು ಈಶ್ವರನಲ್ಲಿ ಭಕ್ತಿಯಿಂದ ಮೊರೆ ಇಡುತ್ತಾನೆ. ಪರಮಾತ್ಮನೇ ನಮ್ಮ ಆಗುಹೋಗುಗಳೆಲ್ಲಕ್ಕೂ ಮೂಲಕಾರಣನಾಗಿರುವನು. ಅವನೇ ಒಡ್ಡಿರುವ ಈ ಬಲೆಯಿಂದ ನಾವು ಸ್ವಪ್ರಯತ್ನದಿಂದ ಪಾರಾಗಲು ಸಾಧ್ಯವಿಲ್ಲ. ಅವನೇ ಅನುಗ್ರಹ ಮಾಡಿ ತಪ್ಪಿಸಿದರೆ ಇದರಿಂದ ನಮಗೆ ಬಿಡುಗಡೆಯಾದೀತು. ಆದ್ದರಿಂದ ಅಣ್ಣನು ತದೇಕನಿಷ್ಠೆಯನ್ನು ಅನುಗ್ರಹಿಸುವಂತೆಯೂ, ತನ್ನನ್ನು ಅವನ ಕಡೆ ಕರೆದುಕೊಳ್ಳುವಂತೆಯೂ ಬೇಡುವನು. "ನಿನ್ನ ಸೇವೆ ಮಾಡಿಕೊಂಡು ಅನ್ಯ ವಿಷಯವನ್ನು ಬಯಸದೆ ನಿಶ್ಚಿಂತನಾಗಿದ್ದವನನ್ನು ಕಲ್ಯಾಣಪಟ್ಟಣಕ್ಕೆ ಹೋಗೆಂದು ಆಜ್ಞಾಪಿಸಿ, ಇಲ್ಲಿ ಸಂಸಾರದ ತೊಡರನ್ನು ತಂದೊಡ್ಡಿ, ಮನಸ್ಸು ಚಂಚಲವಾಗುವಂತೆ ಏಕೆ ಮಾಡುವೆ? ಧರ್ಮೋದ್ಧಾರಕ್ಕಾಗಿ ಕೈಲಾಸದಿಂದ ಇಲ್ಲಿಗೆ ಕಳುಹಿಸಿ ಈ ಬಾಳನ್ನು ವಿಷಮಸಂಸಾರದ ದುಃಖದಲ್ಲಿ ತಿರುಗಿಸುವುದು ನಿನಗೆ ಧರ್ಮವೆ?" ಎಂದು ಬೇಡುವನು. ಅವನ ಚಿತ್ತಕ್ಕೆ ಮೊದಲೇ ಶಾಂತಿ ಇರಲಿಲ್ಲ. ಕೊನೆಗೆ ರಾಜಕೀಯವೂ ಕೊರಳಿಗೆ ಗಂಟುಬಿದ್ದಿತು. ಕಾಯಕದಿಂದ ದೇಹದಂಡಿಸಿ ತಂದದ್ದರಿಂದಲೇ ಗುರುಜಂಗಮರ ಸೇವೆಮಾಡಬೇಕೆಂದು ತಿಂಗಳಿಗೆ ಸಾವಿರ ಹೊನ್ನು ಸಂಬಳ ತೆಗೆದುಕೊಳ್ಳುತ್ತಿದ್ದಾಗ, ಅದಕ್ಕೆ ತಕ್ಕಂತೆ ಗುರುತರವಾದ ರಾಜಕಾರ್ಯಗಳನ್ನೂ ಅವನು ನೆರವೇರಿಸಬೇಕಾಯಿತು. ಮಂತ್ರಿಪದವಿಯಿಂದ ಗುರುಜಂಗಮರ ಸೇವೆಗೆ ಹಣ ಒದಗುವುದೆಂದು ಒಂದು ಕಡೆ ಸಮಾಧಾನವಿದ್ದರೂ, ಮತ್ತೊಂದು ಕಡೆ ಅಣ್ಣನಿಗೆ ಅಂತರಂಗದಲ್ಲಿ ವಿಶೇಷವಾದ ದುಃಖ ಕವಿದಿತ್ತು. ಈ ಹಣಕ್ಕಾಗಿ ತಾನು ಲಿಂಗವನ್ನು ಮರೆಯು

ಬೇಕಾಯಿತೆಂದು ಬಹಳವಾಗಿ ಗೋಳಾಡುವನು. ಅವನ ಗೋಳಾಟ ನಮ್ಮ ಮನಸ್ಸನ್ನು ಕೆರಳಿಸುತ್ತದೆ.

"ಕಾಂಚನವೆಂಬ ನಾಯ ನೆಚ್ಚಿ ನಿಮ್ಮ ನಾನು ಮರೆದೆನಯ್ಯಾ, ಕಾಂಚನಕ್ಕೆ ವೇಳೆಯಲ್ಲದೆ ಲಿಂಗಕ್ಕೆ ವೇಳೆಯಿಲ್ಲ. ಹಡಕಿಗೆ ಮೆಚ್ಚಿದ ಸೊಣಗನು ಅಮೃತದ ರುಚಿಯ ಬಲ್ಲುದೇ ದೇವಾ ?" "ಉದಯಾಸ್ತಮಾನವೆನ್ನ ಬೆಂದ ಬಸುರಿಂಗೆ ಕುದಿಯಲಲ್ಲದೆ ನಿಮ್ಮ ನೆನೆಯಲು ತೆರಹಿಲ್ಲವಯ್ಯಾ, ಎಂತೊ? ಲಿಂಗತಂದೆ ಎಂತಯ್ಯ ! ಎನ್ನ ಪೂರ್ವಲಿಖಿತ. ಬೆರಣಿಯ— ನಾಯಲಲ್ಲದೆ, ಅಟ್ಟುಣ್ಣ ತೆರಹಿಲ್ಲೆನಗೆ, ನೀ ಕರುಣಿಸು ದೇವಾ." ಮಾಂಸಕ್ಕೆ ಮೆಚ್ಚುವ ನಾಯಿ ಅಮೃತದ ರುಚಿಯ ತಿಳಿಯಲಾರದು. ಮುಂಜಾವದಿಂದ ಸಂಜೆಯವರೆಗೂ ಹೊಟ್ಟೆಬಟ್ಟೆಗಾಗಿ ಈ ಮನವು ಕುದಿಯುತ್ತಲಿರುವುದು. ಈಶ್ವರನನ್ನು ನೆನೆಯಲು ಅಣ್ಣನಿಗೆ ಅವಕಾಶವೇ ದೊರೆಯುತ್ತಿಲ್ಲ. ರಾಜಕಾರ್ಯದಲ್ಲಿ ನಿರತನಾದವನಿಗೆ ಲಿಂಗಪೂಜೆಗೆ ಕಾಲ ಸಿಕ್ಕುತ್ತಿಲ್ಲವೆಂಬ ಚಿಂತೆ ಒಂದು ಕಡೆಯಾದರೆ, ಭವಿ ಬಿಜ್ಜಳನ ಕೈಕೆಳಗೆ ಸೇವೆಮಾಡುವುದು ಒಂದು ದೋಷವೆಂದು ಭಾವಿಸಿ ಜಂಗಮರು ನಿಂದಿಸಿದ್ದನ್ನು ಕೇಳಿ, ಅವರನ್ನು ಸಂತೈಸುವ ತವಕ ಮತ್ತೊಂದು ಕಡೆ. ಭವಿಸಂಪರ್ಕವೂ ಸಂಭಾಷಣೆ ಸಂದರ್ಶನಗಳೂ ನಿಷಿದ್ಧವೆಂದು ಬೋಧಿಸುತ್ತಿದ್ದ ಅಣ್ಣನು ಭವಿಯ ಆಶ್ರಯದಲ್ಲಿಯೇ ಇರಬೇಕಾಯಿತು. ಇದರಿಂದ ಆಚರಣೆ ಬೋಧೆಗಳು ವಿರುದ್ಧವಾಗಲಿಲ್ಲವೆ? ಆದರೆ ಅಣ್ಣನು ಸ್ವಂತ ಲಾಭಕ್ಕಾಗಿ ಬಿಜ್ಜಳನಲ್ಲಿ ಸೇವೆ ಮಾಡುತ್ತಿರಲಿಲ್ಲ. ಸಂಗಮನಾಥನ ಸೇವೆಗಾಗಿಯೇ ಅವನು ಆ ಕೆಲಸವನ್ನು ಕೈಗೊಂಡಿದ್ದುದಾಗಿ ಭಾವಿಸಿದ್ದನು. ತನ್ನ ಸ್ಥಾನದ ಮಹತ್ತ್ವವೂ ತಾನು ಸಂಪಾದಿಸಿದ ಹಣವೂ

ಧರ್ಮೋದ್ಧಾರಕ್ಕೆ ಬೆಂಬಲವೆಂದು ಅಣ್ಣನು ಸಮಾಧಾನ ಮಾಡಿಕೊಳ್ಳುತ್ತಿದ್ದನು. ಯಾವ ರೀತಿಯಿಂದಾದರೂ ಗುರು ಲಿಂಗಜಂಗಮರ ಸೇವೆ ನಡೆಯಲೆಂಬುದೇ ಅವನ ಆಶಯ. ಅಣ್ಣನು ತನ್ನ ಕಾಯಕದ ಬಗ್ಗೆ ಹೀಗೆ ಅಭಿಪ್ರಾಯಪಡುತ್ತಾನೆ:

"ನಾನು ಆರಂಬವ ಮಾಡುವೆನಯ್ಯಾ ಗುರುಪೂಜೆಗೆಂದು, ನಾನು ಬೆವಹಾರವ ಮಾಡುವೆನಯ್ಯ ಲಿಂಗಪೂಜೆಗೆಂದು, ನಾನು ಪರಸೇವೆಯ ಮಾಡುವೆನಯ್ಯ ಜಂಗಮದಾಸೋಹಕ್ಕೆಂದು. ನಾನಾವ ಕರ್ಮಂಗಳ ಮಾಡಿದಡೆಯೂ ಆ ಕರ್ಮಫಲಭೋಗವ ನೀ ಕೊಡುವೆ ಎಂಬುದ ನಾನು ಬಲ್ಲೆನು. ನೀ ಕೊಟ್ಟ ದ್ರವ್ಯವ ನಿಮಗಲ್ಲದೆ ಮತ್ತೊಂದು ಕ್ರಿಯೆ ಮಾಡೆನು. ನಿಮ್ಮ ಸೊಮ್ಮ ನಿಮಗೆ ಸಲ್ಲಿಸುವೆನು ದೇವ." "ಹೊತ್ತಾರೆ ಎದ್ದು ಕಣ್ಣ ಹೊಸೆವುತ್ತ, ಎನ್ನ ಒಡಲಿಂಗೆ, ಎನ್ನ ಒಡವೆಗೆ, ಎನ್ನ ಮಂಡದಿ ಮಕ್ಕಳಿಗೆಂದು ಕುದಿದೆನಾದರೆ, ಎನ್ನ ಮನಕ್ಕೆ ಮನವೇ ಸಾಕ್ಷಿ. ಭವಿಬಿಜ್ಜಳನ ಗದ್ದುಗೆಯ ಕೆಳಗೆ ಕುಳ್ಳಿರ್ದು ಓಲೈಸಿಹೆನೆಂದು ನುಡಿವರಯ್ಯ ಪ್ರಮಥರು. ಕೊಡುವೆನುತ್ತರವನವರಿಗೆ. ಕೂಡ ಲಮ್ಮ, ಹೊಲೆಹೊಲೆಯರ ಮನೆಯ ಹೊಕ್ಕಾದರೆಯೂ, ಸಲೆ ಕೈಕೂಲಿಯ ಮಾಡಿಯಾದರೆಯೂ ನಿಮ್ಮ ನಿಲವಿಂಗೆ ಕುದಿವೆ ನಲ್ಲದೆ, ಎನ್ನೊಡಲವಸರಕ್ಕೆ ಕುದಿದೆನಾದರೆ ತಲೆದಂಡ." ಇಷ್ಟೊಂದು ನಿಷ್ಠೆಯಿಂದ ಪ್ರಪಂಚವ್ಯವಹಾರಗಳನ್ನು ಗುರು ಲಿಂಗಜಂಗಮರ ಸೇವೆಗಾಗಿಯೇ ನಡೆಸುತ್ತ, ಅಣ್ಣನು ಧರ್ಮೋ ದ್ಧಾರವೇ ತನ್ನ ಜೀವನದ ಸರ್ವಸ್ವವೆಂದು ಆಣೆ ಇಟ್ಟುಕೊಳ್ಳು ವನು. ಇದರಿಂದ ಅವನ ಮನಸ್ಸು ಸ್ತಿಮಿತವಾಗಿ ಒಂದೇ ಕಡೆ ನಿಂತಿರಲಿಲ್ಲವೆಂದು ತಿಳಿಯುತ್ತದೆ. ಒಂದು ಕಡೆ ರಾಜ ಕಾರ್ಯ, ಇನ್ನೊಂದು ಕಡೆ ಧರ್ಮಪ್ರಚಾರ, ಮತ್ತೊಂದು ಕಡೆ

ಆಕ್ಷೇಪಣೆಗಳನ್ನು ಸಹಿಸಿಕೊಂಡು ಸಮಾಧಾನಪಟ್ಟುಕೊಳ್ಳು ವುದು. ಇಂತಹ ಸ್ಥಿತಿಯಲ್ಲಿ ಮನಸ್ಸು ಹೇಗೆ ತಾನೆ ಒಂದೆಡೆ ನಿಂತು ಸಂಗಮಲಿಂಗನನ್ನು ಧ್ಯಾನಿಸಬಲ್ಲದು? ಅವನು ತನ್ನ ಮನದ ಜಂಜಾಟವನ್ನು ನಿರ್ವಂಚನೆಯಿಂದ ತಿಳಿಸುತ್ತಾನೆ.

"ಎಂತು ಶಿವಾಚಾರವೆನಗೆ ಸಾಧ್ಯವಪ್ಪುದಯ್ಯ. ಕಾಮ ಕ್ರೋಧ ಲೋಭ ಮೋಹ ಮದ ಮತ್ಸರಂಗಳಿಂದ ಕಟ್ಟು ವಡೆದೆನು. ಹಸಿವು ತೃಷೆ ವ್ಯಸನಂಗಳಿಂದ ಕುದಿಯುತ್ತಿದ್ದೇನೆ. ಪಂಚೇಂದ್ರಿಯ ಸಪ್ತಧಾತು ಹುರಿಹಂಚುಮಾಡಿ ಕಾಡಿಹವಯ್ಯ. ಅಯ್ಯಾ, ಎನ್ನ ಹುಯ್ಯಲ ಕೇಳಯ್ಯ ದೇವ!"

"ಮನ ಮನ ಬೆರಸಿದಲ್ಲಿ ತನು ಕರಗದಿದ್ದರೆ, ಸೋಂಕಿನಲ್ಲಿ ಪುಳಕಂಗಳು ಹೊರಹೊಮ್ಮದಿದ್ದರೆ, ಕಂಡಾಗಳಶ್ರುಜಲಂಗಳು ಸುರಿಯದಿದ್ದರೆ, ನುಡಿಯಲ್ಲಿ ಗದ್ಗದಂಗಳು ಪೊಣ್ಮದಿದ್ದಡೆ, ಕೂಡಲಸಂಗಮದೇವನ ಭಕ್ತಿಗಿದು ಚಿಹ್ನ ಎನ್ನಲ್ಲಿ ಇಲ್ಲವಾಗಿ ಆನು ಡಂಭಕ ಕಾಣಿರೇ." ಹೀಗೆ ಅಣ್ಣನು ಒಮ್ಮೆ ತನ್ನ ಭಕ್ತಿಯ ಬಗ್ಗೆ ಮತ್ತು ನಿಷ್ಠೆಯ ಬಗ್ಗೆ ಸಂಶಯಪಡುವನು. ಮರುಕ್ಷಣವೇ ತನ್ನನ್ನು ತಾನೇ ತಿದ್ದಿಕೊಂಡು ಈಶ್ವರನ ಸೇವೆಗೆ ಸಿದ್ಧನಾಗು ವನು. ಈಶ್ವರನಿಗೆ ತೊತ್ತುಗೆಲಸವ ಮಾಡದವನ ಸಂಸಾರ ಎಷ್ಟು ನಿಂದ್ಯವೆಂಬುದನ್ನು ಮನಮುಟ್ಟುವಂತೆ ಅಣ್ಣ ತಿಳಿಸು ತ್ತಾನೆ: "ಹೊತ್ತಾರೆ ಎದ್ದು ಲಿಂಗದೇವನ ದೃಷ್ಟಿಯಾರೆ ನೋಡ ದವನ ಸಂಸಾರವೇನವನ ? ಬಾಳುವೇನವನ ? ನಡೆಯೇನವನ ? ನುಡಿಯೇನವನ ? ದೇವ, ನಿಮ್ಮ ತೊತ್ತುಗೆಲಸವ ಮಾಡದವನ ಸಂಸಾರವೇನವನ?"

ಯೌವನವನ್ನನುಭವಿಸಿ ಮುದುಕನಾದಮೇಲೆ ಈಶ್ವರನ ಚಿಂತನೆ ಮಾಡಬೇಕೆಂಬ ಚಪಲ ಮನುಷ್ಯನಿಗೆ ಸಹಜವಾಗಿರು

ತ್ತದೆ. ಅದನ್ನು ಅಣ್ಣನು ಖಂಡಿಸಿ—ಈ ದೇಹವಲ್ಲಿ ಶಕ್ತಿ ಇರುವಾಗಲೇ, ಬೆನ್ನುಬಾಗಿ ಅನ್ಯರಿಗೆ ಹಂಗಾಗವ ಮುನ್ನವೇ, ಕಾಲಮೇಲೆ ಕೈಯನೂರಿ ಕೋಲ ಹಿಡಿಯುದ ಮುನ್ನವೇ, ದೇವನನ್ನು ಪೂಜಿಸಿ ಜನ್ಮಸಾರ್ಥಕ್ಯವನ್ನು ಪಡೆಯುವಂತೆ ಅಣ್ಣನು ಮಾನವನಿಗೆ ಎಚ್ಚರಿಸಿದ್ದಾನೆ. ಹೊತ್ತುಹೋಗದ ಮುನ್ನ, ಮೃತ್ಯು ಒಯ್ಯದ ಮುನ್ನ, ನಿತ್ಯ ನಿತ್ಯ ಶಿವರಾತ್ರಿಯ ಮಾಡುವಂತೆಯೂ ಮತ್ತು ಲಿಂಗದೇವನೊಳಗೆ ಸಮರಸವಾಗಿ ಬೆರೆಯುವಂತೆಯೂ ಅವನು ಮಾನವನಿಗೆ ಎಚ್ಚರಿಸಿದ್ದಾನೆ. ಮಾನವನಿಗೆ ಲಿಂಗಾರ್ಚನೆ ಮತ್ತು ಫಲಸಮರ್ಪಣೆಗಳಿಗಿಂತಲೂ ಬೇರೆ ಸಂತೋಷದ ಸಮಾರಂಭವಿರದು. ಅಣ್ಣನು ಕರ್ಣಾಟಕದ ಮಂತ್ರಿಯಾಗಿ ತನ್ನ ಜೀವನವನ್ನು ಹೀಗೆ ಪವಿತ್ರಕಾರ್ಯದಲ್ಲಿ ಸದುಪಯೋಗಪಡಿಸಲು ಅವಕಾಶವನ್ನು ಕಲ್ಪಿಸಿಕೊಳ್ಳುತ್ತಿದ್ದನು. ಅವನ ದೈನಂದಿನ ಜೀವನ ಹೀಗೆ ಸಾಗುತ್ತಿತ್ತು.

"ಅಷ್ಟವಿಧಾರ್ಚನೆ, ಷೋಡಶೋಪಚಾರವ ಮಾಡುವುದು, ಮಾಡಿದ ಪೂಜೆಯ ನೋಡುವುದಯ್ಯ, ಶಿವತತ್ತ್ವಗೀತವ ಪಾಡುವುದು. ಶಿವನ ಮುಂದೆ ನಲಿದಾಡುವುದಯ್ಯ, ಭಕ್ತಿ ಸಂಭಾಷಣೆಯ ಮಾಡುವುದು, ನಮ್ಮ ಸಂಗಯ್ಯನ ಕೂಡುವುದು." ಕರ್ಣಾಟಕದ ಮಂತ್ರಿ ಹೀಗೆ ಲಿಂಗಾರ್ಚನೆಯಿಂದ ಸಕಲ ದುರಿತ ಬಂಧನಗಳಿಂದಲೂ ಅಪಮೃತ್ಯು ಕಾಲಕರ್ಮ ಪಾಶಗಳಿಂದಲೂ ಬಿಡುಗಡೆಹೊಂದಿ, ಸತ್ಯಶುದ್ಧಕಾಯಕದಲ್ಲಿ ನಿರತನಾಗಿ, ಜಗತ್ತನ್ನು ಶಿವಭಾವನೆಯಿಂದಲೂ, ಸಮದೃಷ್ಟಿಯಿಂದಲೂ, ಆತ್ಮೀಯತೆ ಯಿಂದಲೂ ಕಾಣುತ್ತ ಇಂದಿಗೂ ದಿವ್ಯಆದರ್ಶವಾಗಿ ಎಲ್ಲರ ಹೃದಯದಲ್ಲೂ ನೆಲಸಿರುವುದು ಮಾನವ ಸಮಾಜದ ಸೌಭಾಗ್ಯ ವೆನಿಸಿದೆ.

ಅಣ್ಣನ ಆಧ್ಯಾತ್ಮಿಕ ಪ್ರಗತಿ

ಮಂತ್ರಿಯಾಗಿ ಸಕಲಸಂಪದ್ವೈಭವಗಳಿಂದ ಕೂಡಿದ್ದರೂ ಅಣ್ಣನು ಲಿಂಗಾರ್ಚನೆ ಗುರುಜಂಗಮರ ಆರಾಧನೆಗಳನ್ನು ತಾನೇ ದೇಹದಂಡಿಸಿ ಮಾಡುತ್ತಿದ್ದುದು ಸರ್ವೋತ್ತಮವಾದ ಆದರ್ಶ ವೆನಿಸಿದೆ. ತನ್ನ ರತಿಸುಖಕ್ಕಾಗಿ ತಾನೇ ಶ್ರಮಿಸುವನಲ್ಲದೆ ಬೇರೆಯವರ ಕೈಲಿ ಯಾರೂ ಮಾಡಿಸುವುದಿಲ್ಲ. ಹಾಗೆಯೇ ಲಿಂಗಪೂಜೆಯನ್ನೂ ಗುರುಜಂಗಮರ ಸೇವೆಯನ್ನೂ ತಾನೇ ಮಾಡಬೇಕಲ್ಲದೆ ಬೇರೆಯವರಿಂದ ಮಾಡಿಸಿದರೆ, ಅದು ಡಂಭಾ ಚಾರವೆನಿಸುವುದು. "ಭಕ್ತನಾಗಿ ಗುರುಲಿಂಗಜಂಗಮರ ಪೂಜಿಸ ಬೇಕಲ್ಲದೆ ತನ್ನ ತಾ ಪೂಜಿಸಿಕೊಂಬುದು ಎಂತಯ್ಯಾ" "ತನ್ನ ಲಿಂಗಕ್ಕೆ ಮಾಡುವ ನಿತ್ಯ ನೇಮವ ತಾ ಮಾಡಬೇಕಲ್ಲದೆ, ಬೇರೆ ಮತ್ತೊಬ್ಬರ ಕೈಯಲ್ಲಿ ಮಾಡಿಸಬಹುದೆ? ಕೆಮ್ಮನೆ ಉಪ ಚಾರಕ್ಕೆ ಮಾಡುವರಲ್ಲದೆ ನಿಮ್ಮನೆತ್ತಬಲ್ಲರು ದೇವ." "ಹಸಿವಾದ ಡುಂಬುದನು. ಸತಿಯ ಸಂಭೋಗವನು, ಆನಾಗಿ ನೀವೂ ಡೆಂಬುವರುಂಟೆ? ಮಾಡಿ ತನು ಸವೆಯದಿದ್ದರೆ, ಮನ ಸವೆಯ ದಿದ್ದರೆ, ಧನ ಸವೆಯದಿದ್ದರೆ ಭಕ್ತಿ ಎಂಬುದು ಸಲ್ಲದು." ಅಣ್ಣನು ಉನ್ನತಾಧಿಕಾರಿಯಾಗಿದ್ದರೂ ತಾನೇ ಸ್ವತಃ ನಿಂತು ಗುರುಲಿಂಗ ಜಂಗಮರ ಸೇವೆಯಲ್ಲಿ ತನುಮನಧನಗಳನ್ನು ಉಪಯೋಗಿಸು ತ್ತಿದ್ದನು. ಇಷ್ಟಾದರೂ ಅವನಿಗೆ ಈಶ್ವರನ ಚಿತ್ಪ್ರಕಾಶದ ಸಾಕ್ಷಾತ್ಕಾರವು ಅಂತರಂಗದಲ್ಲಿ ಲಭಿಸದೆ ಇದ್ದುದರಿಂದ ಅವನಿಗೆ ತೃಪ್ತಿ ಸಮಾಧಾನಗಳು ದೊರೆಯಲಿಲ್ಲ. ತಾನು ಭಕ್ತನೆಂಬ ಭಾವವನ್ನು ಮರೆತು, ಬ್ರಹ್ಮಾನಂದದಲ್ಲಿ ಮುಳುಗುವವರೆಗೂ ಭಕ್ತನಿಗೆ ಶಾಂತಿ ಲಭಿಸದು. ಅದು ಆಗುವವರೆಗೆ ತನ್ನ ಭಕ್ತಿಯು ಸರಿಯಾದುದಲ್ಲವೆಂದು ಅವನ ಮನಕ್ಕೆ ಗೋಚರ

ವಾಗುವುದು, ತೀವ್ರ ವ್ಯಥೆಯೂ ಆಗುವುದು. ಎಷ್ಟು ಪೂಜೆ ಮಾಡಿದರೂ ಅವನಿಗೆ ಈಶ್ವರನ ದಯೆ ಬರಲಿಲ್ಲವೆಂಬ ವ್ಯಥೆಯುಂಟಾಗುವುದು. ಸಂಗಮೇಶ್ವರನು ಅವನಿಗೆ ಭಾವ ಶುದ್ಧಿಯನ್ನೂ ದೃಢಭಕ್ತಿಯನ್ನೂ ದಯಪಾಲಿಸದೆ ನಿಷ್ಕರುಣಿಯಾದನಲ್ಲಾ ಎಂಬ ವ್ಯಥೆ ಅಣ್ಣನಿಗುಂಟಾಗುವುದು. ನೊಂದ ಹೃದಯದಿಂದ ಅವನು ಹೀಗೆ ಹೇಳುವನು:

"ಅಕಟಕಟ, ಶಿವ, ನಿನಗಿನಿತು ಕರುಣವಿಲ್ಲ, ಅಕಟಕಟ, ಶಿವ, ನಿನಗಿನಿತು ಕೃಪೆಯಿಲ್ಲ. ಏಕೆ ಹುಟ್ಟಿಸಿದೆ ಇಹಲೋಕ ದುಃಖಿಯ, ಪರಲೋಕದೂರನ? ಏಕೆ ಹುಟ್ಟಿಸಿದೆ, ಕೂಡಲ ಸಂಗಮದೇವ, ಕೇಳಯ್ಯ, ಎನಗಾಗಿ ಮತ್ತೊಂದು ತರುಮರಾದಿಗಳಿದ್ದಿಲ್ಲವೆ?" ಎಂದು ಅಣ್ಣನು ದುಃಖಿಸುತ್ತಿದ್ದನು. ದೃಢಭಕ್ತಿಯೂ ಸರ್ವಾತ್ಮೈಕಭಾವವೂ ಒಮ್ಮೆಯೇ ಹೇಗೆ ಬಂದಾವು? ತನ್ನನ್ನು ನಂಬುಗೆಯಿಲ್ಲದ ಡಂಭಕನೆಂದು ಅಣ್ಣನು ಹೇಳಿಕೊಳ್ಳುವನು. ಸಂಶಯಸ್ವಭಾವದವನಿಗೆ ದೇವನು ಒಮ್ಮೆಗೆ ಒಲಿಯನು. ಅವನಿಗೆ ತನ್ನ ಕರ್ತವ್ಯದಲ್ಲಿ ಔದಾಸೀನ್ಯವೂ ಸಹಜ. ಒಂದು ಕ್ಷಣಕಾಲದ ಉದಾಸೀನವಾದರೂ ಸಾಕು, ಮಾಡಿದ ಭಕ್ತಿಯೆಲ್ಲವೂ ನೀರಿನಲ್ಲಿ ಹೋಮಮಾಡಿದಂತಾಗುವುದು. ಮನದಲ್ಲಿ ದೃಢವಿಲ್ಲದೆ, ದಾಸೋಹವನ್ನು ಎಷ್ಟು ಕಾಲ ಮಾಡಿದರೇನು? ಅನಂತಕೋಟಿ ಸನ್ಮಾನವ ಮಾಡಿದರೇನು? ಕಲ್ಲು ಎಷ್ಟು ಹೊತ್ತು ನೀರೊಳಗಿದ್ದರೂ ನೆನೆದು ಮೃದುವಾಗಲಾರದು. ಮಸಿಯನ್ನು ಎಷ್ಟು ಹೊತ್ತು ತಿಕ್ಕಿದರೂ ಬಿಳಿದಾಗಲಾರದು. ಧನದ ನಿಧಿಯನ್ನು ಕಾಯ್ದುಕೊಂಡಿದ್ದ ಪಿಶಾಚಿಯಂತೆ ಅಣ್ಣನ ಸ್ಥಿತಿಯಾಯಿತು. ಹೀಗೆ ಭಕ್ತಿಯ ಆಚರಣೆಯಲ್ಲಿ ತನ್ನಲ್ಲಿಯೇ ಕುಂದುಕೊರತೆಗಳಿರುವುದು ಅವನ ಮನಸ್ಸಿಗೆ ಗೋಚರವಾಗುವುದು.

ಆದರೆ, ಅವನ ಹೃದಯದಲ್ಲಿ ತೀವ್ರವಾಗಿ ಸುಡುತ್ತಿದ್ದ ಚಿಂತಾಗ್ನಿ ಹೊರಗಿನ ಜನರಿಗೆ ತಿಳಿಯುತ್ತಿರಲಿಲ್ಲ.

ಅವನ ಮನಸ್ಸಿನಲ್ಲಿ ನಾನಾ ಬಗೆಯ ಯೋಚನೆಗಳು ತಲೆದೋರುತ್ತಿದ್ದುವು. ಲಿಂಗದೇವನು ಏಕೆ ಒಲಿಯಲಿಲ್ಲ, ಜಾತಿಯಲ್ಲಿ ಇವನು ಬ್ರಾಹ್ಮಣನೆಂದು ದೇವನು ಆಲೋಚಿಸಿರಬಹುದೆ ? ಆತ್ಮ ಪರಿಶುದ್ಧವಾಗಿಲ್ಲವೆಂದೂ ಇವನಲ್ಲಿ ಜಾತಿಯ ಅಹಂಕಾರವಿದೆಯೆಂದೂ ಅವನು ಭಾವಿಸಿರಬಹುದೆ ? ಉತ್ತಮ ಕುಲದಲ್ಲಿ ಹುಟ್ಟಿದೆನೆಂಬ ಕಷ್ಟತನದ ಹೊರೆಯನ್ನು ಜನರು ಹೊರಿಸಿದರೆಂದು ಸ್ವಾಮಿಯಲ್ಲಿ ಬೇಡುವನು. "ನಾನು ಬ್ರಾಹ್ಮಣನಲ್ಲ. ಆದರೆ, ನಿಮ್ಮ ಶರಣರ ಮನೆಯ ಕಿಂಕರನಯ್ಯ, ನೀರಿಂಗೆ ನೇಣಿಂಗೆ ಅಂದೇ ಹೊರಗಾದೆನಯ್ಯ" ಎಂದು ಅವನು ಬೇಡಿಕೊಳ್ಳುವನು. ಅಣ್ಣನ ಮೊರೆಯನ್ನೂ ನಿವೇದನವನ್ನೂ ಕೇಳಿದರೆ ನಮ್ಮ ಹೃದಯವು ಕರಗಿ ನೀರಾಗುವುದು. ಸರಳ ಮನೋಭಾವ, ತ್ರಿಕರಣಶುದ್ಧಿ, ಭಗವತ್ಕೈಂಕರ್ಯ, ದುಃಖಾರ್ತತೆ, ನಿಷ್ಕಪಟವರ್ತನೆ ಮೊದಲಾದ ಅಣ್ಣನ ಅಸಾಧಾರಣ ಗುಣಗಳಿಂದ ಅವನನ್ನು, ಆದರ್ಶವ್ಯಕ್ತಿಯೆಂದು ನಾವು ಭಾವಿಸುತ್ತೇವೆ.

ಹೀಗೆ ಅವನು ದುಃಖಿಸುತ್ತ ಶಿವನು ಏಕೆ ಒಲಿಯಲಿಲ್ಲವೆಂದು ಚಿಂತಿಸುತ್ತಿರುವಾಗ, ಸುತ್ತಮುತ್ತಣ ಜಂಗಮರು ಅವನ ಬೆಂದ ಮನವನ್ನು ಮತ್ತಷ್ಟು ಕೆರಳಿಸುತ್ತಿದ್ದರು. "ಅಣ್ಣನು ಎಂತಹ ಭಕ್ತನಯ್ಯ ! ಎಷ್ಟು ಉದಾರಿ ! ಅದೇನು ದಾಸೋಹ ! ಮೂರು ಲೋಕದಲ್ಲಿಯೂ ಇಂತಹ ನಿಷ್ಠಾವಂತನನ್ನು ನಾವು ಕಂಡುದಿಲ್ಲ" ಎಂದು ಜಂಗಮರು ಅಣ್ಣನನ್ನು ಸ್ತೋತ್ರಮಾಡಲಾರಂಭಿಸಿದರು. ಅವರಿಗೆ ಅದರಲ್ಲಿ ದುರುದ್ದೇಶವಿಲ್ಲದಿದ್ದರೂ

ಅಣ್ಣನನ್ನು ಸದ್ಭಕ್ತನೆಂದು ಅವರು ಮೆಚ್ಚಿಕೊಳ್ಳುತ್ತಿದ್ದರೂ ಅಣ್ಣನಿಗೆ ಇದನ್ನು ಕೇಳಿ ಮತ್ತಷ್ಟು ದುಃಖವಾಗುತ್ತಿತ್ತು.

"ಎನ್ನಲ್ಲಿ ಭಕ್ತಿ, ಸಾಸಿವೆಯ ಷಡ್ಭಾಗದಿನಿತಿಲ್ಲ, ಎನ್ನ ಭಕ್ತನೆಂಬರು, ಎನ್ನ ಸಮಯಾಚಾರಿ ಎಂಬರು. ನಾನೇನು ಪಾಪವ ಮಾಡಿದೆನೋ, ಬೆಳೆಯದ ಮುನ್ನವೇ ಕೊಯ್ಯುವರೆ ಹೇಳಾ." "ಎನ್ನವರೊಲಿದು ಹೊನ್ನಶೂಲದಲಿಕ್ಕಿದರೆನ್ನ ಹೊಗಳಿ ಹೊಗಳಿ. ಎನ್ನ ಹೊಗಳಿಕೆ ಎನ್ನ ಮೈಗೊಂಡಿತ್ತಲ್ಲಾ. ಅಯ್ಯೋ ನಿನ್ನ ಮನ್ನಣೆಯೇ ಮಸೆದಲಗಾಗಿ ತಾಗಿತ್ತಯ್ಯ. ಅಯ್ಯೋ ನೊಂದೆನು, ಸೈರಿಸಲಾರೆನು, ದೇವಾ, ನೀನೆನಗೊಳ್ಳಿದನಾದರೆ, ಎನ್ನ ಹೊಗಳತೆಗಡ್ಡ ಬಾರಾ, ಧರ್ಮಾ" ಎಂದು ಅಣ್ಣನು ದೇವನಲ್ಲಿ ಮೊರೆಯಿಟ್ಟು ಕಣ್ಣೀರು ಸುರಿಸುತ್ತಿದ್ದನು. ಜನರು ತನ್ನನ್ನು ಹೊಗಳದಂತೆ ಮಾಡಬೇಕೆಂದು ಶಿವನಲ್ಲಿ ಅನನ್ಯಭಕ್ತಿಯಿಂದ ಪ್ರಾರ್ಥಿಸುವನು.

ಜನರ ಹೊಗಳಿಕೆ ಅಣ್ಣನಮೇಲೆ ತನ್ನ ಪರಿಣಾಮವನ್ನು ಬೀರದೆ ಹೋಗಲಿಲ್ಲ. ಮಾನವಪ್ರಕೃತಿಗೆ ಸಹಜವಾದ ಅಹಂಕಾರವು ಅವನಲ್ಲೂ ಕೆಲವು ಕಾಲ ನೆಲಸಿ 'ನಾನು ಮಾಡುತ್ತೇನೆ, ನೀಡುತ್ತೇನೆ' ಎಂಬ ಮಮತೆಯನ್ನು ಹುಟ್ಟಿಸಿತು. ಜನರೆಲ್ಲರೂ ಅಣ್ಣನನ್ನು ಭಕ್ತಶಿರೋಮಣಿ, ಭಕ್ತಿಭಂಡಾರಿ ಎಂದು ಪ್ರಶಂಸಿಸುತ್ತಿದ್ದಾಗ, ಅವನಿಗೆ ಸ್ವಲ್ಪಸ್ವಲ್ಪ ಮೈಯುಬ್ಬಲಾರಂಭಿಸಿತು. ಅಲ್ಲಮಪ್ರಭು ಅಣ್ಣನಿಗೆ ತಿಳಿವಳಿಕೆಯನ್ನು ಕೊಟ್ಟು ಈ ಅಹಂಕಾರವನ್ನು ಕಳೆಯಬೇಕಾಯಿತು. ಬೇಡಿದವರಿಗೆಲ್ಲರಿಗೂ ನೀಡುವೆನೆಂಬ ಭಾಷೆ ವಿಪರೀತಕ್ಕಿಟ್ಟುಕೊಂಡಿತು. "ಏನಬೇಡಿದಡೀವೆ, ಬೇಡು ಬೇಡೆಲೆ ಹಂದೆ" ಎಂದು ಅಣ್ಣನು ಕಂಡಕಂಡವರಿಗೆಲ್ಲ ಕೇಳಲಾರಂಭಿಸಿದನು. ಅವನ ಕೇಳಿಕೆಯಲ್ಲಿ ಔದಾರ್ಯವಿದ್ದರೂ, ಕೊಂಚ ಹಮ್ಮು ಅಂಟಿಕೊಂಡಿದೆ.

"ತನುವ ಬೇಡಿದಡೀವೆ, ಮನವ ಬೇಡಿದಡೀವೆ, ಧನವ ಬೇಡಿದಡೀವೆ, ಬೇಡು ಬೇಡೆಲೆ ಹಂದೆ, ಕಣ್ಣ ಬೇಡಿದಡೀವೆ, ತಲೆಯ ಬೇಡಿದಡೀವೆ, ದೇವಾ, ನಿಮಗಿತ್ತು ಶುದ್ಧನಾಗಿಪ್ಪೆ ನಿಮ್ಮ ಪುರಾತನರ ಮನೆಯಲ್ಲಿ."

"ಕಂದಿದೆನಯ್ಯಾ ಎನ್ನ ನೋಡುವರಿಲ್ಲದೆ, ಕುಂದಿದೆನಯ್ಯಾ ಎನ್ನ ನುಡಿಸುವರಿಲ್ಲದೆ, ಬಡವಾದೆನಯ್ಯಾ ಎನ್ನ ತನುಮನಧನವ ಬೇಡುವರಿಲ್ಲದೆ, ಕಾಡುತ ಬೇಡುವ ಶರಣರ ತಂದು ಕಾಡಿಸು ಬೇಡಿಸು ದೇವ." ಅಲ್ಲಮಪ್ರಭುವಿಗೆ ಬಸವಣ್ಣನ ಈ ಮಾತು ಗಳನ್ನು ಕೇಳಿ ಆಶ್ಚರ್ಯವುಂಟಾಗುವುದು. ಅವನ ಭಕ್ತಿಯ ಆಚರಣೆಯಲ್ಲಿ ಅಹಂಕಾರಮಮಕಾರಗಳನ್ನು ತಿದ್ದಿ ಸರಿಪಡಿಸು ವುದಕ್ಕಾಗಿಯೇ ಪ್ರಭು ಬಸವಣ್ಣನ ಬಳಿ ಬರುವನು. ಆಗ ಅಣ್ಣನು ಶಿವಪೂಜೆಯಲ್ಲಿ ಕುಳಿತಿದ್ದುದರಿಂದ, ಅತಿಥಿಯನ್ನು ಕರೆತರಲು ಹಡಪದಪ್ಪಣ್ಣನನ್ನು ಕಳುಹಿಸುವನು. ಇದು ಪ್ರಭು ವಿಗೆ ಒಪ್ಪಿಗೆಯಾಗಲಿಲ್ಲ. "ಮನವು ಲಿಂಗದಲ್ಲಿ ಲೀನವಾಗಿದ್ದ ವರಿಗೆ, ಬಾಗಿಲಲ್ಲಿ ಅತಿಥಿ ಬಂದಿರುವನೆಂಬ ಹೊರಗಿನ ಅರಿವು ಹೇಗೆ ಇದ್ದೀತು? ಬಂದವನನ್ನು ಕರೆತರುವಂತೆ ಹೇಗೆ ಹೇಳಿ ಯಾನು? ಲಿಂಗದ ಪ್ರಾಣವೇ ಜಂಗಮವೆಂದು ತಿಳಿದವನು ಬಾಗಿಲಲ್ಲಿ ಜಂಗಮನಿರುವಾಗ್ಯೆ ಒಳಗೆ ಹಮ್ಮಿನಿಂದ ಹೇಗೆ ಕುಳಿತಿದ್ದಾನು?" ಎಂದು ಪ್ರಭು ಅಣ್ಣನ ನಡತೆಯನ್ನು ಖಂಡಿಸಿ ದನು. ಪ್ರಭು ಅಣ್ಣನಿಗೆ ಸೂಕ್ತವಾಗಿಯೇ ಉತ್ತರಿಸುವನು. "ಆನಾಗದ ಮುನ್ನ ತಾನಾದೆನೆಂಬವರಲ್ಲಿಗೆ ಗುಹೇಶ್ವರಲಿಂಗವು ಅಡಿ ಇಡುವನಲ್ಲ. ಬಂದವರಾರೆಂದರಿಯದೆ, ನಿಂದ ನಿಲವ ನರಿಯದೆ ಅಹಂಕಾರದಿಂದ ಮೆರೆವವರ ಬಳಿಗೆ ಗುಹೇಶ್ವರನು ಸುಳಿಯನು" ಎಂಬ ತಿಳುವನ್ನು ನೀಡಿ ಪ್ರಭುವು ಅಣ್ಣನಿಗೆ

ನಿಜವಾದ ಭಕ್ತಿಯ ಸ್ವರೂಪವನ್ನು ತಿಳಿಸುವನು. ಅಣ್ಣನು ಬಾಹ್ಯಪೂಜಾಡಂಬರದಲ್ಲಿಯೇ ಮಗ್ನನಾಗಿ ಪ್ರಾಣದ ಚಿತ್ ಪ್ರಕಾಶದಲ್ಲಿ ಐಕ್ಯನಾಗದೆ, ಪರಮಾನಂದವನ್ನು ಅನುಭವಿಸದೆ ಇರುವುದಕ್ಕಾಗಿ ಪ್ರಭು ವಿಷಾದಿಸುತ್ತಾನೆ. ಪ್ರಾಣಲಿಂಗ ಸಂಬಂಧವಿಲ್ಲದೆ ಸಾಕಾರದ ಪೂಜೆಯಲ್ಲಿಯೇ ಎಷ್ಟು ಕಾಲವಿದ್ದರೂ ವ್ಯರ್ಥವೇ ಆದೀತೆಂಬುದು ಪ್ರಭುವಿನ ಆಶಯ.

ಅಣ್ಣನ ಹಮ್ಮುಭಿಮಾನಗಳನ್ನು ಪ್ರಭು ನಿರ್ದಾಕ್ಷಿಣ್ಯವಾಗಿ ಕೆದಕಿದನು. ಮಾಡುವೆನೆಂದು ಹೇಳುವವರು ಸದ್ಭಕ್ತರಲ್ಲ. ಮಾಡಿದೆನೆಂಬುದು ಅವರಿಗೆ ಮನದಲ್ಲಾದರೂ ಹೊಳೆಯ ಬಾರದು. ಇದನ್ನು ತಿಳಿಯದೆ ಅಣ್ಣನು ತನುಮನಧನಗಳನ್ನು ಅರ್ಪಿಸುವೆನೆಂದು ಹೇಳಿಕೊಳ್ಳುತ್ತಿದ್ದನು. ತನುಮನಧನಗಳು ಭಕ್ತನ ಒಡವೆ ಆಸ್ತಿಗಳೇನೂ ಅಲ್ಲ. ನಿಜವಾದ ಭಕ್ತನು ಇವುಗಳ ಅಭಿಮಾನವನ್ನು ಬಿಟ್ಟಿರಬೇಕು. ಎಲ್ಲಿಯವರೆಗೆ ಮಾನವನು ಗುರುಲಿಂಗಜಂಗಮರ ಸೇವೆಯಲ್ಲಿ ನಿರತನೋ, ಅಲ್ಲಿಯವರೆಗೂ ಗುರುಸೇವೆಗೆ ತನು, ಲಿಂಗಪೂಜೆಗೆ ಮನ, ಜಂಗಮದಾಸೋಹಕ್ಕೆ ಧನ ಮೀಸಲಾಗಿರಬೇಕು. ತನು ಅರ್ಪಿತವೆಂದರೆ ಗುರುದ್ರೋಹ, ಮನ ಅರ್ಪಿತವೆಂದರೆ ಲಿಂಗದ್ರೋಹ, ಧನ ಅರ್ಪಿತವೆಂದರೆ ಜಂಗಮದ್ರೋಹ. ಇವು ಮೂರನ್ನೂ ಮೂರು ಕಾರ್ಯಗಳಿಗಾಗಿ ಪರಮಾತ್ಮನು ಅನುಗ್ರಹಿಸಿದ್ದಾನೆ. ಇವನ್ನು ಭಕ್ತನು ತನ್ನ ವೆಂದು ಭಾವಿಸದೆ, ಸಾರ್ವಜನಿಕ ವಸ್ತುಗಳೆಂದು ತಿಳಿದು, ಆಯಾ ಕಾಲದಲ್ಲಿ ಗುರುಲಿಂಗಜಂಗಮಸೇವೆಗೆ ಇವನ್ನು ನಿರಭಿಮಾನ ದಿಂದ ಸದಾ ಉಪಯೋಗಿಸುತ್ತಿರಬೇಕು. ಇಂತಹ ಪರಿಸ್ಥಿತಿ ಯಲ್ಲಿ ಇವನ್ನು ಭಕ್ತನು ಒಬ್ಬರಿಗೆ ಕೊಡುವುದೆಂದರೆ ಅಜ್ಞಾನ ಮತ್ತು ವ್ಯಾಮೋಹವೆನಿಸುವುದು. ಇವನ್ನು ಕೊಡಲಿಕ್ಕೆ ಅವನಿಗೆ

ಅಧಿಕಾರವೂ ಇಲ್ಲ ಮತ್ತು ಅವಕಾಶವೂ ಇಲ್ಲ. ಇಂತಹ ಸ್ಥಿತಿಯಲ್ಲಿ ಅಣ್ಣನ ಅವಿವೇಕ ಎಲ್ಲರಿಗೂ ಸ್ಪಷ್ಟವಾಯಿತು. ಆಗ ಪ್ರಭು ಅಣ್ಣನನ್ನು "ನಮ್ಮ ಗುಹೇಶ್ವರಲಿಂಗಕ್ಕೆ ನೀನು ಆವುದರಲ್ಲಿ ಏನನರ್ಪಿಸಿ ಭಕ್ತನಾದೆ ಹೇಳು, ಬಸವಣ್ಣ" ಎಂದು ಕೇಳುತ್ತಾನೆ. ಅಣ್ಣನು ಭಕ್ಷ್ಯಭೋಜ್ಯಗಳನ್ನೂ ಒಡವೆ ವಸ್ತ್ರಗಳನ್ನೂ ಕೊಡಲು ತಯಾರಿರುವನು. ಬೇಡಿದವರಿಗೆ ಬೇಡಿದ್ದನಿತ್ತು ತಾನು ಧನ್ಯನಾಗಬೇಕೆಂಬ ಹೆಬ್ಬಯಕೆ ಅವನಿಗೆ ಇತ್ತು. ಇದನ್ನು ಪ್ರಭು ಒಪ್ಪಲಿಲ್ಲ. ಶರಣನು ಬೇಡುವವನಲ್ಲ. ಭಕ್ತನು ಬೇಡಿಸಿಕೊಳ್ಳುವವನಲ್ಲ. ಬೇಡುವವನಿಗೂ ಬೇಡಿಸಿಕೊಳ್ಳುವವನಿಗೂ ಭಕ್ತಿಪಂಥವೇ ತಿಳಿಯದು. ಭೋಜ್ಯವಸ್ತುಗಳಿಂದ ಈಶ್ವರನು ತೃಪ್ತನಾಗನು. ಅವೆಲ್ಲವೂ ಅವನಲ್ಲಿಯೇ ತುಂಬಿರುವಾಗ, ಭಕ್ತನು ಅವನ್ನು ಕೊಟ್ಟು ಅವನನ್ನು ಹೇಗೆ ಮೆಚ್ಚಿಸಬಲ್ಲನು ? ಅಲ್ಲಮನು ಅಣ್ಣನನ್ನು ಭಕ್ತಿಭಿಕ್ಷೆಯ ನೀಡುವಂತೆ ಕೇಳುವನು. "ಸಮತೆ ಎಂಬ ಕಂಥೆಯ ತೊಟ್ಟು, ಸುಬುದ್ಧಿ ಎಂಬ ಟೊಪ್ಪರವನಿಕ್ಕಿ, ವಿಷಯವೆಂಬ ಹಾವುಗೆಯ ಮೆಟ್ಟಿ, ತಮಂಧವೆಂಬ ಕುಳಿಯ ಬೀಳದೆ, ವೈರಾಗ್ಯವೆಂಬ ಕೊರಡ ನೆಡಹದೆ, ಮರವೆ ಎಂಬ ಚಳ ಮೆಟ್ಟದೆ, ಗುಹೇಶ್ವರನ ಶರಣ ಬಂದನು, ಭಕ್ತಿಭಿಕ್ಷೆಯನಿಕ್ಕು ಬಸವಣ್ಣ" ಎಂದು ಪ್ರಭು ಭಿಕ್ಷೆಯ ಆರೋಗಣೆಗೆ ಕುಳಿತನು. ಅಣ್ಣನು ಮನೆಯಲ್ಲಿ ಮಾಡಿದ್ದ ಅಡಿಗೆಯನ್ನೆಲ್ಲಾ ಬಡಿಸಿದ್ದಾಯಿತು. ಅಲ್ಲಮನೊಬ್ಬನೇ ಎಲ್ಲವನ್ನೂ ಉಂಡು ಮತ್ತೆ ನೀಡೆಂದನು. ಅಣ್ಣನಿಗೆ ಮುಂದೇನು ಮಾಡಬೇಕೆಂಬುದೇ ತೋರಲಿಲ್ಲ. ಆತ್ಮಾರ್ಪಣದಿಂದಲೂ ಅಹಂಕಾರತ್ಯಾಗದಿಂದಲೂ ಪ್ರಭುವನ್ನು ತೃಪ್ತಿಗೊಳಿಸುವಂತೆ ಚನ್ನಬಸವಣ್ಣನು ಎಚ್ಚರಿಸುವನು. ಪ್ರಭು

ಅನ್ನಕ್ಕೆ ಬಂದವನಲ್ಲ–ಭಕ್ತಿಪಥವ ತೋರಲು ಬಂದವನು. ಭಕ್ತನು ತನುಮನಧನಗಳು ತನ್ನವೆಂಬ ಅಭಿಮಾನವನ್ನು ತೊರೆದು, ಆತ್ಮಾರ್ಪಣಪೂರ್ವಕವಾಗಿ ಸ್ವಯಂ ಲಿಂಗನಾಗಿ ಬಂದವನನ್ನು ಲಿಂಗನೆಂದೇ ಭಾವಿಸಿ, ಆ ಕಾಲದಲ್ಲಿ ತನ್ನಲ್ಲಿರುವುದನ್ನು ನಿರ್ವಂಚನೆಯಿಂದ ಅವನದೆಂದೇ ತಿಳಿದು ಅವನಿಗರ್ಪಿಸಿ ಧನ್ಯನಾಗಬೇಕೆಂಬ ಭಾವನೆಯನ್ನು ಪ್ರಭು ತಿಳಿಸಿದನು. ಅಣ್ಣನ ಮನಸ್ಸಿನಲ್ಲಿ 'ನಾ ಮಾಡುವೆ–ನೀಡುವೆ' ಎಂಬ ಅಹಂಕಾರ ಬಲಿತಿದ್ದುದರಿಂದ, ಪ್ರಭುವಿನ ಹಸಿವು ಹುರಿದುಬಿದ್ದಿತು. ನಾನೆಂಬ ಅಹಂಕಾರದಲ್ಲಿ ನಾನುಂಡೆನಾದರೆ ನನಗೆ ಅದೇ ಭಂಗ; ಸ್ತುತಿ ನಿಂದೆಗೆ ನೊಂದೆನಾದಡೆ ಅಂಗೈಯಲ್ಲಿರುವ ಲಿಂಗಕ್ಕೆ ದೂರ; ನೀರನೀಜುವ ದೇಹ ಬಳಲುವುದಲ್ಲದೆ, ನೀರು ಬಳಲದು. ನಿಜವನರಿಯದ ಭಕ್ತ ಬಳಲುವನಲ್ಲದೆ, ಲಿಂಗ ಬಳಲದು ಮಾಡುವೆ ನೀಡುವೆನೆಂಬ ಹೇಳಿಕೆ ಮಹಾಪಾಪ. ಬಾಯಿಂದ ಹೇಳದೆ ಮನಸ್ಸಿನಲ್ಲೂ ಭಾವಿಸದೆ, ಶಿವನೇ ಶಿವನಿಗೆ ನೀಡುತ್ತ ಮಾಡುತ್ತ ವಿನೋದಪಡುತ್ತಿರುವನೆಂಬ ಸದ್ಭಾವನೆ ಭಕ್ತನ ಹೃದಯದಲ್ಲಿ ನೆಲೆಗೊಳ್ಳಬೇಕು. ಇದು ಭಕ್ತಿಮಾರ್ಗ. ಹಮ್ಮಿನ ಭಕ್ತಿ ಭಕ್ತನನ್ನು ಉದ್ಧರಿಸುವ ಬದಲು ಅಧೋಗತಿಗೊಯ್ಯುವುದು. ಪ್ರಭುವಿನ ಈ ಬಗೆಯ ದಿವ್ಯೋಪದೇಶದಿಂದ ಅಣ್ಣನ ಭಕ್ತಿ ಶುದ್ಧವೂ ಪಾವನವೂ ಆಯಿತು.

ಪ್ರಭುವು ಶೂನ್ಯಸಿಂಹಾಸನದಲ್ಲಿ ಅಲಿಪ್ತತೆಯಿಂದ ಮೆರೆಯುವ ಸುಜ್ಞಾನಮೂರ್ತಿ. ಅವನ ಅಮೃತವಾಣಿ ಅಣ್ಣನನ್ನು ನಿರ್ಮಲಗೊಳಿಸಿತು. ಲಿಂಗಕ್ಕೆ ಮಾಡಿದೆನೆಂದು ನುಡಿದು ಕೆಟ್ಟಕೇಡಿಂಗೆ ಕಡೆಯಿಲ್ಲವೆಂದು ಅಣ್ಣನು ಪ್ರಭುವಿನಲ್ಲಿ ಕ್ಷಮೆ ಬೇಡುವನು. 'ತನುವ ಕೊಟ್ಟೆನೆಂದು ನುಡಿದು ಗುರುವಚನಕ್ಕೆ

ದೂರನಾದೆ, ಮನವ ಕೊಟ್ಟೆನೆಂದು ನುಡಿದು ಲಿಂಗಮುಖಕ್ಕೆ ದೂರನಾದೆ, ಧನವ ಕೊಟ್ಟೆನೆಂದು ನುಡಿದು ಜಂಗಮಮುಖಕ್ಕೆ ದೂರನಾದೆ, ದೇವ ! ನಿಮಗೆ ಮಾಡಿದೆನೆಂದು ನುಡಿದು ಕೆಟ್ಟ ಕೇಡಿಂಗೆ ಕಡೆಯಿಲ್ಲ?" ಹೀಗೆ ಅಣ್ಣನಿಗೆ ಜ್ಞಾನೋದಯುವಾಗಿ, ಪ್ರಭುವಿನ ಉಪದೇಶದಿಂದ ಮನಸ್ಸು ವಿಕಸಿತವೂ ಬುದ್ಧಿ ಪ್ರಸನ್ನವೂ ಆದುವು. ಎಂತಹ ಮಹಾತ್ಮರಿಗೂ ಒಂದಾನೊಂದು ಕಾಲಕ್ಕೆ ತಕ್ಕ ಗುರು ಒದಗಲೇಬೇಕಾಗುತ್ತದೆ. ಅವನು ಯಾವಾಗ, ಯಾವ ರೂಪದಲ್ಲಿ ಬರುವನೆಂಬುದು ಯಾರಿಗೂ ತಿಳಿಯದು. ಶಿಷ್ಯನಲ್ಲಿ ಪೂರ್ಣ ಯೋಗ್ಯತೆ ಇದ್ದರೆ ಗುರುವು ತಾನಾಗಿಯೇ ಅವನನ್ನು ಹುಡುಕಿಕೊಂಡು ಬರುವನು. ಆದ್ದರಿಂದ ಗುರುವು ಪ್ರತ್ಯಕ್ಷದೇವನೆಂಬ ನಂಬಿಕೆ ನಮ್ಮಲ್ಲಿದೆ. ಪ್ರಭು ಅಣ್ಣನನ್ನು ಅನುಗ್ರಹಿಸಲಿಕ್ಕಾಗಿಯೇ ಕಲ್ಯಾಣಕ್ಕೆ ಬಂದನು. ಆದ್ದರಿಂದ ಅವನು ಸಾಕ್ಷಾತ್ ಈಶ್ವರನೇ ಇರುವನು. ಅವನ ದರ್ಶನದಿಂದ ಅಣ್ಣನ ಮನವು ಪಕ್ವವಾಯಿತು. ಆಗ ಅಣ್ಣನು "ಮಾಡುವಾತ ನಾನಲ್ಲಯ್ಯ, ನೀಡುವಾತ ನಾನಲ್ಲಯ್ಯ, ಬೇಡುವಾತ ನಾನಲ್ಲಯ್ಯ, ನಿಮ್ಮ ಕಾರುಣ್ಯವಲ್ಲದೆ ಎಲೆ ದೇವಾ. ಮನೆಯ ತೊತ್ತು ಅಲಸಿದರೆ ಒಡತಿ ಮಾಡಿಕೊಂಬಂತೆ ನಿನಗೆ ನೀ ಮಾಡಿಕೋ ದೇವಾ", ಹೀಗೆ ಹೇಳುವನು. ಮಾಡುವವನೂ ಮಾಡಿಸಿ ಕೊಳ್ಳುವವನೂ ಪರಮಾತ್ಮನೇ ಇರುವನೆಂಬ ಭಾವ ಅಣ್ಣನಿಗೆ ಈಗ ಮನವರಿಕೆಯಾಯಿತು; ಮತ್ತು ಕರ್ತೃತ್ವಾಭಿಮಾನವೂ ಬಗೆಹರಿಯಿತು.

ಅರೆಭಕ್ತಿಯಿಂದ ವರ್ತಿಸುತ್ತಿದ್ದ ಅಣ್ಣನು ಕೊನೆಗೆ ಪೂರ್ಣ ಶುದ್ಧನಾಗಿ ನಿರ್ಮಲನಾದನು. ಪರಮಾತ್ಮನಿಗೆ ಆತ್ಮಾರ್ಪಣ ಪೂರ್ವಕವಾಗಿ ಶರಣಾಗತನಾದ ಅಣ್ಣನು ಅವನನ್ನೇ ತನ್ನ

ಜೀವಿತ ಸರ್ವಸ್ವವೆಂದು ಈಗ ದೃಢವಾಗಿ ನಂಬುತ್ತಾನೆ. "ತಂದೆ ನೀನು, ತಾಯಿ ನೀನು, ಬಂಧು ನೀನು, ಬಳಗ ನೀನು, ಎನಗೆ ನೀನಲ್ಲದೆ ಮತ್ತಾರೂ ಇಲ್ಲವಯ್ಯ–ಕೂಡಲಸಂಗಮ ದೇವಯ್ಯ ಹಾಲಲದ್ದು ನೀರಲದ್ದು." ಇಂತಹ ದೃಢನಿಷ್ಠೆ, ನಿರಭಿ ಮಾನ ಸ್ಥಿತಿ ಅವನಲ್ಲಿ ಬೇರೂರಿ ನೆಲಸಲು ಎಷ್ಟೋ ಪ್ರತಿ ಬಂಧಕಗಳು ಒದಗಿದುವು. ಅದಕ್ಕೆ ಹೆಚ್ಚಿನ ಕಾಲವೂ ಹಿಡಿಯಿತು. ಆಯಾಯ ಕಾಲದಲ್ಲಿ ಮನಸ್ಸು ಯಾವ ಯಾವ ಸ್ಥಿತಿಯಲ್ಲಿತ್ತು ಎನ್ನುವುದನ್ನು ಅವನು ಮುಚ್ಚುಮರೆಯಿಲ್ಲದೆ ತಿಳಿಸಿದ್ದಾನೆ. ಅವನ ಮನಸ್ಸು ಎಲ್ಲರಿಗೂ ತಿಳಿದಹಾಗೆ ಉಯ್ಯಾಲೆಯಾಡುತ್ತಿತ್ತು. ತನ್ನ ಕುಂದುಕೊರತೆಗಳನ್ನು ಬಚ್ಚಿಡದೆ, ಅವನು ನಿಷ್ಕಪಟದಿಂದ ತಿಳಿಸಿದ್ದಾನೆ. ಸತ್ಯಾನ್ವೇಷಣೆ, ಅಸತ್ಯವನ್ನು ತುಳಿಯಲಿಕ್ಕಾಗಿ ಪ್ರಬಲವಾದ ಹೋರಾಟ–ಅನಿಷ್ಟದೊಡನೆ ಸ್ಪರ್ಧೆ, ಇಷ್ಟ ಪ್ರಾಪ್ತಿಗೆ ಮುನ್ನ ಉಂಟಾಗುವ ಮನಸ್ಸಿನ ಉದ್ವೇಗ ಇವು ಅಣ್ಣನ ಆತ್ಮೋನ್ನತಿಯನ್ನು ತೋರಿಸುತ್ತವೆ. ಅವನ ಆಧ್ಯಾತ್ಮಿಕ ಸಾಧನೆಯ ಫಲವಾಗಿ ಅಪಕ್ವವಾಗಿದ್ದ ಮನವು ಪಕ್ವವಾಯಿತು. ಅಪೂರ್ಣವಾಗಿದ್ದುದು ಪೂರ್ಣವಾಯಿತು. ಕಷ್ಟಾನುಭವದಿಂದ ಜೀವ ಹಣ್ಣಾಯಿತು. ಸಂಸಾರದ ಬಲೆಯಲ್ಲಿ ಬೀಳದೆ ಅಣ್ಣನು ಮಹತ್ತರವಾದ ಸಾಧನೆಯಿಂದ ಆತ್ಮಾನಂದವನ್ನನುಭವಿಸಿ ಆದರ್ಶಮೂರ್ತಿಯಾಗಿ 'ಯೋ ವೈ ಭೂಮಾ ತತ್ಸುಖಂ' ಎಂಬುದನ್ನು ಎತ್ತಿಹಿಡಿದನು.

ದ್ವೈತಭಾವನೆಯಲ್ಲಿ ಸ್ವಾಮಿ ಭೃತ್ಯ ಸಂಬಂಧದಿಂದ ಉಪಾಸನಮಾಡುತ್ತಲೂ, ಶರಣಸತಿ ಲಿಂಗಪತಿ ಎಂಬ ಮಧುರಭಾವದಿಂದ ಪರಮಾತ್ಮನೊಡನೆ ವಿಶಿಷ್ಟಾದ್ವೈತಭಾವನೆಯಲ್ಲಿ ಆನಂದವನ್ನು ಅನುಭವಿಸುತ್ತಲೂ, ಅಲ್ಲಿಂದ ಮುಂದೆ ಬಾಹ್ಯಪೂಜಾ

ಡಂಬರಗಳನ್ನೂ ಸಾಕಾರನಿಷ್ಠೆಯನ್ನೂ ಮೀರಿ ಐಕ್ಯಸ್ಥಲದ
ಅದ್ವೈತಾನಂದದಲ್ಲಿ ಸಮರಸವಾಗಿ ಬೆರೆತು, ಸಮತೆ ಸಮಾಧಾನ
ಗಳೆಂಬ ಲಿಂಗಗುಣಗಳಿಂದ ಶೋಭಿಸುತ್ತ, ಲೋಕಹಿತಾರ್ಥ
ವಾಗಿಯೇ ಬಾಳಿದ ಅಣ್ಣನ ಆದರ್ಶವು ಮಾನವರೆಲ್ಲರ ಹೃದಯ
ದಲ್ಲೂ ವಿರಾಜಿಸುತ್ತಿರುವುದು. ಲಿಂಗಪೂಜೆಯ ಫಲವಾದರೋ
ಜೀವಪರಮಾತ್ಮರ ಸಂಯೋಗವೇ ಇರುವುದೆಂಬುದನ್ನು ಅವನು
ಉದಾಹರಣದ ಮೂಲಕ ವಿವರಿಸಿದ್ದಾನೆ: "ಲಿಂಗವ ಪೂಜಿಸಿ
ಫಲವೇನಯ್ಯ, ಸಮರತಿ, ಸಮಕಳೆ, ಸಮಸುಖವನರಿಯ
ದನ್ನಕ್ಕ. ಲಿಂಗವ ಪೂಜಿಸಿ ಫಲವೇನಯ್ಯ, ಕೂಡಲಸಂಗಮ
ದೇವರ ಪೂಜಿಸಿ ನದಿಯೊಳಗೆ ನದಿ ಬೆರಸಿದಂತಾಗದನ್ನಕ್ಕ."

ಸಮುದ್ರದೊಳಗೆ ಬೆರೆತ ನದಿಯಂತೆ, ಭಿನ್ನಭಾವ
ನರಿಯದೆ, ಅಣ್ಣನು ಶಿವ ಶಿವಾ ಎನ್ನುತ್ತ ಶಿವನೊಳಗೆ ಏಕವಾಗಿ
ಶಿವಭಾವದಿಂದ ಶಿವನ ಸೇವೆಮಾಡುತ್ತಿದ್ದನು. ಕ್ಷೋಭೆಗೊಂಡ
ತಳಮಳಿಸುತ್ತಿದ್ದ ಮನವು ಪ್ರಶಾಂತವಾಯಿತು. ಜ್ಯೋತಿ
ಜ್ಯೋತಿಯು ಸೇರಿದಂತೆ, ಐಕ್ಯಸ್ಥಿತಿಯಲ್ಲಿ ಪರಮಾನಂದಮಯ
ನಾಗಿದ್ದು-ಅಣ್ಣನು ಬಹಿರ್ಮುಖನಾದಾಗ ತಾನು ಕಂಡ ಸತ
ವನ್ನು ಜನತೆಗೆ ತಿಳಿಸಿದನು. ಎಂತಹ ಸಂದೇಹಿಗಳೂ ನಿರೀಶ್ವರ
ವಾದಿಗಳೂ ಗುರುಕೃಪೆಯಿಂದ ಉಜ್ವಲ ಭಕ್ತರೂ ಆಸ್ತಿಕರೂ
ಆಗುವುದನ್ನು ಈ ಕಾಲದಲ್ಲೂ ನಾವು ಕಂಡಿದ್ದೇವೆ. ಶ್ರೀರಾಮ
ಕೃಷ್ಣರ ಬಳಿಗೆ ಹೋಗಿಬರುತ್ತಿದ್ದ ನರೇಂದ್ರನು ಗುರುಗಳ ದರ್ಶನ
ಸ್ಪರ್ಶಗಳಿಂದ ಆತ್ಮವಿಕಾಸದ ನವಚೈತನ್ಯವನ್ನು ಹೊಂದಿ ಸ್ವಾಮಿ
ವಿವೇಕಾನಂದನಾದುದನ್ನು ನಾವು ಕೇಳಿದ್ದೇವೆ.

ಅಣ್ಣನ ಸಾಮಾಜಿಕ ಸೇವೆ

ಅಣ್ಣನು ಐಕ್ಯಸ್ಥಲದ ಅದ್ವೈತಾನಂದವನ್ನು ಅನುಭವಿಸು ತ್ತಿದ್ದರೂ ಜನಸಾಮಾನ್ಯರನ್ನು ಉದ್ಧಾರಮಾಡುವ ಪವಿತ್ರ ಕಾರ್ಯದಲ್ಲಿ ತನ್ನ ಆತ್ಮಶಕ್ತಿಯನ್ನು ನಿರಭಿಮಾನದಿಂದ ಉಪ ಯೋಗಿಸಿದನು. ಅವನ ಲೋಕಕಾರುಣ್ಯ ಅಪಾರವೂ ಅದ್ಭುತವೂ ಆದುದು. ಅವನ ಬೋಧೆ ಎಂತಹ ಪಾಪಿಗಳನ್ನೂ ಕೈಬಿಡಲಿಲ್ಲ. ಬ್ರಹ್ಮಹತ್ಯವೇ ಮೊದಲಾದ ಮಹಾಪಾಪ ಮಾಡಿದವರನ್ನೂ ಸಹ ಆವನು ತನ್ನ ಬೋಧೆಯಿಂದ ಶುದ್ಧಿಗೊಳಿಸಿದನು.

"ಎಲವೋ, ಎಲವೋ, ಪಾಪಕರ್ಮವ ಮಾಡಿದವನೇ, ಎಲವೋ, ಎಲವೋ, ಬ್ರಹ್ಮಹತ್ಯವ ಮಾಡಿದವನೇ, ಒಮ್ಮೆ ಶರಣೆನ್ನು. ಒಮ್ಮೆ ಶರಣೆಂದಡೆ ಪಾಪ ಕರ್ಮ ಓಡುವುವು. ಸರ್ವ ಪ್ರಾಯಶ್ಚಿತ್ತಕ್ಕೆ ಹೊನ್ನ ಪರ್ವತಂಗಳೇ ಇದ್ದಾವು. ಓರ್ವಂಗೆ ಶರಣೆನ್ನು, ನಮ್ಮ ಕೂಡಲಸಂಗಮದೇವಂಗೆ." ಮಹಾದೇವನಿಗೆ ಒಮ್ಮೆ ಶರಣೆಂದರೆ ಎಂತಹ ಪಾಪಕರ್ಮವಾದರೂ ಭಸ್ಮವಾಗುವು ದೆಂಬ ದೃಢವಿಶ್ವಾಸವನ್ನು ಅಣ್ಣನು ಜನತೆಗೆ ಹುಟ್ಟಿಸಿದನು. ಸ್ತ್ರೀಯರಾಗಲೀ, ಭಿಕ್ಷುಕರಾಗಲೀ, ಪಾಪಿಗಳಾಗಲೀ ಎಲ್ಲರೂ ಪರಮಾತ್ಮನಿಗೆ ಶರಣಾಗತರಾಗಿ, ಹೃದಯಶುದ್ಧಿ ನಡೆನುಡಿ ಶುದ್ಧಿ ಗಳಿಂದ ಅವನ ಅನುಗ್ರಹವನ್ನು ಪಡೆಯಬಹುದೆಂಬ ಉದಾರಭಾವ ವನ್ನು ಅಣ್ಣನು ವ್ಯಕ್ತಪಡಿಸಿದ್ದಾನೆ. ಭಗವದ್ಗೀತೆಯಲ್ಲಿ ಕೃಷ್ಣಪರ ಮಾತ್ಮನೂ ಸಹ ಇದೇ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದಾನೆ :

ಅಪಿ ಚೇತ್ಸುದುರಾಚಾರಃ ಭಜತೇ ಮಾಮನನ್ಯಭಾಕ್
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ ಹಿ ಸಃ॥

ದುಷ್ಟಾಚರಣೆಗಳಿಂದ ಪಾಪಿ ಎನ್ನಿಸಿಕೊಂಡವನೂ ಸಹ ತನ್ನ

ಪಾಪಕೃತ್ಯಗಳಿಗೆ ಪಶ್ಚಾತ್ತಾಪಗೊಂಡು, ನಿರ್ಮಲಹೃದಯನಾಗಿ ಪರಮಾತ್ಮನಿಗೆ ಮೊರೆ ಇಟ್ಟು, ಮುಂದೆ ಅಂತಹ ನೀಚಕೃತ್ಯಗಳ ನ್ನಾಚರಿಸದಿದ್ದರೆ, ಅವನು ಸಚ್ಚರಿತನೂ ಧರ್ಮಾತ್ಮನೂ ಆಗಿ ಬೇಗನೆ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗುವನು. ಇದೇ ಮಾರ್ಗವನ್ನು ಅಣ್ಣನೂ ಆಶ್ರಯಿಸಿ ಪತಿತೋದ್ಧಾರಕ್ರಿಯೆಯಲ್ಲೂ, ಸ್ತ್ರೀಯರಿಗೂ ನೀಚರಿಗೂ ಭಗವದನುಗ್ರಹವನ್ನು ದೊರಕಿಸು ವುದರಲ್ಲೂ ಬದ್ಧಾದರನಾಗಿ ತನ್ನ ದಿವ್ಯಬೋಧೆಯಿಂದ ಎಲ್ಲರನ್ನೂ ಒಂದೇ ವಿಧವಾಗಿ ಪ್ರೋತ್ಸಾಹಿಸಿದನು.

ಆ ಕಾಲದ ಜನರ ನಡೆನುಡಿಗಳಲ್ಲಿ ತಿದ್ದುಪಡಿಯೂ ಸಮಾಜದ ಸುಧಾರಣೆಯೂ ಆಗಬೇಕೆಂದು ಅವನು ಮನಗಂಡಿ ದ್ದನು. ಅವನು ಮಹಾತ್ಮನಾದ್ದರಿಂದ ಲೋಕದ ಡೊಂಕನ್ನೂ ವಕ್ರಾಚರಣೆ ಮತ್ತು ಅವಿವೇಕಗಳನ್ನೂ ಸಹನೆ ಶಾಂತಿಗಳಿಂದ ತಿದ್ದಲು ಆರಂಭಿಸಿದನು. ತ್ರಿಕರಣಶುದ್ಧರೂ ಸಚ್ಚರಿತರೂ ಆದ ಜಂಗಮರು ಲೋಕದಲ್ಲಿ ಹೆಚ್ಚಬೇಕೆಂದು ಅಣ್ಣನು ಅಪೇಕ್ಷಿ ಸಿದನು. ಅವರಿಂದ ಧರ್ಮಪ್ರಚಾರವನ್ನು ಮಾಡಿಸಬೇಕೆಂದು ಸಂಕಲ್ಪಿಸಿದನು. ಆದರೆ ಜಂಗಮಾರಾಧನೆಯನ್ನು ಅವನು ಹೊಸ ದಾಗಿ ಕಲ್ಪಿಸಬೇಕಾಗಿರಲಿಲ್ಲ. ಜಂಗಮವು ಚರಲಿಂಗವೆಂದೂ ಪೂಜ್ಯವೆಂದೂ ಶಿವಾಗಮಗಳು ಹಿಂದಿನಿಂದಲೂ ಸಾರುತ್ತಿ ದ್ದುವು. ಜಂಗಮಪೂಜೆ ವೈಯಕ್ತಿಕವಾಗಿ ಆಚರಣೆಯಲ್ಲಿದ್ದಿತು. ಆದರೆ ಸಾಮೂಹಿಕವಾಗಿ ಸಮಾಜವೆಲ್ಲವೂ ಗುರುಪೂಜೆ, ಲಿಂಗ ಧಾರಣೆ, ಜಂಗಮಾರಾಧನೆಗಳನ್ನು ನಿತ್ಯವೂ ಆಚರಿಸುವಂತೆ ಬಸವಣ್ಣನು ಪ್ರಯತ್ನಪಟ್ಟನು; ಮತ್ತು ತನ್ನ ಪ್ರಯತ್ನದಲ್ಲಿ ಜಯಶೀಲನೂ ಆದನು. ದೇಹಕ್ಕೆ ಸ್ಥಿರಲಿಂಗದ ನಿತ್ಯಸಂಬಂಧ ವನ್ನೂ ಅದರ ಪ್ರಾಣಸ್ವರೂಪವಾದ ಚರಲಿಂಗವೆಂಬ ಜಂಗಮನ

ಪೂಜೆಯನ್ನೂ ಬಸವಣ್ಣನು ಸಾರ್ವತ್ರಿಕವಾಗಿ ನಿತ್ಯಾಚರಣೆಗೆ ತಂದು, ಅದರ ಮಹತ್ವವನ್ನು ಎತ್ತಿ ಹಿಡಿದನು. ಅವನು ಭಕ್ತನಾಗಿಯೇ ಉಳಿದು ಜಂಗಮಾರ್ಚನೆಯಲ್ಲಿ ತಾನೇ ಮೇಲ್ಪಂಕ್ತಿಯನ್ನು ಹಾಕಿಕೊಟ್ಟನು. ಆದರೆ ಜಂಗಮರಲ್ಲಿ ಯಥಾರ್ಥ ಜ್ಞಾನವಿಲ್ಲದೆ, ಕೇವಲ ಲಾಂಛನಧಾರಿಗಳಾಗಿದ್ದರೂ ಅವರನ್ನು ಅಣ್ಣನು ಪೂಜಿಸಬೇಕಾಯಿತು. ಜಂಗಮನು ತನ್ನ ಸ್ಥಿತಿಗತಿಗಳನ್ನರಿಯದೆ, ಸಾಮಾನ್ಯ ಮಾನವನಂತೆ ಹೊನ್ನು ಹೆಣ್ಣು ಮಣ್ಣಿನಾಸೆಯಿಂದ ವಿಷಯಸುಖಗಳನ್ನು ಅನುಭವಿಸುತ್ತಿದ್ದರೂ, ಕೇವಲ ಲಿಂಗಧಾರಣೆಯ ಮಾತ್ರದಿಂದಲೇ ಸಂಗಮನಾಥನಂತೆ ಗೌರವವನ್ನು ಹೊಂದಬೇಕಾಗಿತ್ತು. ಅವರಲ್ಲಿ ಎಷ್ಟೇ ಲೋಪದೋಷಗಳಿದ್ದರೂ ಗಮನಿಸದೆ ಅವರನ್ನು ಗೌರವಿಸುವ ಹೊಣೆ ಅಣ್ಣನ ಮೇಲೆ ಬಿದ್ದಿತ್ತು. ಅವನ ಮುಂದಾಳುತನದಲ್ಲಿ ಅಂಗದ ಮೇಲೆ ಲಿಂಗವುಳ್ಳವರನ್ನೆಲ್ಲಾ ಸಂಗಮನಾಥನೆಂದೇ ಗೌರವಿಸಬೇಕಾಗಿ ಬಂದಿತು. ಆದರೆ ಅವರ ವರ್ತನೆಯನ್ನು ಸಾಧ್ಯವಾದ ಮಟ್ಟಿಗೆ ಸಹನೆಸಮಾಧಾನಗಳಿಂದ ತಿದ್ದುವ ಗುರುತರವಾದ ಹೊರೆಯೂ ಅಣ್ಣನ ಮೇಲೆ ಬಿದ್ದಿತ್ತು.

ಇಂತಹ ಸಮಾಜಸುಧಾರಣೆಯಲ್ಲಿ ಅಣ್ಣನಿಗೆ ಅನೇಕ ಕ್ಲೇಶಗಳು ಮೇಲಿಂದಮೇಲೆ ಸಂಭವಿಸಿದುವು. ಒಂದು ಕಡೆ ಮನಸ್ಸನ್ನು ಸಮಾಧಾನಪಡಿಸಿಕೊಂಡು, ಮೇಲುಕೀಳೆಂಬ ತಾರತಮ್ಯವನ್ನು ಎಣಿಸದಂತೆ, ಎಲ್ಲರನ್ನೂ ತಿದ್ದಬೇಕಾಗಿತ್ತು. ಆಗಿನ ಕಾಲದಲ್ಲಿ ಲಿಂಗಧಾರಣೆ ಮಾಡಿಸಿಕೊಂಡವರೆಲ್ಲರೂ ಶಿವಪಥವನ್ನು ಹಿಡಿಯಲಿಲ್ಲ. ಶಿವಪಥವನ್ನು ಹಿಡಿದವರೆಲ್ಲರೂ ಷಟ್ಸ್ಥಲಜ್ಞಾನಿಗಳಾಗಲಿಲ್ಲ. ಇಂತಹ ಲಿಂಗಧಾರಿಗಳನ್ನು ನೋಡಿ ಅಣ್ಣನು ವ್ಯಥೆಪಡುತ್ತಿದ್ದನು. ಇವರನ್ನು ತಿದ್ದಿ ಶಿವಮಾರ್ಗದಲ್ಲಿ

ಇರಿಸುವ ಹೊರೆಯೊಂದು ಕಡೆ ಅವನ ಮೇಲೆ ಬಿದ್ದಿತ್ತು. ಒಳಗೆ ಹೊರಗೆ ಶುದ್ಧವಿಲ್ಲದವರು ಭಕ್ತರೆನಿಸಿದರೂ ಅವರನ್ನು ದೇವನೊಲ್ಲನು ; ಅವರು ಶಿವಪಥಕ್ಕೆ ಸಲ್ಲರು. ಒಳ ಹೊರಗೊಂದಾಗದವರಿಗೆ ಅಳಿಯಾಸೆದೋರಿ ದೇವನು ಬೀಸಾಡುವನು. ಲೋಕದ ಮಾನವರಿಗೆ ಶಿವದೀಕ್ಷೆಯನ್ನು ಕೊಟ್ಟರೆ ಅವರಲ್ಲಿ ದುಷ್ಟನು ಹೇಗೆ ಸತ್ಪುರುಷನಾದಾನು? ಕೆಟ್ಟವನು ಹೇಗೆ ಸದ್ಭಕ್ತನಾದಾನು ? ಅಳಿಮನದವನು ಎಂದಿಗೂ ಭಕ್ತನಾಗಲಾರನು. ಹುತ್ತವ ಬಡಿದರೆ ಹಾವು ಸಾಯಲಾರದು. ಅಘೋರ ತಪವ ಮಾಡಿದರೂ, ಅಂತರಂಗಶುದ್ಧವಿಲ್ಲದವರನ್ನು ದೇವನು ನಂಬಲಾರನು. ಹೀಗೆ ದೀಕ್ಷೆ ಹೊಂದಿದ್ದ ಭಕ್ತರ ಆಚಾರ ವ್ಯವಹಾರಗಳನ್ನು ನಿರ್ದಾಕ್ಷಿಣ್ಯವಾಗಿ ಅಣ್ಣನು ಖಂಡಿಸಬೇಕಾಯಿತು. ಆದರೂ ಅವನ ಧರ್ಮಬೋಧೆ ಹಿತಮಿತ ಮೃದುವಚನಗಳಿಂದ ಹೊರಟು, ಕೇಳುವವರ ಮನಕ್ಕೆ ಆನಂದವನ್ನೂ ಸತ್ಪರಿಣಾಮವನ್ನೂ ಮಾಡುತ್ತಿರುವುದು. ಅಣ್ಣನ ಬೋಧೆ ಎಷ್ಟು ಮಧುರವೆಂಬುದಕ್ಕೆ ಅವನ ಮಾತೇ ಸಾಕ್ಷಿ.

"ಅಯ್ಯಾ ಎಂದಡೆ ಸ್ವರ್ಗ–ಎಲವೋ ಎಂದಡೆ ನರಕ. ಸತ್ಯವ ನುಡಿವುದೇ ದೇವಲೋಕ–ಮಿಥ್ಯವ ನುಡಿವುದೇ ಮರ್ತ್ಯಲೋಕ. ಆಚಾರವೇ ಸ್ವರ್ಗ ಮತ್ತು ಪುಣ್ಯ. ಅನಾಚಾರವೇ ನರಕ ಮತ್ತು ಪಾಪ." ಹೀಗೆ ಜನರ ಮನಸ್ಸಿಗೆ ಹಿಡಿಯುವಂತೆ ಶಾಂತಿಯಿಂದ, ಕೋಪತಾಪಗಳಿಲ್ಲದೆ, ಉದ್ವೇಗಾವೇಶಗಳಿಲ್ಲದೆ, ಧರ್ಮವನ್ನು ಬೋಧಿಸುತ್ತ ಅಣ್ಣನು ಭಕ್ತರನ್ನೂ ಜಂಗಮರನ್ನೂ ಸಹನೆಯಿಂದ ತಿದ್ದುತ್ತಿದ್ದನು.

ಅಣ್ಣನಿಗೆ ಮೃದುವಚನವೇ ಸಕಲ ಜಪವೂ ತಪವೂ ಆಗಿತ್ತು. ಸದುವಿನಯವೇ ಸದಾಶಿವನನ್ನು ಮೆಚ್ಚಿಸುವ ಸನ್ಮಾರ್ಗವಾಗಿತ್ತು.

ದಯೆಯೇ ಧರ್ಮದ ಮೂಲವೆಂದು ಅವನು ಭಾವಿಸಿ ಆಚರಿಸುತ್ತಿದ್ದನು. ಸಕಲಪ್ರಾಣಿಗಳಲ್ಲಿ ಆತ್ಮೀಯತೆಯಿಂದ ಪ್ರೀತಿಸಿ ದಯೆ ತೋರಿಸುವುದೇ ಅಣ್ಣನ ಧರ್ಮಮಾರ್ಗವಾಗಿತ್ತು. ಆದ್ದರಿಂದಲೇ ಆಗಿನ ಜನತೆಗೆ ಅವನು ತುಂಬ ಸಮಾಧಾನದಿಂದ ಹಿತಮಾರ್ಗವನ್ನು ತಿಳಿಯಹೇಳುತ್ತಿದ್ದನು. ಅವನ ಬೋಧೆ ಮಾನವಜನಾಂಗಕ್ಕೆಲ್ಲಕ್ಕೂ ಅನ್ವಯಿಸುವಷ್ಟು ವಿಶಾಲವೂ ಉದಾತ್ತವೂ ಆದುದು.

"ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ, ಅನ್ಯರಿಗೆ ಅಸಹ್ಯಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲುಬೇಡ, ಇದೇ ಅಂತರಂಗಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ ಮಹಾದೇವನನ್ನೊಲಿಸುವ ಪರಿ." "ಮರ್ತ್ಯಲೋಕವೆಂಬುದು ಕರ್ತಾರನ ಕಮ್ಮಟವಯ್ಯ. ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯಾ. ಇಲ್ಲಿ ಸಲ್ಲದವರು ಎಲ್ಲಿಯೂ ಸಲ್ಲರಯ್ಯ." "ಏನು ಬಂದಿರಿ, ಹದುಳವಿದ್ದಿರಿ ಎಂದರೆ ನಿಮ್ಮ ಮೈಸಿರಿ ಹಾರಿಹೋಹುದೆ ? ಕುಳ್ಳಿರೆಂದರೆ ನೆಲ ಕುಳಿ ಬೀಳುವುದೆ ? ಒಡನೆ ನುಡಿದರೆ ಶಿರ ಹೊಟ್ಟೆಹೊಡೆವುದೇ ? ಕೊಡಲಿಲ್ಲದಿದ್ದರೊಂದು ಗುಣವಿಲ್ಲದಿದ್ದರೆ ಕಿವಿಮೂಗ ಕೊಯ್ಯದೆ ಮಾಣ್ಬನೇ ಕೂಡಲ ಸಂಗಮದೇವ." ಈ ಮಾತುಗಳನ್ನು ಕೇಳಿದರೆ ಭಗವದ್ಗೀತೆಯ ವಾಙ್ಮಯತಪಸ್ಸು ನಮಗೆ ನೆನಪಾಗುತ್ತದೆ. "ಅನುದ್ವೇಗಕರಂ ವಾಕ್ಯಂ ಸತ್ಯಂ ಪ್ರಿಯ ಹಿತಂ ಚ ಯತ್। ವಾಙ್ಮಯಂ ತಪ ಉಚ್ಯತೇ॥" ಯಾರ ಮನಕ್ಕೂ ನೋವಾಗದಂತಹ ಮಾತು ಪ್ರಿಯವೂ ಹಿತವೂ ಆಗಿ ವಾಙ್ಮಯವಾದ ತಪಸ್ಸೆನಿಸುವುದು. ಬಸವಣ್ಣನ ಮಾತೆಲ್ಲವೂ ಹೀಗೆ ವಾಙ್ಮಯ ತಪಸ್ಸೇ ಆಗಿದೆ.

ಆದ್ದರಿಂದಲೇ ಅವನ ಮಾತಿನಲ್ಲಿ ಕೋಪತಾಪಗಳ ಸುಳಿವಿಲ್ಲ;

ರಾಗದ್ವೇಷಗಳ ದಾಂಧಲೆ ಇಲ್ಲ : ಅಸೂಯೆ ಮಾತ್ಸರ್ಯಗಳ ಸಂಪರ್ಕವಿಲ್ಲ. ಏನೇ ಬಂದರೂ ಸಮಾಧಾನದಿಂದ ಸಹಿಸಿಕೊಳ್ಳುವ ಉದಾರಭಾವ ಅವನದು. ಅವನ ಪ್ರತಿಯೊಂದು ಮಾತಿನಲ್ಲೂ ಈ ಭಾವ ಎದ್ದು ಕಾಣುತ್ತದೆ.

“ತನಗೆ ಮುನಿವರಿಗೆ ತಾ ಮುನಿಯಲೇಕಯ್ಯ, ತನಗಾದಡೇನು ಅವರಿಗಾದಡೇನು. ತನುವಿನ ಕೋಪ ತನ್ನ ಹಿರಿಯತನದ ಕೇಡು, ಮನದ ಕೋಪ ತನ್ನ ಅರುಹಿನ ಕೇಡು. ಮನೆಯೊಳಗಣ ಕಿಚ್ಚು ಮನೆಯ ಸುಟ್ಟಲ್ಲದೆ ನೆರೆಮನೆಯ ಸುಡದು.” ಈ ಮಾತು ಪ್ರಪಂಚದಲ್ಲಿ ವ್ಯವಹರಿಸುವ ಮಾನವರೆಲ್ಲರ ಹೃದಯದಲ್ಲೂ ಸ್ಥಿರವಾಗಿ ನೆಲಸಬೇಕು. “ತನುವಿನ ಕೋಪ ತನ್ನ ಹಿರಿಯತನದ ಕೇಡು.” ಬಾಯಿಂದ ಆಡುವ ಬಿರುನುಡಿ ಯಾರಿಗೆ ತಾನೆ ಹಿರಿಯತನವನ್ನು ಕೆಡಿಸಲಾರದು ? ಸ್ಥಾನಮಾನಗಳಿಗೆ ತಕ್ಕಹಾಗೆ ಮಾನವರು ನಯವಾಗಿ ಹಿತವಾಗಿ ಮಾತನಾಡುವುದನ್ನು ಕಲಿಯಬೇಕು. ಹೊರಗಿನ ಕೋಪ ನಮ್ಮನ್ನು ಹೇಗೆ ಅಗೌರವಪಡಿಸುವುದೋ, ಹಾಗೆಯೇ ಒಳಗಿನ ಕೋಪ ನಮಗೆ ಸರ್ವವನ್ನೂ ನಾಶಪಡಿಸುವುದು. ನಮ್ಮ ಜೀವನಕ್ಕಾಧಾರವಾಗಿರುವ ಜ್ಞಾನಪ್ರಕಾಶವನ್ನೇ ಅದು ಪೂರ್ಣವಾಗಿ ನಾಶಗೊಳಿಸುವುದು. ಇದರಿಂದ ನಾವು ಬದುಕಿದ್ದರೂ ಸತ್ತಹಾಗೆ, ನಿರ್ವೀರ್ಯರೂ ಹತಾಶರೂ ಆಗುತ್ತೇವೆ. “ಮನದ ಕೋಪ ಅರುಹಿನ ಕೇಡು.” ಹೀಗೆ ಒಳಗೂ ಹೊರಗೂ ನಮ್ಮ ಕೋಪ ನಮ್ಮನ್ನೇ ಭಸ್ಮಮಾಡುವ ಕ್ರೂರವಾದ ಬೆಂಕಿ ಎನಿಸಿರುವುದು. ಯಾವನು ಕೋಪತಾಪಗಳನ್ನು ಇಲ್ಲಿ ಬದುಕಿರುವಾಗಲೇ ಸಹಿಸಿಕೊಳ್ಳಬಲ್ಲನೋ, ಅವನು ಶಾಂತಿ, ಸಮತೆ, ಸಮಾಧಾನಗಳಿಂದ ನಿತ್ಯಸುಂದರನೂ ಬುದ್ಧಿಶಾಲಿಯೂ ಆಗಿ ಎಲ್ಲರಿಗೂ ಪ್ರೇಮ

ಪಾತ್ರನಾಗುವನು. ಅಣ್ಣನ ಈ ಆದರ್ಶವು ಎಲ್ಲರಿಗೂ ಹಿತಕರವಾಗಿದೆ. ಭಗವದ್ಗೀತೆ ಈ ಅಭಿಪ್ರಾಯುವನ್ನು ಇನ್ನೂ ಹೃದಯಂಗಮವಾಗಿ ತಿಳಿಸಿದೆ:

ಕಾಮಕ್ರೋಧೋದ್ಭವಂ ವೇಗಂ ಪ್ರಾಕ್‌ಶರೀರವಿಮೋಕ್ಷಣಾತ್ |
ಶಕ್ನೋತೀಹೈವ ಯಃ ಸೋಢುಂ ಸ ಯುಕ್ತಃ ಸ ಸುಖೀ ನರಃ||

ಕಾಮಕ್ರೋಧಗಳು ಮನುಷ್ಯನ ಅಂತಶ್ಶತ್ರುಗಳು. ಯಾವನು ಈ ಶರೀರದಲ್ಲಿ ವ್ಯವಹರಿಸುವ ಕಾಲದಲ್ಲಿಯೇ ಕಾಮಕ್ರೋಧಗಳಿಂದುಂಟಾಗುವ ಉದ್ವೇಗವನ್ನು ಸಹಿಸಲು ಶಕ್ತನಾಗುವನೊ, ಅವನು ಯೋಗಿ ಎನಿಸುವನು. ಲೋಕದಲ್ಲಿ ಅವನೊಬ್ಬನೇ ನಿತ್ಯಸುಖವನ್ನು ಅನುಭವಿಸಬಲ್ಲನು. ಅಣ್ಣನೂ ಇದೇ ರೀತಿಯಲ್ಲಿ ದಿವ್ಯವಾದ ಉಪದೇಶದಿಂದ ಮಾನವನಿಗೆ ನಿತ್ಯಸುಖದ ಹಾದಿಯುನ್ನು ಏರ್ಪಡಿಸಿರುವನು.

"ಇಲ್ಲಿ ಸಲ್ಲುವರು ಅಲ್ಲಿಯೂ ಸಲ್ಲುವರಯ್ಯ–ಇಲ್ಲಿ ಸಲ್ಲದವರು ಎಲ್ಲಿಯೂ ಸಲ್ಲರಯ್ಯ" ಎಂಬ ಮಾತು ಸರ್ವರಿಗೂ ಉತ್ತಮವಾದ ಆದರ್ಶವಾಗಿದೆ. ಲೋಕದಲ್ಲಿ ಬಾಳುವಾಗ ಮಾನವರಿಗೆ ಪರಸ್ಪರ ವಿಹಿತವಾದ ರೀತಿಯಲ್ಲಿ ವರ್ತಿಸುವ ಆವಶ್ಯಕತೆ ಅನಿವಾರ್ಯವೆನಿಸಿದೆ. ಅವರು ನಡೆನುಡಿಗಳಲ್ಲಿ ಒಬ್ಬರಿಗೊಬ್ಬರಿಗೆ ಅನುಕೂಲವಾಗಿ ವರ್ತಿಸುತ್ತ ಪ್ರೀತಿಗೌರವಗಳಿಂದ ನಡೆದುಕೊಂಡರೆ, ಅವರಿಗೆ ಇಹಪರ ಸುಖಗಳೆರಡೂ ಸಂಘಟಿಸುತ್ತವೆ. ಇಲ್ಲಿ ದ್ವೇಷಾಸೂಯೆಗಳಿಂದ ಒಬ್ಬರನ್ನೊಬ್ಬರು ದೂಷಣೆ ಮಾಡುವವರು ಇಲ್ಲಿಯೂ ಸುಖಪಡದೆ, ಮುಂದೆಯೂ ದುಃಖಭಾಗಿಗಳಾಗುವರು. ಇಲ್ಲಿ ಈ ದೇಹದಲ್ಲಿ ಅನುಭವಿಸದೇ ಇರುವ ನಿತ್ಯಸುಖ ಮುಂದೆ ಎಲ್ಲಿಯೂ ದೊರಕದು. ಆದ್ದರಿಂದಲೇ ಐಹಿಕಜೀವನ ಆತ್ಮಕಲ್ಯಾಣಕ್ಕೆ ಅಮೋಘವೂ

ಪವಿತ್ರವೂ ಆದ ಸದವಕಾಶವೆನಿಸಿದೆ. ಮಹಾಭಾರತವ್ರ
ಜೀವನದ ಈ ಸದವಕಾಶವನ್ನು ರಮಣೀಯವಾಗಿ ನಮ್ಮ
ಮನಸ್ಸಿನ ಮೇಲೆ ಪರಿಣಾಮಕಾರಿಯಾಗುವಂತೆ ಒತ್ತಿ ಹೇಳಿದೆ :

ಅಮೃತಸ್ಯಂದಿನೀಂ ವಾಚಂ ಚಂದನಸ್ಪರ್ಶಶೀತಲಾಂ।
ಸರ್ವತ್ರೈವ ಪ್ರಯುಂಜಾನಃ ಶಿವಲೊಕೇ ಮಹೀಯತೇ॥
ಯಸ್ಮಾನ್ನೋದ್ವಿಜತೇ ಲೋಕಃ ಲೋಕಾನ್ನೋದ್ವಿಜತೇ ಚ ಯಃ।
ಹರ್ಷಾಮರ್ಷಭಯೋದ್ವೇಗೈಃ ವಿಮುಕ್ತಃ ಸ ವಿಶಿಷ್ಯತೇ॥

ನುಡಿದ ಮಾತು ಮುತ್ತಿನಹಾರದಂತೆ, ಸ್ಫಟಿಕದ ಶಲಾಕೆಯಂತೆ,
ಶ್ರೀಗಂಧದ ಲೇಪದಂತೆ, ಒಳಗೂ ಹೊರಗೂ ಅಮೃತದ ಸ್ಪರ್ಶ
ವನ್ನು ಮಾಡಿಸಬೇಕು. ಎಲ್ಲರಲ್ಲೂ ಇಂತಹ ನಯವಾದ
ಮಾತನ್ನು ಉಪಯೋಗಿಸುತ್ತಾ ಬಂದರೆ ಅಂತರಂಗದ ಶಿವನಿಗೆ
ಮೆಚ್ಚುಗೆಯಾಗುವುದು. ಇಂತಹ ಮೃದುಭಾಷಿಗೆ ಲೋಕವೂ
ಬೇಸರಗೊಳ್ಳುವುದಿಲ್ಲ. ಇವನೂ ಸಹ ಲೋಕದಲ್ಲಿ ಎಷ್ಟೇ
ದುರ್ವರ್ತನೆಯನ್ನು ಕಂಡರೂ ಅದಕ್ಕೆ ಬೇಸರಪಡುವುದಿಲ್ಲ.
ಇಂತಹವನು ಶುಭಕ್ಕೆ ಆಶಿಸದೆ, ಅಶುಭಕ್ಕೆ ದ್ವೇಷಿಸದೆ, ಸ್ತುತಿಗೆ
ಹಿಗ್ಗದೆ, ನಿಂದೆಗೆ ಕುಗ್ಗದೆ, ಸಮಚಿತ್ತದಿಂದ ಲೋಕದಲ್ಲಿ
ಬಾಳುತ್ತ, ನೆರೆಹೊರೆಯವರ ಲೋಪದೋಷಗಳನ್ನು ಸಹನೆ
ಯಿಂದ ತಿದ್ದಿ ಅವರ ಮೇಲ್ಮೆಯನ್ನು ಸಾಧಿಸುವನು. ಅಣ್ಣನು
ಈ ಬಗೆಯ ವರ್ತನೆಯಲ್ಲಿ ಲೋಕಕ್ಕೆ ಉತ್ತಮವಾದ ಆದರ್ಶ
ವಾಗಿದ್ದಾನೆ.

ಶಿವದೀಕ್ಷೆಯನ್ನು ಹೊಂದಿ ಶಿವವ್ರತವನ್ನು ಹಿಡಿದು, ಕಷ್ಟ
ಸಾಧನೆಯಲ್ಲಿ ಕೈಲಾಗದೆ ಪೇಚಾಡುತ್ತಿದ್ದ ಜನರಿಗೆ ಅಣ್ಣನು
ತುಂಬ ಸಹನೆ ಮತ್ತು ಮರುಕಗಳನ್ನು ತೋರಿಸುತ್ತಿದ್ದನು

ಜೀವನ ಸಹನೆ ಎಷ್ಟು ಉನ್ನತಮಟ್ಟದ್ದೆಂಬುದನ್ನು ಅವನ ಮಾತೇ ತಿಳಿಸುತ್ತದೆ.

“ನಿಧಾನವನರಸಿಹೆನೆಂದು ಹೋದರೆ ವಿಘ್ನ ಒಪ್ಪುದು ಮಾಬುದೇ, ಸದಾಶಿವನೆಂದರೆ ಬೆದರಟ್ಟಿ ಸುಡುವುದು ಮಾಬುದೇ, ಹದುಳಿಗನಾಗಿ ಉಳಿದರೆ ಅಮೃತಪದವನೀವ ಕಾಣಾ ಕೂಡಲ ಸಂಗಮದೇವ.” ಒಂದು ನಿಧಿಯನ್ನು ಹುಡುಕಲು ಹೊರಟರೆ ವಿಘ್ನಬಾರದಿರುವುದೆ? ಅದೆಲ್ಲವನ್ನೂ ಸಹಿಸಿಕೊಂಡು ಧೈರ್ಯದಿಂದ ಮುಂದೆ ನುಗ್ಗಿದವನಿಗೆ ಮಾತ್ರವೇ ನಿಧಿ ದೊರಕಬಲ್ಲದು. ಹಾಗೆಯೇ ಶಿವನನ್ನು ಅನನ್ಯಭಕ್ತಿಯಿಂದ ನಂಬಿದವನಿಗೆ ಎಲ್ಲಾ ಕಷ್ಟಗಳೂ ಪರಿಹಾರವಾಗುತ್ತವೆ ಎಂದು ಸಾಧಕರಿಗೆ ಅಣ್ಣನು ಧೈರ್ಯ ಹೇಳುತ್ತಿದ್ದನು.

ಆಗಿನ ಕಾಲದ ಜಂಗಮರು “ನಾವು ಮಾಹೇಶ್ವರಸ್ಥಲದವರು, ನಾವು ಶರಣಸ್ಥಲದವರು, ನಾವು ಷಟ್ಸ್ಥಲಬ್ರಹ್ಮಗಳು” ಎಂದು ಅಜ್ಞಾನದಿಂದ ನುಡಿಯುತ್ತ ಪ್ರತಿಷ್ಠಾಕಾಂಕ್ಷಿಗಳಾಗಿದ್ದರು. ಷಟ್ಸ್ಥಲಮಾರ್ಗ ಎಡರೋ ಅನುಭವಿಗಳಿಗೆ ಮಾತ್ರವೇ ಸಾಧ್ಯವಾಗುವಂತಹದು. ಅದರಲ್ಲಿ ಆದಿಯಲ್ಲಿ ದ್ವೈತವೂ, ಮಧ್ಯದಲ್ಲಿ ವಿಶಿಷ್ಟಾದ್ವೈತವೂ, ಕೊನೆಯಲ್ಲಿ ಅದ್ವೈತವೂ ಉಂಟು. ಈ ಮಾರ್ಗವು ಜೀವನ ಆತ್ಮವಿಕಾಸದಲ್ಲಿ ಆರು ಅಂತಸ್ತುಗಳುಳ್ಳದ್ದು. ಅದು ಬರಿ ಬಾಯಿಂದ ಹೇಳುವ ವಿಷಯವಲ್ಲ. ಆದರೆ ಕೇವಲ ಆಚರಣೆಯಿಂದ ಅನುಭವಗೋಚರವಾಗುವಂತಹದು. ಗುರುವಿಗೆ ಕಿಂಕರನಾಗಿ ನಡುಗುತ್ತಾ ಅವನ ಸೇವೆಯಲ್ಲಿ ತೊಡಗುವ ಸದ್ಭಕ್ತನಿಗೆ ಮಾತ್ರ ಷಟ್ಸ್ಥಲಾಚರಣೆ ಸಾಧ್ಯವಾಗುವುದು. ಹುಟ್ಟಿನಲ್ಲಿ ಜಂಗಮನೆಂದು ಹೇಳಿದ ಮಾತ್ರವೇ ಇದರ ಆಚರಣೆ ಅಳವಡು

ವುದಿಲ್ಲ. ಇದಕ್ಕೆ ನಿರಹಂಕಾರತೆ ನಿರಭಿಮಾನತೆಗಳು ಆವಶ್ಯಕ. ಜಂಗಮನೂ ಸಹ ಅಹಂಕಾರ ಅಭಿಮಾನಗಳಿಗೆ ವಶನಾಗದಂತೆ ಜಾಗೃತನಾಗಿರಲು ಎದುರಿಗೆ ಇರುವವನನ್ನು ಶಿವನೆಂದು ವಂದಿಸಿ ಭಕ್ತಿಯಿಂದ ಸೇವೆ ಮಾಡಲೇಬೇಕು. ಸದ್ವರ್ತನೆ, ಸೌಶೀಲ್ಯ, ನಿರಹಂಕಾರತೆ, ನಿರಭಿಮಾನತೆಗಳಿಂದ ಒಬ್ಬನು ಜಂಗಮನೆನಿಸಿಕೊಳ್ಳುವನೇ ಹೊರತು ಹುಟ್ಟಿನಿಂದ ಯಾವನೂ ಜಂಗಮನಾಗಲಾರನು. ಪ್ರತಿಯೊಬ್ಬನೂ ಗುಣದಿಂದ ಜಂಗಮನಾಗಬಹುದು. ನಡೆನುಡಿ ಶುದ್ಧವಿಲ್ಲದೆ, ಆಶೆ ಅಭಿಮಾನಗಳಿಂದ ಕುದಿಯುತ್ತಿರುವವನು ಎಂದಿಗೂ ಜಂಗಮನೆನಿಸಲಾರನು. ಬಸವಣ್ಣನಂತೂ ಜಂಗಮರಲ್ಲಿ ಲೋಪದೋಷಗಳನ್ನು ಗಮನಿಸದೆ ಅವರನ್ನು ಪ್ರೀತಿಸುತ್ತಿದ್ದನು. ಆದರೆ ಅಲ್ಲಮಪ್ರಭು ಜಂಗಮರ ನೈಜಸ್ವರೂಪವನ್ನು ಬಿಚ್ಚಿದ ಹೃದಯದಿಂದ ತಿಳಿಸುತ್ತಿದ್ದನು. ಅವನ ಮಾತು ನಿರ್ದಾಕ್ಷಿಣ್ಯ ಹಾಗೂ ನಿಷ್ಪಕ್ಷಪಾತವಾಗಿ ಜಂಗಮರ ದುರ್ವರ್ತನೆಯನ್ನು ಕಾಡಿಸುತ್ತಿತ್ತು. ಅವನು ಹೀಗೆ ಹೇಳುತ್ತಿದ್ದನು: "ಹೊನ್ನು ಹೆಣ್ಣು ಮಣ್ಣಿನಾಶೆಯಂ ಬಿಟ್ಟು, ಕೋಪತಾಪವಂ ಬಿಟ್ಟು, ಭ್ರಾಂತಿ ಭ್ರಮೆಯುಂ ಬಿಟ್ಟು ಜಂಗಮವಾಗಬೇಕು ಕಾಣಿರೋ, ಷಡು ಲೋಭದ ರುಚಿಯು ಹಿಂಗಿ ಜಂಗಮವಾವಲ್ಲದೆ ಭವ ಹಿಂಗದು" ಹೀಗೆ ಪ್ರಭು ಜಂಗಮಲಕ್ಷಣವನ್ನು ಬಿಡಿಸಿ ಹೇಳುತ್ತಿದ್ದನು. ಆದರೆ ಅಣ್ಣನು ಇಂತಹ ಜಂಗಮರನ್ನೂ ಒಳ್ಳೆಯ ಮಾತುಗಳಿಂದ ಬೋಧಿಸಿ ಸನ್ಮಾರ್ಗಕ್ಕೆ ತಿರುಗಿಸುತ್ತಿದ್ದನು. ಜಂಗಮರಾಗಲೀ ಭಕ್ತರಾಗಲೀ ಎಲ್ಲರಿಗೂ ಅಹಂಕಾರ ಗರ್ವಗಳನ್ನು ತೊರೆದು ಸದಾಚಾರ ಸದ್ವರ್ತನೆಗಳಿಂದ ಬಾಳುವಂತಹ ದಿವ್ಯ ಆದರ್ಶವನ್ನು ಅಣ್ಣನು ತಿಳಿಸಿದನು. ಈ ರೀತಿ ನಯವಾಗಿ ಬುದ್ಧಿ ಕಲಿಸುವುದೇ

ಅಣ್ಣನ ಪಾಲಿಗೆ ಬಂದಿತು. ಜಂಗಮರು ಇದನ್ನೂ ಸೈರಿಸಿದಂತೆ ಕಾಣಲಿಲ್ಲ. ಅಣ್ಣನ ಕೈಲಿ ಬುದ್ಧಿ ಹೇಳಿಸಿಕೊಳ್ಳುವುದು ಅವರಿಗೆ ಹಿಡಿಸಲಿಲ್ಲ. ಆಗಲೂ ಅಣ್ಣನು ಕೋಪಿಸದೆ ಜಂಗಮರಿಗೆ ಸಮಾಧಾನಪಡಿಸುತ್ತ, ಸನ್ಮಾರ್ಗದಲ್ಲಿ ವ್ಯವಹರಿಸುವಂತೆ, ಅವರನ್ನು ಪ್ರೇರಿಸುತ್ತಿದ್ದನು. ಲಿಂಗಭಕ್ತನು ಲಿಂಗಪಥವನ್ನು ಹೇಳಿದರೆ ಯಾರೂ ಕೋಪಿಸಬಾರದು. ಹಾಗೆ ಕೋಪಿಸುವವರನ್ನು ಲಿಂಗದೇವನು ಮೆಚ್ಚನು. ಲಿಂಗವಂತನು ಲಿಂಗವಂತರಿಗೆ ಬುದ್ಧಿ ಹೇಳುವಾಗ, ದುರ್ಗುಣಕ್ಕೆ ಕೋಪಿಸುವುನಲ್ಲದೆ ಲಾಂಛನಕ್ಕೆ ಕೋಪಿಸನು. ತಪ್ಪಿಗೆ ತಕ್ಕ ಶಿಸ್ತು ಮತ್ತು ನಿಯಮವನ್ನು ತಿಳಿಸಬೇಕೇ ಹೊರತು ವ್ಯಕ್ತಿಯನ್ನು ದ್ವೇಷಿಸುವುದು ಶಿವಪೂಜೆಯಲ್ಲ. ಹೀಗೆ ಸಮಾಧಾನ ಹೇಳುತ್ತ ಅಣ್ಣನು ಜಂಗಮರ ಮನಸ್ಸನ್ನು ತನ್ನ ಕಡೆಗೆ ಸೆಳೆದುಕೊಂಡನು. ಅವರ ಮನಕ್ಕೆ ಕೊಂಚ ಬೇಸರವಾಗಿದ್ದರೂ ಈ ಹೋರಾಟದಲ್ಲಿ ಅಣ್ಣನು ಜಯಶೀಲನಾದನು.

ಗವಿಯಲ್ಲಿ ಕುಳಿತು ತಪಸ್ಸುಮಾಡಿ ಸಿದ್ಧಿಪಡೆದವರಿಗೆ ಕಾಮಕ್ರೋಧಗಳು ತೊಲಗುವುದೇನೊ ಸಹಜ. ಆದರೂ ಜನಸಾಮಾನ್ಯರ ಕುಂದುಕೊರತೆಗಳನ್ನು ನೋಡಿ, ಅವನ್ನು ಪರಿಹರಿಸಬೇಕಾದರೆ ಸಾಕಷ್ಟು ಸಹನೆ ಶಾಂತಿಗಳು ಅವರಲ್ಲಿ ಇಲ್ಲದಿರಬಹುದು. ಋಷಿಗಳಿಗೆ ಕೋಪ ಶಮನವಾಗಿದ್ದರೂ, ಲೋಕದ ಅವಿವೇಕವನ್ನು ಗಮನಿಸಿದಾಗ ಅವರಿಗೆ ಬೇಗನೆ ಕೋಪ ಹೊರಹೊಮ್ಮುವುದು. ಅವರ ಚಿತ್ತೈಕಾಗ್ರತೆಗೆ ಪ್ರಕೃತಿಯ ಮನಮೋಹಕವಾದ ಆಕರ್ಷಣೆಯಿಂದ ಅನೇಕ ಪ್ರತಿಬಂಧಕಗಳು ಒದಗಬಹುದು. ಆದರೆ ಅಣ್ಣನಿಗೆ ಇಂತಹ ಪ್ರಸಕ್ತಿ ಒದಗಲಿಲ್ಲ. ಪ್ರಪಂಚದಲ್ಲಿ ಎಲ್ಲರ ನಡುವೆ ಬಾಳುತ್ತಿರುವಾಗಲೇ ಉಗ್ರಸಾಧನೆ

ಯಿಂದ ಮನಸ್ಸು ಪಕ್ವವಾದುದರಿಂದ ಅವನಲ್ಲಿ ಕೋಪದ
ಸುಳಿವೇ ಆಗುವಂತಿರಲಿಲ್ಲ. ಕೋಪ ಪೂರ್ಣವಾಗಿ ಅಳಿದ
ಹೃದಯದಲ್ಲಿ ಪ್ರೇಮವು ನೆಲಸಿತ್ತು. ಆದ್ದರಿಂದ ಜಂಗಮರ
ದುರಾಚಾರಗಳ ಬಗ್ಗೆ ತೀವ್ರವಾದ ಯಾತನೆಯನ್ನು ಅನುಭವಿಸಿ
ದರೂ, ಆ ಯಾತನೆಯೆಂಬ ಬೆಂಕಿಯಲ್ಲಿ ಸುಟ್ಟ ಮನಸ್ಸು
ಅಪರಂಜಿಯಂತೆ ಶುದ್ಧವಾಯಿತು. ಭಕ್ತನಾದವನು ಮರು
ಮಾತಿಲ್ಲದೆ ಜಂಗಮನನ್ನು ಈಶ್ವರನೆಂದೇ ದೃಢವಾಗಿ ನಂಬ
ಬೇಕೆಂದು ಅಣ್ಣನು ತೀರ್ಮಾನಿಸಿಕೊಂಡನು. ಬಾಹ್ಯಾಚಾರ
ವ್ಯವಹಾರಗಳಿಂದ ಒಬ್ಬನನ್ನು ನಾವು ಏಕೆ ಪರೀಕ್ಷಿಸಬೇಕು?
ನಮ್ಮನ್ನು ನಾವು ತಿದ್ದಿ ಪರೀಕ್ಷಿಸಿಕೊಂಡರೆ ಸಾಲದೆ?
ಬೇರೊಬ್ಬರನ್ನು ತಿದ್ದುವ ಹೊರೆ ಈಶ್ವರನಿಗೆ ಸೇರಿದುದು. ನಮ್ಮ
ಅಲ್ಪವಾದ ಆಯುಃಪ್ರಮಾಣದಲ್ಲಿ ಬೇರೆಯವರ ಲೋಪದೋಷ
ಗಳನ್ನು ಹುಡುಕುವುದು ಮುಖ್ಯವಲ್ಲ. ಒಬ್ಬನಲ್ಲಿ ಇದ್ದದ್ದನ್ನು
ಇದ್ದ ಹಾಗೆ ಒಪ್ಪಿಕೊಂಡು ಪ್ರೀತಿಸುವುದು ಭಕ್ತನ ಕರ್ತವ್ಯವೆಂಬ
ಮಾರ್ಪಾಟು ಅಣ್ಣನ ಮನದಲ್ಲುಂಟಾಯಿತು. ಜೀವಿತದ ಅಲ್ಪ
ಕಾಲವನ್ನೂ ಆತ್ಮಪರೀಕ್ಷೆಗೆ ಉಪಯೋಗಿಸದೆ, ಗುರುಜಂಗಮರ
ಲೋಪದೋಷಗಳನ್ನು ಹುಡುಕುವ ಪಾಪಕರ್ಮದಲ್ಲಿಯೇ
ವಿನಿಯೋಗಿಸುವುದು ಅವಿವೇಕ ಮತ್ತು ಹಾನಿಕರ. ಈ ಅಭಿ
ಪ್ರಾಯವನ್ನು ಅಣ್ಣನು ಒತ್ತಿಹೇಳಿದನು. ಅವನ ಆಶಯ ಇಷ್ಟ
ರಲ್ಲಿಯೇ ಕೊನೆಗಾಣದೆ, ಅಲ್ಲಿಂದ ಮುಂದೆ ಹೊರಟು, ಅಂಗದ
ಮೇಲೆ ಲಿಂಗವುಳ್ಳವರೆಲ್ಲರನ್ನೂ ಸಂಗಮನಾಥನೆಂದೇ ಗೌರ
ವಿಸುವ ಗುರುತರವಾದ ಕರ್ತವ್ಯದ ನಿರ್ವಹಣೆಯಲ್ಲಿ ಕೊನೆ
ಗೊಂಡಿತು. ಮನುಷ್ಯಸ್ವಭಾವದಲ್ಲಿ ಭೇದಗಳು ಇರುವುದು
ಸಹಜ. ಮಾನವಸಾಮಾನ್ಯನೂ ಪ್ರಕೃತಿಯ ಸಂಸರ್ಗದಿಂದ

ಅಪರಿಪೂರ್ಣನೂ ದೋಷಯುಕ್ತನೂ ಆಗಿರುವನು. ಆದರೆ ಈ ಪ್ರಕೃತಿ ಶಾಶ್ವತವಾದ ವಸ್ತುವಲ್ಲ. ಅದು ಪರಮಾತ್ಮನಿಂದಲೇ ಬಂದು ಅವನಲ್ಲಿಯೇ ಸೇರಲಿರುವುದರಿಂದ, ಅದರಿಂದಾಗಿರುವ ದೈಹಿಕ, ಮಾನಸಿಕ, ಬೌದ್ಧಿಕ ಭೇದಗಳಿಗೆ ಜ್ಞಾನಿಯು ಹೆಚ್ಚು ಬೆಲೆ ಕೊಡಲಾರನು. ಅವೆಲ್ಲದರೊಳಗೆ ಸೂತ್ರದಂತೆ ಹೊಂದಿಕೊಂಡಿರುವ ಆತ್ಮೈಕತೆಯನ್ನು ಗಮನಿಸಿ ಭೇದದೃಷ್ಟಿಯನ್ನು ನಿರಾಕರಿಸುವುದು ಸುಸಂಸ್ಕೃತಮಾರ್ಗ. ಅಣ್ಣನು ಈ ಮಾರ್ಗವನ್ನು ಹಿಡಿದು ಎಲ್ಲರಲ್ಲೂ ಆತ್ಮದ ಏಕತೆಯನ್ನು ಕಂಡು ಜಂಗಮರಲ್ಲಿ ಉತ್ತಮ ಮಧ್ಯಮ ಕನಿಷ್ಠವೆಂಬ ಭೇದಭಾವನೆಯನ್ನು ದೂರಮಾಡಿದನು. ಅಣ್ಣನು ಹೀಗೆ ಮನಸ್ಸಿನ ಅಲ್ಪತನವನ್ನು ತೊರೆದು, ಸರ್ವಸಮತಾಭಾವವನ್ನು ಆಚರಿಸುತ್ತಿದ್ದುದರಿಂದ ಮಹಾತ್ಮನೆನಿಸಿದನು. ಇದು ಮಹಾತ್ಮರಿಗಲ್ಲದೆ ಸಾಮಾನ್ಯಜನರಿಗೆ ಸಾಧ್ಯವಾಗದು. ಅಣ್ಣನ ದರ್ಶನದಿಂದ ಅನೇಕ ವಿಟ ನಟ ಚೋರ ಜಂಗಮರು ಸಭ್ಯರಾಗಿ ಆತ್ಮೋನ್ನತಿಯನ್ನು ಪಡೆದರು. ಲೋಕದ ವರ್ತನೆಯಲ್ಲಿ ಮನುಷ್ಯಸ್ವಭಾವವು ವಿಚಿತ್ರವೂ ವಿವಿಧವೂ ಆದುದು. ಆ ಸ್ವಭಾವದ ಪ್ರವೃತ್ತಿಯೂ ನಾನಾಮುಖವಾದುದು. ಆದರೂ ಅದು ಮಹಾತ್ಮರ ಸಂದರ್ಶನ, ಸಂಪರ್ಕ, ಸಂಭಾಷಣಗಳಿಂದ ಬದಲಾಯಿಸಬಹುದು. ಹೀಗೆ ಬದಲಾವಣೆಯಾಗುವುದುಂಟೆಂಬುದನ್ನು ಮನಶ್ಶಾಸ್ತ್ರವೂ ಒಪ್ಪಿಕೊಂಡಿದೆ. ಲೋಕೋದ್ಧಾರಕ್ಕಾಗಿ ಒಬ್ಬ ಮಹಾತ್ಮನು ಅವತರಿಸಿದರೂ ಅವನ ಪ್ರಭಾವವು ಎಲ್ಲೆಡೆಯಲ್ಲೂ ವ್ಯಾಪಿಸಿ ಜನರ ಅಜ್ಞಾನವನ್ನು ನಾಶಮಾಡಬಲ್ಲದು ಎಂಬುದಕ್ಕೆ ಭಾರತದಲ್ಲಿ ಅನೇಕ ನಿದರ್ಶನಗಳು ಆಗಿವೆ. ಒಬ್ಬನಿಂದ ಅನೇಕರು ಉದ್ಧಾರವಾಗಿರುವುದನ್ನು ನಮ್ಮ ಧರ್ಮದಲ್ಲಿ

ಮೊದಲಿನಿಂದಲೂ ಕಾಣುತ್ತಿದ್ದೇವೆ. ಹೀಗೆ ಬಸವಣ್ಣನ
ಭಕ್ತಿಯಿಂದ ಗುರುಜಂಗಮರನ್ನು ಸಾಕ್ಷಾತ್ ಲಿಂಗವೆಂದು ದೃಢ
ಮನದಿಂದ ನಂಬಿ, ಅವರನ್ನೂ ಉದ್ಧರಿಸಿ, ತಾನೂ ಉದ್ಧಾರ
ನಾದನು. ತೊತ್ತಿಗೆ ತೊತ್ತುಗೆಲಸವಲ್ಲದೆ ಅರಸರ ಸುದಿ
ನಮಗೇಕೆಂಬುದೇ ಅಣ್ಣನ ಆಶಯ. ಅರಸರ ಮನೆಯಲ್ಲಿ ಅರಸಿ
ಯಾಗಿರುವುದಕ್ಕಿಂತ ಭಕ್ತರ ಮನೆಯಲ್ಲಿ ತೊತ್ತಾಗಿರುವುದು
ಅವನಿಗೆ ಇಷ್ಟ, ನಿರಂತರವೂ ಶಿವನ ಸೇವೆ—ಗುರುಜಂಗಮರ
ಪೂಜೆ, ಇವೇ ಅಣ್ಣನ ಜೀವನದ ಉಸಿರು. ಇದಲ್ಲದೆ ಬೇರೆ
ವಿಚಾರಗಳು ಈಶ್ವರಾಧೀನ. ನಮ್ಮ ಪಾಲಿಗೆ ಬಂದದ್ದೇ ನಮಗೆ
ಪಂಚಾಮೃತ. ಬೇರೆ ಕೆಲಸಕ್ಕೆ ಕೈಹಾಕುವುದು ನಮಗೆ
ಸಂಬಂಧಿಸಿದ್ದಲ್ಲ. ಸರ್ವರನ್ನೂ ಶಿವಭಾವನೆಯಿಂದ ಪ್ರೀತಿಸು
ವುದಷ್ಟೇ ನಮಗೆ ಸೇರಿದ್ದು. ಅಷ್ಟನ್ನು ಸಂತೋಷದಿಂದ
ನಿರ್ವಹಿಸುವುದೇ ನಮ್ಮ ಧರ್ಮ ಮತ್ತು ಕರ್ತವ್ಯ. ಅದರ
ಫಲಾಫಲಗಳು ನಮ್ಮವಲ್ಲ-ಅವು ಈಶ್ವರನಿಗೆ ಸೇರಿದವು. ಈ
ಬಗೆಯ ವಿವೇಚನೆ ಮಾನವರಿಗೆ ಈ ಸಂಸಾರದಲ್ಲಿ ಹೆಜ್ಜೆ
ಹೆಜ್ಜೆಗೂ ಆವಶ್ಯಕ. ಇದನ್ನು ಅಣ್ಣನು ಆಚರಿಸಿ ತೋರಿಸಿ
ದ್ದಾನೆ. ಇಂತಹ ದಿವ್ಯ ಆದರ್ಶದಿಂದ ಅವನು ಅಮರಜ್ಯೋತಿ
ಯಾಗಿ ಎಲ್ಲರ ಹೃದಯವನ್ನೂ ಪಾವನಗೊಳಿಸುತ್ತಿದ್ದಾನೆ.

ಅಣ್ಣನ ಧಾರ್ಮಿಕಬೋಧೆ

ಅಣ್ಣನ ಧರ್ಮಬೋಧೆ ಆ ಕಾಲದ ಸ್ಥಿತಿಗತಿಗಳಿಗನುಗುಣ
ವಾಗಿ ಅನೇಕ ಮಾರ್ಗಗಳಲ್ಲಿ ಪ್ರಸರಿಸಬೇಕಾಗಿತ್ತು. ಆಗ
ಅನೇಕರು ನೂತನವಾಗಿ ಲಿಂಗಧಾರಿಗಳಾಗಿದ್ದರು. ಅವರು
ನಾನಾ ಕುಲಗೋತ್ರಗಳಿಂದ ಬಂದವರು. ಆದರೆ ಅವರು

ವೀರಶೈವಧರ್ಮವನ್ನು ಮತ್ತೆ ಬಿಟ್ಟುಹೋಗದಂತೆಯೂ, ಹಿಂದಿನಿಂದ ಬಂದ ದುರಾಚಾರಗಳನ್ನು ತ್ಯಜಿಸಿ ಶಿವಮಾರ್ಗವನ್ನು ಅನುಸರಿಸುವಂತೆಯೂ. ಲಿಂಗಧಾರಿಗಳೆಲ್ಲರನ್ನೂ ಒಂದೇ ಗುಂಪಿನವರೆಂದು ಎಲ್ಲರೂ ಪುರಸ್ಕರಿಸುವಂತೆಯೂ ಅಣ್ಣನು ಏರ್ಪಡಿಸಬೇಕಾಗಿತ್ತು. ಕೆಲವರು ಹಿಂದಿನ ಸಂಬಂಧಗಳನ್ನು ಬಿಡಲಾಗದೆ ಗೋಳಾಡುತ್ತಿದ್ದರು. ಕೆಲವರು ವೀರಶೈವಮತವನ್ನು ಬಿಟ್ಟು ಹಿಂದಿನ ಜಾತಿಮತಗಳಿಗೆ ಸರಿಯುತ್ತಿದ್ದರು. ಈ ಬಗೆಯ ಜನರ ಅನಿಶ್ಚಿತ ಬುದ್ಧಿಯನ್ನೂ, ಅಧೈರ್ಯವನ್ನೂ ನೋಡಿ ಅಣ್ಣನಿಗೆ ಬಹಳ ಸಂಕಟವಾಗಿತ್ತು. ಷಟ್ಸ್ಥಲ ಮಾರ್ಗವನ್ನು ಹಿಡಿದವರಲ್ಲಿ ಕೆಲವರು ಬ್ರಾಹ್ಮಣರು, ಮತ್ತೆ ಭವಿಯೊಡನೆ ಸೇರದಿದ್ದರೂ ಹಿಂದಿನ ವಿಪ್ರಕರ್ಮಗಳನ್ನೂ ಆಚರಿಸುತ್ತ, ಎರಡು ಸಂಪ್ರದಾಯಗಳನ್ನೂ ಬೆರಕೆ ಮಾಡುತ್ತಿದ್ದರು. ಲಿಂಗವೊಂದು ಕಡೆ, ಜನಿವಾರ ಒಂದು ಕಡೆ; ಪ್ರಸಾದಸೇವನೆ ಒಂದು ಕಡೆ, ವಿಷಯಭೋಗ ಒಂದು ಕಡೆ. ಇದನ್ನು ನೋಡಿ ಅಣ್ಣನಿಗೆ ತುಂಬ ದುಃಖವಾಗಿರಬೇಕು. ಅಣ್ಣನು ಮೊದಲು ಬ್ರಾಹ್ಮಣನಾಗಿದ್ದು ವಿಪ್ರಕರ್ಮದಲ್ಲಿ ತಿರುಳನ್ನು ಕಾಣದೆ ಶಿವಪಥವನ್ನು ಹಿಡಿದು, ಕರ್ಮಬಂಧನದ ಬಿಡುಗಡೆಗೆ ಇದು ಉತ್ತಮ ಮಾರ್ಗವೆಂದು ಭಾವಿಸಿ ಶಿವಪಥಕ್ಕೆ ಬಂದಿದ್ದನು. ಆದ್ದರಿಂದಲೇ ಅವನು ಸದಾಚಾರದಲ್ಲಿ ದುರಾಚಾರವನ್ನು ಬೆರೆಸದಂತೆಯೂ, ವೀರಶೈವದ ಸರ್ವಸಮತಾಭಾವವನ್ನು ಆಚರಿಸುವಂತೆಯೂ ಬೋಧಿಸುತ್ತಿದ್ದನು. ಕೀಳುಜಾತಿಯಲ್ಲೂ ಅನೇಕರು ಭಗವದ್ಭಕ್ತರಿರುತ್ತಾರೆ. ಅವರು ತಮ್ಮ ಭಕ್ತಿ ಸದ್ಗುಣಗಳಿಂದ ಎಲ್ಲರಿಗೂ ವಂದನಾರ್ಹರೇ. ಜಾತಿದೃಷ್ಟಿಯಿಂದಲೇ ಅವರನ್ನು ಅಲ್ಲಗಳೆಯಬಾರದೆಂಬುದು ಅಣ್ಣನ ಆಶಯ, ಸರ್ವರಿಗೂ ಮೋಕ್ಷಕ್ಕೆ ಸಮಾನಾವಕಾಶವಿರು

ವುದರಿಂದ ಆತ್ಮವಿಕಾಸವುಂಟಾಗಿ ಎಲ್ಲರೂ ನೆಮ್ಮದಿಯಿಂದ ಬಾಳಲೆಂಬುದೇ ಅವನ ಹಿರಿಯಾಶೆ.

ಅಣ್ಣನ ಈ ಸದಾಶಯದಿಂದ ಮಾನವಸಮಾಜದಲ್ಲಿ ಸಮತಾವಾದವು ನೆಲೆಯಾಗಿ ನಿಂತಿತು. ಇದರ ಪರಿಣಾಮವಾಗಿ, ಶ್ವಪಚನೂ ಲಿಂಗಭಕ್ತನಾದರೆ ಕುಲಜನೆನಿಸಿದನು. ಲಿಂಗ ಪೂಜಕರೆಲ್ಲರೂ ಹೃದಯದಲ್ಲಿ ಸಮಾನವಾಗಿ ಶೋಭಿಸುವ ಪ್ರಾಣಲಿಂಗದ ಸಂಬಂಧಿಗಳಾದ್ಧರಿಂದ ಒಂದೇ ಜಾತಿಯವರೆಂಬ ಸದ್ಭಾವನೆ ಸಮಾಜದಲ್ಲಿ ವ್ಯಾಪಿಸಿತು. ಲಿಂಗಪೂಜಕರು ಸದಾ ಪರಿಶುದ್ಧರಾಗಿ ವರ್ಣಾತೀತರಾಗಿರುವುದರಿಂದ, ಅವರಲ್ಲಿ ಹೆಚ್ಚು ಕಡಮೆಗಳೆಂಬ ಭಾವನೆ ಅನ್ವಯಿಸುವುದಿಲ್ಲ. ಲಿಂಗದೇವನ ಪೂಜಿಸಿ ಕುಲವನರಸಬಾರದು. ಪಟ್ಟವ ಕಟ್ಟಿದ ಬಳಿಕ ಲಕ್ಷಣವ ನರಸಬಾರದು. ಲಿಂಗ ಮುಟ್ಟಿದವರೆಲ್ಲರೂ ಶುದ್ಧರು. ಲಿಂಗಮುಟ್ಟ ದವನೇ ಕೀಳು ಮತ್ತು ಭವಿ. ಲಿಂಗದ ನಿತ್ಯಸಂಬಂಧವುಳ್ಳವರೆಲ್ಲರೂ ಭಕ್ತರು ಎಂದು ಹೇಳುತ್ತ, ಅಣ್ಣನು ಹೊಸ ಲಿಂಗ ಧಾರಿಗಳಿಗೂ ಹಳೆಯ ಸಂಪ್ರದಾಯಬದ್ಧರಾದ ಲಿಂಗಧಾರಿ ಗಳಿಗೂ ಸಮತೆ ಸಾಮರಸ್ಯಗಳನ್ನು ಕಲ್ಪಿಸಬೇಕಾಯಿತು. ಎಲ್ಲರ ಹೃದಯದಲ್ಲೂ ಈಶ್ವರನ ಚಿತ್ಕಲೆ ಒಂದೇ ವಿಧವಾಗಿ ನೆಲಸಿರುವುದು. ಅದಕ್ಕೆ ಶೂದ್ರ-ಬ್ರಾಹ್ಮಣ-ಹೆಣ್ಣು-ಗಂಡು-ದುರಾಚಾರಿ -ಸದಾಚಾರಿ ಎಂಬ ಭೇದವಿಲ್ಲ. ಆದರೆ ಅದು ನಿರ್ಮಲಹೃದಯ ದಲ್ಲಿ ಸದ್ಭಕ್ತನಾದವನಿಗೆ ಮಾತ್ರವೇ ಜ್ಞಾನನೇತ್ರಕ್ಕೆ ಗೋಚರ ವಾಗಬಲ್ಲದು. ಒಳಗಿನ ಈ ಚಿತ್ಕಲೆಯನ್ನು ಸಾಧಕನು ಸಾಕ್ಷಾತ್ತಾಗಿ ಅನುಭವಿಸಲು ಸಾಧ್ಯವಿಲ್ಲದ್ದರಿಂದ, ಗುರುವಿನಿಂದ ಅದನ್ನು ಹೊರಗೆ ಪಡೆದು ಅವನು ನಿರಂತರವೂ ಅರ್ಚಿಸುತ್ತ, ಒಳಗಿನ ಪ್ರಕಾಶದೊಡನೆ ಸಮರಸವಾಗಿ ಬೆರಸಿ, ತಾನೂ

ಅದರಲ್ಲಿ ಹಾಸುಹೊಕ್ಕಾಗಿ ಬೆರೆಯುವ ಸದವಕಾಶವನ್ನು ಗುರು ಕರುಣೆಯಿಂದ ಸದ್ಭಕ್ತರೆಲ್ಲರೂ ಸಮಾನವಾಗಿ ಹೊಂದಬಹು ದಾದ್ದರಿಂದ, ಇವರಲ್ಲಿ ಹೆಚ್ಚು ಕಡಮೆಯೆಂಬ ಭೇದಭಾವನೆಗೆ ಅವಕಾಶವೇ ಇಲ್ಲ. ಮಾನವರೆಲ್ಲರೂ ಒಳಗೇ ಭೇದವಿಲ್ಲದಿರು ವಾಗ ಹೊರಗೆ ಭೇದವನ್ನು ಕಲ್ಪಿಸುವುದು ಅವಿವೇಕ ಮತ್ತು ಮಹಾಪಾಪ. ಭೇದದೃಷ್ಟಿಯೇ ಮಾನವನಿಗೆ ದುಃಖ ಭಯ ಮೋಹಗಳ ಆಕರವೆನಿಸಿದೆ. ಸರ್ವರನ್ನೂ ಆತ್ಮೀಯತೆಯಿಂದ ಪ್ರೀತಿಸುವುದೇ ನಿತ್ಯಸುಖದ ಶಾಶ್ವತ ಮಾರ್ಗ. ಈ ಬಗೆಯ ದಿವ್ಯ ಆದರ್ಶವನ್ನು ಅಣ್ಣನು ಜನತೆಯ ಮುಂದೆ ನೀಡಿರುವನು.

ಆ ಕಾಲದಲ್ಲಿ ಶಿವಧರ್ಮವನ್ನು ಜನರು ಉತ್ಸಾಹದಿಂದ ಕೈಕೊಂಡಿದ್ದರೂ, ಒಂದೇ ಸಂಸಾರದಲ್ಲಿ ಗಂಡನೊಂದು ರೀತಿ, ಹೆಂಡತಿ ಒಂದು ರೀತಿಯಲ್ಲಿ ವರ್ತಿಸುತ್ತಿದ್ದರು. ಗಂಡ ವೀರ ಶೈವದೀಕ್ಷೆಯನ್ನು ಪಡೆದು ಲಿಂಗಪೂಜಾನಿರತನಾಗಿರುವುದು, ಹೆಂಡತಿ ಅನ್ಯಕರ್ಮಾಚರಣೆಮಾಡುತ್ತಿರುವುದು, ಈ ಬಗೆಯ ಅವ್ಯವಸ್ಥೆಯೂ ಸಮಾಜದಲ್ಲುಂಟಾಯಿತು. ಒಂದು ಮನೆ ಯಲ್ಲಿ ಶಿವಪೂಜೆಯೂ, ಹಿಂದಿನಿಂದ ನಡೆದುಬಂದ ಅನ್ಯದೈವದ ಪೂಜೆಯೂ ನಡೆಯುತ್ತಿರುವಾಗ, ಶಿವನಿಗೆ ತೃಪ್ತಿಯಾಗದೆ, ಅನ್ಯದೈವಕ್ಕೆ ಕೋಪವು ಬಂದರೇನು ಗತಿ ಎಂಬ ಹೆದರಿಕೆಯೂ ಜನರಿಗಿತ್ತು. ಇಂತಹವರಿಗೆ ಅಣ್ಣನು "ದೇವನೊಬ್ಬನೇ ಹಲವಾರು ಹೆಸರುಗಳಿಂದ ಪೂಜೆಯನ್ನು ಕೈಗೊಳ್ಳುತ್ತಿರುವನು. ಎಲ್ಲಾ ಬಗೆಯ ಪೂಜೆಯೂ ಅವನೊಬ್ಬನಿಗೇ ಮುಟ್ಟಿ ಅವ ನಿಂದಲೇ ಎಲ್ಲರ ರಕ್ಷಣೆಯೂ ಆಗುತ್ತಲಿರುವುದು" ಎಂದು ಸಮಾಧಾನದಿಂದ ಬುದ್ಧಿ ಹೇಳುತ್ತ ಏಕದೇವವಾದವನ್ನು ಎತ್ತಿ ಹಿಡಿದನು. ದೇವನು ಜನರ ವಿವಿಧ ಸ್ವಭಾವಗಳಿಗನುಗುಣ

ವಾಗಿ ವಿವಿಧ ರೂಪಗಳಿಂದಲೂ ವಿವಿಧ ನಾಮಗಳಿಂದಲೂ ಕಾಣಿಸಿಕೊಳ್ಳುತ್ತಿರುವನು. ನಂಬಿದ ಹೆಂಡತಿಗೆ ಪತಿ ಒಬ್ಬ ನಲ್ಲದೆ ಇಬ್ಬರಿಲ್ಲ, ಹಾಗೆಯೇ ನಂಬಿದ ಭಕ್ತನಿಗೆ ಪ್ರಭು ಒಬ್ಬ ನಲ್ಲದೆ ಇಬ್ಬರಿಲ್ಲ. ನಂಬಿ ಕರೆದರೆ, ಪ್ರಭು ನಮ್ಮ ಕರೆಯನ್ನು ಪುರಸ್ಕರಿಸಿ ಓ ಎನ್ನುವನು. ನಂಬದೆ ನೆಚ್ಚದೆ ಬರಿದೆ ಕರೆದರೆ, ಅರೆಭಕ್ತಿಯಿಂದ ಲೋಕದ ಮನುಜರು ಅವನನ್ನು ಕಾಣ ಲಾರರು. ಎಲ್ಲಾ ಆಕಾರಗಳಿಂದಲೂ ಒಬ್ಬನೇ ಪೂಜಿಸು ಕೊಳ್ಳುತ್ತ ಭಕ್ತರನ್ನು ಅನುಗ್ರಹಿಸುತ್ತಿರುವನೆಂಬ ದಿವ್ಯದೃಷ್ಟಿ ಮಾನವನ ಶ್ರೇಯೋಽಭ್ಯುದಯಗಳಿಗೆ ಅತ್ಯಾವಶ್ಯಕ. ಯಾವ ಆಕಾರವನ್ನು ನೋಡಿದರೂ ಒಬ್ಬ ಪರಮಾತ್ಮನ ಸ್ಮರಣೆಯೇ ನಮಗೆ ಆಗಬೇಕು. "ಅಹಂ ಹಿ ಸರ್ವಯಜ್ಞಾನಾಂ ಭೋಕ್ತಾ ಚ ಪ್ರಭುರೇವ ಚ" ಎಂದು ಪರಮಾತ್ಮನು ಗೀತೆಯಲ್ಲಿ ಸ್ಪಷ್ಟ ವಾಗಿ ಹೇಳಿರುವಂತೆ, ಎಲ್ಲಾ ಆರಾಧನೆಗಳನ್ನೂ ಪರಮೇಶ್ವರ ನೊಬ್ಬನೇ ಸ್ವೀಕರಿಸಿ, ಭಕ್ತರನ್ನು ಉದ್ಧರಿಸುತ್ತಿರುವನೆಂಬ ದೇವೈಕ್ಯದೃಷ್ಟಿಯು ಮಾನವನಿಗೆ ಅನಿವಾರ್ಯವೆನಿಸಿದೆ. ಇದರಿಂದ ಆಗಿನ ಜನರಲ್ಲಿ ನೆಲಸಿದ್ದ ದುರಾಚಾರಗಳೂ ಮದ್ಯಮಾಂಸಗಳ ಸೇವನೆಯೂ ಕಡಮೆಯಾಯಿತು. ಸಮಾಜದ ಉದ್ಧಾರವೂ ಸಂಸ್ಕರಣವೂ ಸಾಧ್ಯವಾದಮಟ್ಟಿಗೆ ಕೈಗೂಡಿದುವು.

> "ಹರಿಯ ಭಕ್ತರಿಗೆ ಹರಿ, ಹರನ ಭಕ್ತರಿಗೆ ಹರ,
> ನರರೇನ ಭಾವಿಸುವರು ಅದರಂತೆ ತೋರುವನು."

ಅವರವರ ದರ್ಶನಕ್ಕೆ, ಅವರವರ ವೇಷಕ್ಕೆ, ಅವರವರಿಗೆಲ್ಲ ದೇವ ನೀನೊಬ್ಬನೆ. ಅವರವರ ಭಾವಕ್ಕೆ, ಅವರವರ ಪೂಜೆಗಂ ಅವರವರಿಗೆಲ್ಲ ಗುರು ನೀನೊಬ್ಬನೆ" ಎಂದು ಮುಪ್ಪಿನ ಷಡಕ್ಷರಿ

ಶಿವಯೋಗಿ ಪರಮಾತ್ಮನ ಬಗ್ಗೆ ಯುಕ್ತವಾದ ವಿವೇಚನೆಯನ್ನು ನೀಡಿರುವನು. "ಭಾವಿಸಲಾವುದನು ಅದರೊಳು ತೋರ್ಪನು ಜಾಣರದೇವ" ಎಂದು ನಿಜಗುಣಶಿವಯೋಗಿ ಮನುಷ್ಯರ ಭಾವನೆಗೆ ತಕ್ಕಂತೆ ಪರಮಾತ್ಮನು ರೂಪಗೊಳ್ಳುವನೆಂದು ಸ್ಪಷ್ಟವಾಗಿ ತಿಳಿಸಿದ್ದಾನೆ. ಈ ಬಗೆಯ ದೇವೈಕ್ಯಭಾವನೆ ಮಾನವನಿಗೆ ಸುಖಶಾಂತಿಗಳ ಸಂಜೀವಿನಿ. ಮಾನವರಲ್ಲಿ ಆತ್ಮೈಕ್ಯ ಭಾವನೆ ಹೇಗೆ ಆವಶ್ಯಕವೋ, ಹಾಗೆ ದೇವನ ವಿವಿಧ ರೂಪಗಳಲ್ಲೂ ದೇವೈಕ್ಯ ಭಾವನೆಯೂ ಮಾನವನ ಶ್ರೇಯೋಭ್ಯುದಯಗಳಿಗೆ ದಿವ್ಯಾಮೃತವೆನಿಸಿದೆ.

ಈ ರೀತಿಯಲ್ಲಿ ಸಮಾಜದ ಭಿನ್ನಭಿನ್ನ ಸ್ವಭಾವದ ಜನರಲ್ಲಿ ತಮ್ಮ ಮತ್ತು ದೇವರ ಬಗ್ಗೆ ಐಕಮತ್ಯವನ್ನು ಸ್ಥಾಪಿಸಿದ ಅಣ್ಣನ ಆದರ್ಶವು ಚಿರಸ್ಮರಣೀಯವಾಗಿ ಶೋಭಿಸುತ್ತಲಿರುವುದು. ಅವನ ಧೈರ್ಯಸ್ಥೈರ್ಯಗಳು ಪ್ರಶಂಸಾರ್ಹವಾಗಿವೆ. ಅವನು ಸಾಧಿಸಿದ ವೀರ್ಯವತ್ತರವಾದ ಈ ಮಹಾಕಾರ್ಯವನ್ನು ಬುದ್ಧದೇವನ ಹೊರತು ಬೇರೆ ಯಾರೂ ಮಾಡಿಲ್ಲ. ರಾಮಾನುಜರು ಹೀನ ಕುಲದವರಿಗೆ ವೈಷ್ಣವದೀಕ್ಷೆಯನ್ನು ಕೊಟ್ಟರೂ, ಅವರಿಗೆ ಸಮಾಜದಲ್ಲಿ ಸಮಾನವಾದ ಹಕ್ಕುಬಾಧ್ಯತೆಗಳನ್ನು ಕಲ್ಪಿಸಲಿಲ್ಲ. ಯಾವ ಹೀನಜಾತಿಯವನೇ ಆಗಲಿ ಅವನನ್ನು ಕೈ ಹಿಡಿದು ನಡೆಸಿ ಸಮಾಜದಲ್ಲಿ ಅವನಿಗೊಂದು ಸ್ಥಾನವನ್ನೂ ಸಮಾನವಾದ ಹಕ್ಕನ್ನೂ ಕಲ್ಪಿಸಿಕೊಡುವುದು ಧರ್ಮೋದ್ಧಾರಕನ ಪ್ರಧಾನ ಕರ್ತವ್ಯ. ಇದನ್ನು ಬುದ್ಧ ಬಸವರಿಬ್ಬರೂ ನಿರ್ವಂಚನೆಯಿಂದ ನಿರ್ವಹಿಸಿರುವರು. ಬುದ್ಧನು ಪರಮಾರ್ಥ ತತ್ತ್ವದ ಕಡೆಗೆ ಹೋಗದೆ, ಮಾನವರ ದುಃಖವಿಮೋಚನೆಗೆ ಯಥೋಚಿತವಾದ ಉಪಾಯವನ್ನು ಹುಡುಕಿಕೊಟ್ಟನು. ಬಸವನಾದರೋ ಮಾನವ

ರೆಲ್ಲರೂ ಒಂದೇ ಸನಾತನ ತತ್ತ್ವದಿಂದ ಬಂದು, ಕೊನೆಗೆ ಅದರಲ್ಲಿಯೇ ಲೀನವಾಗುವರಾದ್ದರಿಂದ, ಆ ತತ್ತ್ವವನ್ನರಿತು ನಿತ್ಯಸುಖಿಗಳಾಗುವಂತೆ, ಎಲ್ಲರ ದೃಷ್ಟಿಯನ್ನೂ ದಿವ್ಯಸನಾತನ ತತ್ತ್ವದಲ್ಲಿ ನೆಲೆಗೊಳಿಸಿದನು. ಎಲ್ಲರಲ್ಲೂ ಸೂತ್ರದಂತೆ ನೆಲಸಿರುವ ತತ್ತ್ವ ಒಂದೇ, ಆ ತತ್ತ್ವವನ್ನು ತಿಳಿದವರೆಲ್ಲರೂ ಒಂದೇ ಎಂಬ ಉದಾತ್ತ ತತ್ತ್ವವನ್ನು ಬಸವನು ಆಚರಿಸಿ–ಉಪದೇಶಿಸಿ ಎಲ್ಲರನ್ನೂ ಹಾಗೆಯೇ ಆಚರಿಸುವಂತೆ ಪ್ರೇರಿಸಿದನು.

ಹೀಗೆ ಅಣ್ಣನು ದೇಹಸಂಬಂಧವಾದ ಜಾತೀಯತೆಯನ್ನು ಗಣಿಸದೆ, ಲಿಂಗಧಾರಿಗಳೆಲ್ಲರೂ ಒಂದೇ ಸ್ಥಲದವರು ಎಂದು ಭಾವಿಸಿದ್ದನು. "ಸರ್ವಂ ಶಿವಮಯಂ ಜಗತ್" ಎಂಬ ಮಾತು ಅಣ್ಣನ ನಡೆನುಡಿಗಳಲ್ಲಿ ಹೊಂದಿಕೆಯಾಗಿತ್ತು. "ಪರಮಾತ್ಮನು ಪ್ರತಿಯೊಬ್ಬನ ಅಂತರಂಗದಲ್ಲೂ ಸಮಾನವಾಗಿ ನೆಲಸಿದ್ದಾನೆ; ಅವನ ದೃಷ್ಟಿಯಲ್ಲಿ ಎಲ್ಲರೂ ಸಮಾನರು. ಮುಕ್ತಿಮಾರ್ಗವು ಎಲ್ಲರಿಗೂ ಸುಗಮ" ಎಂಬ ಆದರ್ಶವನ್ನು ಆಚರಿಸಿ ತೋರಿಸಿ ವರ್ಣವ್ಯತ್ಯಾಸವನ್ನೂ ಅಸ್ಪೃಶ್ಯತೆಯನ್ನೂ ಅಣ್ಣನು ತೊಡೆದು ಹಾಕಿದನು. ಸಮಾಜದ ಕಟ್ಟುಪಾಡುಗಳನ್ನು ಬದಲಾಯಿಸುವುದು ದುಷ್ಕರವೆಂದು ಅವನು ಭಾವಿಸಲಿಲ್ಲ. ಆದಕ್ಕಾಗಿ ಹೆದರಿಕೊಂಡು ಅವನು ಕೈಕಟ್ಟಿ ಕೂಡಲೂ ಇಲ್ಲ ಅಥವಾ ಅವುಗಳನ್ನು ಅಂಧಶ್ರದ್ಧೆಯಿಂದ ಅನುಸರಿಸುತ್ತ ಅನಾಚಾರವನ್ನು ನಡೆಸುವ ಗೋಜಿಗೂ ಹೋಗಲಿಲ್ಲ. "ದೇವನಲ್ಲಿ ಭಕ್ತಿಯಿಟ್ಟುಕೊಂಡು ಸದಾಚಾರ ಸದ್ವರ್ತನೆಗಳಿಂದ ಬಾಳುವವನಿಗೆ ಜಾತಿ ಬಂಧಕವಾಗದು. ದೇವನು ಯಾವ ಜಾತಿಯವನೂ ಅಲ್ಲ. ಬ್ರಾಹ್ಮಣರಿಗೊಬ್ಬ ದೇವ, ಶೂದ್ರನಿಗೊಬ್ಬ ದೇವ, ಹೀಗೆ ಎಲ್ಲಿಯೂ ಕಂಡುಬಂದಿಲ್ಲ. ಜೀವರೆಲ್ಲರಿಗೂ ದೇವನೊಬ್ಬನೇ"

ಎಂದು ಹೇಳುತ್ತ ಅಣ್ಣನು ಜೀವರ ಭೇದಗಳನ್ನು ಗಾಳಿಯಲ್ಲಿ ತೂರಿದನು. ಜಾತಿಭೇದವಿಲ್ಲದೆ ಭಕ್ತರೆಲ್ಲರಿಗೂ ಪರಮಾತ್ಮನು ಒಂದೇ ವಿಧವಾಗಿ ಪ್ರಸನ್ನನಾಗುವನೆಂಬ ನಂಬಿಕೆಯನ್ನು ಅಣ್ಣನು ಎಲ್ಲರಿಗೂ ಹುಟ್ಟಿಸಿ, ಅವರ ಸಂದೇಹ–ಅಜ್ಞಾನ–ಭ್ರಾಂತಿಗಳನ್ನು ತೊಲಗಿಸಿದನು. ಒಬ್ಬ ದೇವನೇ ಮಾರ್ಗ ದರ್ಶಕನಾಗಿರುವಾಗ, ಭಕ್ತನು ಹಿಂದೆಗೆಯಲೇಕೆ ? ಜ್ಞಾನಿ ಯಾದವನು ಸರ್ವರಿಗೂ ಅವರೊಳಗೇ ಇರುವ ಆ ದೇವನ ಪರಿಚಯು ಮಾಡಿಸಬೇಕಾದ್ದು ಅವನ ಕರ್ತವ್ಯ. ಹೀಗೆ ಅಣ್ಣನು ಲಿಂಗಧಾರಿಗಳೆಲ್ಲರೂ ಒಂದೇ ಜಾತಿಯುವರೆಂಬ ಮಧುರ ಬಾಂಧವ್ಯವನ್ನು ಲೋಕದಲ್ಲಿ ನೆಲೆಗೊಳಿಸಿ, ಅವರೆಲ್ಲರಿಗೂ ಮಹಾದೇವನ ಪರಿಚಯುಮಾಡಿಸಿಕೊಡುವ ಹೊಣೆಯನ್ನು ಆ ಕಾಲದ ಜಂಗಮರಿಗೆ ವಹಿಸಿದನು. ಒಂದೇ ಜಾತಿಯಲ್ಲಿ ಒಳ ಪಂಗಡಗಳು ಬಹುಮುಖವಾಗಿ ಹರಡುತ್ತಿರುವುದನ್ನು ನೋಡಿ, ಅಣ್ಣನು ಅವೆಲ್ಲವನ್ನೂ ಒಮ್ಮುಖವಾಗಿ ಮಹಾದೇವನ ಕಡೆಗೆ ಪ್ರಸರಿಸುವಂತೆ ಮಾಡಿದನು. ಒಂದು ಮತವೆಂದಮೇಲೆ, ಅದನ್ನು ಆಶ್ರಯಿಸಿದವರೆಲ್ಲರಿಗೂ ಪ್ರಗತಿಗೆ ಸಮಾನಾವಕಾಶ ವಿರಲೇಬೇಕು. ಹಾಗಿಲ್ಲದಿದ್ದರೆ ಅದು ಮತವೇ ಎನಿಸಲಾರದು. ನುಡಿದಂತೆ ನಡೆಯುವುದೇ ಸದಾಚಾರವೆನಿಸುವುದು. ಇದೇ ಮತಾಚರಣೆಯ ಜೀವಾಳ. ಹಿಡಿದ ಕಾರ್ಯವನ್ನು ತ್ರಿಕರಣ ಪೂರ್ವಕವಾಗಿ ನಡೆಸುವವರೆಲ್ಲರಿಗೂ ದೇವನು ಸಮಾನವಾಗಿ ಮೆಚ್ಚುವನು. ಒಮ್ಮನವಾದರೆ ದೇವನು ಒಡನೆ ನುಡಿವನು; ಇಮ್ಮನವಾದರೆ ಅವನು ಎಂದೆಂದಿಗೂ ನಮ್ಮೊಡನೆ ನುಡಿಯುನು. ಹೀಗೆ ಅಣ್ಣನು ಬ್ರಾಹ್ಮಣನಾಗಿ ಹುಟ್ಟಿ ಜಾತ್ಯಹಂಕಾರವನ್ನು ಸ್ವತಃ ತ್ಯಜಿಸಿ, ಸಾಮಾನ್ಯಮಾನವನಂತೆ ಬಾಳಿ ಕೀಳುಜಾತಿ

ಯವರನ್ನು ಉತ್ತಮರನ್ನಾಗಿ ಮಾಡಿ, ಅವರಲ್ಲೂ ಸದಾಚಾರ, ವನ್ನು ರೂಢಿಗೆ ತಂದನು. ಮಾನವರೆಲ್ಲರಿಗೂ ಆಚಾರವೇ ಸ್ವರ್ಗ, ಅನಾಚಾರವೇ ನರಕ. ಸದ್ವರ್ತನೆಯಿಂದ ಜಾತಿ ನಿರ್ಣಯವಾಗ ಬೇಕೇ ಹೊರತು ಕೇವಲ ಹುಟ್ಟಿನಿಂದಲ್ಲವೆಂಬ ಸಿದ್ಧಾಂತವನ್ನು ಅಣ್ಣನು ಬೆಳಕಿಗೆ ತಂದನು. ಎಲ್ಲರೂ ಒಬ್ಬ ಪರಮಾತ್ಮನ ಸೇವಕರಾಗಿ ಭಕ್ತಸ್ಥಲದವರೇ ಆಗಿರುವಾಗ, ಎಲ್ಲರಿಗೂ ಸಮಾನ ವಾದ ಹಕ್ಕುಗಳಿರಬೇಕೆಂದು ಅವನು ಪ್ರಕಟಿಸಿದನು.

ಹೀಗೆ ಸಮಾಜದ ಕಟ್ಟುಪಾಡುಗಳೆನಿಸಿದ ವರ್ಣಾಶ್ರಮ ಧರ್ಮಗಳನ್ನು ಅಣ್ಣನು ಸಡಿಲಮಾಡಿದಾಗ, ಸನಾತನವೂ ವೇದೋಕ್ತವೂ ಆದ ವೀರಶೈವಧರ್ಮವನ್ನು ಸಾಂಕರ್ಯದಿಂದ ಹೊಲಸುಮಾಡಿದನೆಂದು ಹಿಂದಿನ ಸಂಪ್ರದಾಯದವರಿಂದ ಪ್ರಬಲವಾದ ಆಕ್ಷೇಪಣೆ ಬಂದಿತು. ಆದರೆ ಆತ್ಮಸಾಕ್ಷಿಗೆ ವಿರೋಧವಾಗಿಯೂ, ಸತ್ಯಕ್ಕೆ ದೂರವಾಗಿಯೂ ಅಣ್ಣನು ನಡೆಯಲಿಲ್ಲ. ಯಾರು ತನ್ನ ಮೇಲೆ ಕೋಪಿಸಿ ಏನು ಮಾಡಿ ಯಾರು ? ಲಿಂಗಪೂಜಕನಿಗೆ ಯಾರಿಂದ ಏನಾದೀತು ಎಂದು ಹೇಳುತ್ತ ಅಣ್ಣನು ಜಾತೀಯತೆಯನ್ನು ನಿರ್ದಾಕ್ಷಿಣ್ಯವಾಗಿ ನಿರಾಕರಿಸತೊಡಗಿದನು. ಸದಾಚಾರನಿರತರೆಲ್ಲರೂ ಈಶ್ವರನ ದೃಷ್ಟಿಯಲ್ಲಿ ಒಂದೇ ಎಂಬ ಮಾರ್ಗವನ್ನು ಅವನು ಸಾಧಿಸದೆ ಬಿಡಲಿಲ್ಲ. ಹೀಗೆ ದೀನರನ್ನೂ, ಅನಾಥರನ್ನೂ, ಪತಿತರನ್ನೂ, ಹೆಂಗಸರನ್ನೂ ಒಂದೇ ವಿಧವಾಗಿ ಉದ್ಧರಿಸಿದ ಅಣ್ಣನ ಮೇಲೆ ಸನಾತನಿಗಳು ಎಷ್ಟು ಉಗ್ರವಾಗಿ ಪ್ರತಿಭಟಿಸಿದರೂ, ಅಣ್ಣನು ಎದೆಗುಂದದೆ ಹಿಡಿದ ಮಾರ್ಗವನ್ನು ಕೊನೆತನಕ ಸಾಧಿಸಿದನು; ಪ್ರಾಣಹೋಗುವುದಾದರೂ ತನ್ನ ಧ್ಯೇಯವನ್ನು ಬಿಡದೆ ಮುಂದುವರಿಸಿದನು. ಧರ್ಮೋದ್ಧಾರಕ್ಕಾಗಿ ಬರುವ ಮರಣವೂ

ಮಾನವನಿಗೆ ಮಹಾನವಮಿಯಂತೆ ಸಂತೋಷದ ಸಮಾರಂಭ ವಾಗಬೇಕೆಂಬುದೇ ಅಣ್ಣನ ಆಶಯ. ಆಯುಷ್ಯ ತೀರಿದಲ್ಲದೆ ಯಾರಿಗೂ ಮರಣವಿಲ್ಲ; ಭಾಗ್ಯ ತೀರಿದಲ್ಲದೆ ದಾರಿದ್ರ್ಯವಿಲ್ಲ. ಲೋಕದ ವಿಗರ್ಹಣೆಗೆ ಮಾನವನು ಏಕೆ ಅಂಜಬೇಕು ? ದೇವನು ಹಣೆಯಲ್ಲಿ ಬರೆದ ಬರಹವನ್ನು ಯಾರೂ ತಪ್ಪಿಸ ಲಾರರು. ನಾಳೆ ಬರುವುದು ಇಂದೇ, ಈಗಲೇ ಬರಲಿ, ಇದಕ್ಕೆ ಯಾರು ಹೆದರುವರು ? "ಬಾರದು ಒಪ್ಪದು, ಒಪ್ಪುದು ತಪ್ಪದು" ಎಂಬ ಎದೆಗಾರಿಕೆಯಿಂದ ಅಣ್ಣನು ಎಲ್ಲರನ್ನೂ ನಿರ್ವಂಚನೆಯಿಂದ ಸಂತೈಸಿದನು.

ಮತದ ಕಟ್ಟಲೆಗಳು ಬಹಳ ಬಿಗಿಯಾಗಿದ್ದುದರಿಂದ, ಅವು ಗಳ ಬಲೆಯಲ್ಲಿ ಸಿಕ್ಕಿಕೊಂಡು ಜಾತಿಭ್ರಷ್ಟರಾಗಲಿಕ್ಕೆ ಜನರು ಹೆದರುತ್ತಿದ್ದಾಗ, ಅಣ್ಣನು ಧೈರ್ಯದಿಂದಲೂ, ವಿಚಾರ ಸ್ವಾತಂತ್ರ್ಯದಿಂದಲೂ, ವಿವೇಕತಾಳ್ಮೆಗಳಿಂದಲೂ ಮುಂದೆ ನುಗ್ಗಿ, ಪತಿತರನ್ನು ಉದ್ಧರಿಸಿ ಸಮಾನವಾದ ಹಕ್ಕುಬಾಧ್ಯತೆಗಳನ್ನು ಕಲ್ಪಿಸಿದ ವಿಚಾರ ನಿಜವಾಗಿಯೂ ಅಭಿನಂದನಾರ್ಹವಾಗಿರುವುದು. ಸಮಾಜದಲ್ಲಿ ವರ್ಣಾಶ್ರಮಗಳ ಕಟ್ಟು ಸ್ಥಿರವಾಗಿ ನೆಲಸಿ ಉಚ್ಚನೀಚಭಾವಗಳು ಬೇರೂರಿ ಹರಡಿದ್ದ ಕಾಲದಲ್ಲಿ ಜಾತ್ಯತೀತ ಸಮತಾವಾದವನ್ನು ಆಚರಿಸಿ ತೋರಿಸಿದ ಅಣ್ಣನ ಆದರ್ಶ ಸರ್ವರಿಗೂ ಆದರಣೀಯವೆಂಬುದರಲ್ಲಿ ಯಾವ ಸಂದೇಹವೂ ಇರದು. ಅಣ್ಣನ ಸಮತಾವಾದ ಕೇವಲ ವೈಷಿಕವಲ್ಲ; ಆರ್ಥಿಕ ವಲ್ಲ; ಆದರೆ ಪಾರಮಾರ್ಥಿಕವಾದದ್ದು; ನೈತಿಕವೂ ಧಾರ್ಮಿಕವೂ ಆದದ್ದು; ಸತ್ಯದ ಅಧಾರದ ಮೇಲೆ ಬೆಳೆದದ್ದು: ತ್ಯಾಗಸೇವೆ ಗಳಿಂದ ಅಲಂಕೃತವಾದದ್ದು. ಇದರಿಂದ ಸಮಾಜದ ಮತ್ತು ದೇಶದ ಕಲ್ಯಾಣವು ನಿಯತ ಮತ್ತು ನಿಶ್ಚಿತ. ಈಶ್ವರನ

ಪೂರ್ಣಾನುಗ್ರಹದಿಂದ ಅಣ್ಣನು ಈ ಮಹತ್ಕಾರ್ಯವನ್ನು ಸಾವಧಾನವಾಗಿ ಸಾಧಿಸಿ, ಮಾನವರೆಲ್ಲರನ್ನೂ ಆಧ್ಯಾತ್ಮಿಕ ವಿಕಾಸದೆಡೆಗೆ ಒಯ್ದು, ಆತ್ಮಾನಂದದ ಕಡೆ ಸರ್ವರ ದೃಷ್ಟಿಯನ್ನೂ ಕೇಂದ್ರೀಕರಿಸುವಂತೆ ಮಾಡಿ, ಎಲ್ಲರ ಹೃದಯದಲ್ಲೂ ಸ್ಥಿರವಾಗಿ ನೆಲಸಿದ್ದಾನೆ.

ಅಣ್ಣನು ಈ ಬಗೆಯ ಸಮತಾವಾದದ ಆಧಾರದ ಮೇಲೆ ವೀರಶೈವಧರ್ಮವನ್ನು ಕೆರಳಿಸಿದಾಗ, ಜೈನರೂ ಬ್ರಾಹ್ಮಣರೂ ವೀರಶೈವರ ಆಚಾರವ್ಯವಹಾರಗಳನ್ನು ಹಾಸ್ಯಮಾಡುತ್ತಿದ್ದರು. ವೀರಶೈವಧರ್ಮದಲ್ಲಿ ಜಾತಿಮತ ಭೇದಗಳ ನಿರಾಕರಣೆ, ಕೀಳು ಕುಲದವರೂ ಸಹ ಇಷ್ಟಲಿಂಗದ ಸಂಬಂಧದಿಂದ ಜಂಗಮರೂ ಪೂಜ್ಯರೂ ಆಗುವ ಹಕ್ಕು ಇದ್ದುದರಿಂದ ಈ ಧರ್ಮವು ಇತರರಿಗೆ ಹಾಸ್ಯಾಸ್ಪದವಾಯಿತು. ಆದರೂ ಸತ್ಯಧರ್ಮಗಳ ಪ್ರೋತ್ಸಾಹದ ಬಗ್ಗೆ ಮನಸ್ಸಾಕ್ಷಿಗೆ ವಿರೋಧವಾಗಿ ಅಣ್ಣನು ನಡೆಯಲಿಲ್ಲ. ಎಷ್ಟೇ ಧರ್ಮಸಂಕಟದಲ್ಲಿ ಸಿಕ್ಕಿದ್ದರೂ ಅವನು ಧೃತಿಗೆಡಲಿಲ್ಲ. ಭಾವಶುದ್ಧಿಯಿಲ್ಲದೆ ಹೊರಗೆ ವೇಷಭೂಷಣಾದಿಗಳಿಂದ ಮೆರೆಯುತ್ತಿದ್ದ ಬ್ರಾಹ್ಮಣರನ್ನು ಅವನು ನಿರ್ದಾಕ್ಷಿಣ್ಯವಾಗಿ ಖಂಡಿಸಿದನು. ಸಕಲ ಜೀವರಿಗೆ ಲೇಸನೇ ಬಯಸುವ ಸಂಗನ ಶರಣರೇ ಕುಲಜರು ಎಂಬುದನ್ನು ಸ್ಥಾಪಿಸುತ್ತ, ಅವನು ಬ್ರಾಹ್ಮಣರು ನಡೆಸುತ್ತಿದ್ದ ಯಜ್ಞಯಾಗಗಳನ್ನು ನಿಂದಿಸುತ್ತ, ವೀರಶೈವ ಧರ್ಮದ ಉತ್ಕೃಷ್ಟತೆಯನ್ನು ಎತ್ತಿಹಿಡಿದನು. ಬಾಯಲ್ಲಿ ಅಹಿಂಸಾವ್ರತವನ್ನು ಬೋಧಿಸುತ್ತ, ಯಜ್ಞದಲ್ಲಿ ಹೋತನನ್ನು ಕೊಲ್ಲುವಾಗ ದಯೆ ಎಲ್ಲಿ ಬಂದೀತು? ಇವರಿಗೂ ಇತರರಿಗೂ ಯಾವ ವ್ಯತ್ಯಾಸವಿದ್ದೀತು? ಹೊಲೆಯನಾಗಲೀ, ಬ್ರಾಹ್ಮಣನಾಗಲೀ ಎಲ್ಲರ ದೇಹವೂ ಶುಕ್ಲಶೋಣಿತಗಳ ಸಂಪರ್ಕದಿಂದಲೇ

ಬೆಳೆದುಬಂದಿರುವುದರಿಂದ, ಎಲ್ಲರ ದೇಹವೂ ಹೊಲೆಯಿಂದಲೇ ಹುಟ್ಟಿಬಂದಿರುವುದಾಗಿ, ಇದರಲ್ಲಿ ಉಚ್ಚನೀಚಭಾವವೆಲ್ಲಿಂದ ಬರಬೇಕು? ಗುರುಕೃಪೆಯಿಂದ ದೀಕ್ಷೆಯಲ್ಲಿ ಪ್ರಕೃತಿ ಸಂಬಂಧ ವಾದ ಜನ್ಮವನ್ನು ತೊರೆದು, ದಿವ್ಯಜನ್ಮವನ್ನು ಪಡೆದವರೆಲ್ಲರೂ ಸಮಾನವಾಗಿ ಪಾವನರಾಗಿರುವಾಗ, ಇವರಲ್ಲಿ ಭೇದವೆಣಿಸು ವುದು ಪಾಪವಲ್ಲವೆ? "ವೇದವನೋದಿದವರ ಮುಂದೆ ಅಳು, ನೀನತ್ತುದಕ್ಕೆ ತಕ್ಕದ್ದನ್ನು ಮಾಡುವನು ದೇವ" ಎಂದು ಹೋತನ ಅಸಹಾಯ ಸ್ಥಿತಿಗೆ ಅಣ್ಣನು ಮನಸಾರೆ ಮರುಗು ವನು. ಆ ಕಾಲಕ್ಕೆ ವೈದಿಕಧರ್ಮದ ಯಜ್ಞಯಾಗಗಳೂ ಪ್ರಾಣಿಹಿಂಸೆಯೂ ಬೌದ್ಧ ಮತ್ತು ಜೈನಧರ್ಮಗಳ ಪ್ರತಿ ಭಟನೆಯ ಪರಿಣಾಮವಾಗಿ ಬಹಳಮಟ್ಟಿಗೆ ಕಡಿಮೆಯಾಗಿದ್ದವು. ಆದರೆ ವೈದಿಕರೂ ಜೈನರೂ ಅಣ್ಣನ ಮೇಲೆ ವರ್ಣಸಾಂಕರ್ಯದ ಕಾರಣದಿಂದ ವಿಶೇಷವಾಗಿ ಕೋಪಗೊಂಡರು. ದೇವನನ್ನು ಶಿವ-ಹರಿ-ಜಿನ ಎಂದು ಯಾವ ಹೆಸರಿನಿಂದಾದರೂ ಕರೆಯಲಿ. ಆದರೆ ಬೇರೆ ಬೇರೆ ಕುಲದವರನ್ನು ಒಂದುಗೂಡಿಸಿ, ಕೀಳಾ ದವರನ್ನು ಮೇಲಕ್ಕೇರಿಸಿದ್ದು ಬೇರೆ ಮತೀಯರಿಗೆ ಒಪ್ಪಿಗೆ ಯಾಗಲಿಲ್ಲ. ವೀರಶೈವಧರ್ಮದಲ್ಲಿ ಮಾದಿಗ, ಹೊಲೆಯ, ಕಮ್ಮಾರ, ಕಂಚುಗಾರ, ಅಕ್ಕಸಾಲೆ, ಕುಂಬಾರ, ಅಗಸ, ಬೇಡ, ನಾಯಿಂದ ಹೀಗೆ ಅನೇಕ ಜಾತಿಯವರು ಸೇರಿಕೊಂಡಿದ್ದಾರೆಂದು ವೈದಿಕರು ಆಕ್ಷೇಪಿಸಿದರು. ಅದಕ್ಕೆ ಅಣ್ಣನು ಕೊಟ್ಟ ಉತ್ತರ ವೀರ್ಯವತ್ತರವಾಗಿದೆ. ಮಾರ್ಕಂಡೇಯ ಮಾದಿಗ, ಅಗಸ್ತ್ಯ ಕಬ್ಬಿಗ, ವ್ಯಾಸ ಬೇಡ, ವಸಿಷ್ಠ ಡೊಂಬ ಎಂದು ಹೇಳಿ "ಅವರೆಲ್ಲರೂ ಶೂದ್ರರಲ್ಲವೆ? ನಮ್ಮನ್ನೇಕೆ ಹೀಗೆ ಅನ್ನುವಿರಿ?" ಎಂದು ಅಣ್ಣನು ಶಾಂತಿಯಿಂದ ಕೇಳಿದನು. ಗುಣಹೀನನಾದ

ಜಾತಿಬ್ರಾಹ್ಮಣನಿಗಿಂತಲೂ ಗುಣವಂತನಾದ ಜಾತಿಮಾದಿಗನೇ ಮೇಲಲ್ಲವೇ? ಎಲ್ಲರೂ ಹುಟ್ಟಿನಲ್ಲಿ ಹೊಲೆಯರೇ ಆಗಿ ಆಚಾರ ದಿಂದ ಉತ್ಕೃಷ್ಟರಾಗುವ ಪ್ರಯುಕ್ತ, ಮಾನವರಲ್ಲಿ ಹೆಚ್ಚು ಕಡಿಮೆಯೆಂಬ ಭೇದವೆಲ್ಲಿ ಬಂದೀತು ? ಬ್ರಾಹ್ಮಣ್ಯವೆಂಬುದು ಒಂದು ಜಾತಿಯಲ್ಲ; ಅದೊಂದು ಬಗೆಯ ಸದ್ವರ್ತನೆ ಎನಿಸಿದೆ. ಸತ್ ಎಂಬ ಪದವು ಪರಬ್ರಹ್ಮಕ್ಕೇ ಅನ್ವಯಿಸುತ್ತದೆ. ಅದನ್ನು ತಿಳಿದವರೆಲ್ಲರೂ ಸದ್ವರ್ತನಶೀಲರಾಗಿ ಬ್ರಾಹ್ಮಣರೆನಿಸುವರು. ಯಾರಲ್ಲಿ ದಯೆ- ಅಹಿಂಸೆ-ಸತ್ಯನಿಷ್ಠೆ- ನ್ಯಾಯಪ್ರಿಯತೆ- ಔದಾರ್ಯ- ಆತ್ಮೀಯತೆ ಮೊದಲಾದ ಆತ್ಮಗುಣಗಳು ನೆಲಸಿರುವುವೋ, ಈ ಗುಣಗಳಿಂದ ಶೋಭಿಸುವ ಸತ್ಸ್ವಭಾವ ಯಾರಲ್ಲಿ ಇರುವುದೋ ಅವರೆಲ್ಲರೂ ಬ್ರಾಹ್ಮಣರೇ. ಹೀಗೆ ಎಲ್ಲರಿಗೂ ಬ್ರಾಹ್ಮಣ ರಾಗಲು ಅರ್ಹತೆಯಿದೆ. ಈ ಉದಾರಾಶಯವನ್ನು ಅಣ್ಣನು ಆಗಿನ ಬ್ರಾಹ್ಮಣರಿಗೆ ತಿಳಿಸಿದನು. ಉಪನಿಷತ್ತಿನಲ್ಲೂ ಇದೇ ವಿಷಯವನ್ನೇ ಹೇಳಿದೆ. ಬ್ರಾಹ್ಮಣರು ಬ್ರಹ್ಮಜ್ಞಾನವನ್ನು ಕ್ಷತ್ರಿಯರಿಂದ ಪಡೆದರೆಂಬ ಬಗ್ಗೆ ಉಪನಿಷತ್ತಿನಲ್ಲಿ ನಿದರ್ಶನ ಗಳಿವೆ. ಹಾಗೆ ಅವರಿಂದ ತಿಳಿದಮೇಲೆ ಅದೆಲ್ಲವೂ ಉಪನಿಷತ್ತಿ ನಲ್ಲಿಯೇ ಇತ್ತೆಂಬುದನ್ನು ಅವರು ಮನಗಂಡರು. ಈ ವಿಷಯ ವನ್ನು ಅಣ್ಣನು ಸಾವಧಾನದಿಂದ ಆ ಕಾಲದ ಬ್ರಾಹ್ಮಣರ ಗಮನಕ್ಕೆ ತಂದು ಅವರನ್ನು ಬ್ರಾಹ್ಮೀಶಕ್ತಿಯ ಕಡೆಗೆ ತಿರುಗಿಸಿ ದನು. ಅಣ್ಣನ ಈ ಅಭಿಪ್ರಾಯವನ್ನು ಅನುಮೋದಿಸುವಂತೆ ಡಾ. ರಾಧಾಕೃಷ್ಣನ್ನರ ಹೇಳಿಕೆಯೂ ಇದೆ: "Brahmin-hood is not an order but a temparament. Any one can have it, though many born in the Brahmin caste may be without it. It is independent of

sex or calling, birth or breeding. Everyone has a right for Brahminhood" ಎಂದು ಅವರು Religion and Society ಎಂಬ ಪುಸ್ತಕದ ೧೩೭ನೇ ಪುಟದಲ್ಲಿ ಹೇಳಿದ್ದಾರೆ.

ಅಣ್ಣನು ಮಾಡಿರುವ ಧರ್ಮಬೋಧೆಯಲ್ಲಿ ದೀನರಕ್ಷಣೆಯೂ ಮತ್ತು ಆಪ್ತಹಿತೈಷಿಯ ಮರುಕವೂ ಕಂಡುಬರುತ್ತವೆ. ಅವನ ಪ್ರಕೃತಿ ಅಷ್ಟು ಕೋಮಲವೂ ಮೃದುವೂ ಆದ್ದರಿಂದ, ಅವನ ಬೋಧೆಯಲ್ಲಿ ಕಾಠಿಣ್ಯವಿಲ್ಲ, ಅಧಿಕಾರದ ಗಾಂಭೀರ್ಯವಿಲ್ಲ. ಕಣ್ಣ ಮುಂದೆ ಕಾಣುವ ಪಾಪರಾಶಿಗಳಿಗೆ ಸಂತಾಪಗೊಂಡು, 'ಅಪ್ಪಾ-ಅಣ್ಣಾ' ಎಂದು ಪ್ರೇಮದ ಮಾತುಗಳಿಂದ ಪಾಪಿಗಳನ್ನು ಕೈಹಿಡಿದು ಮೇಲಕ್ಕೆ ಎತ್ತಿ, ಪಕ್ಕದಲ್ಲಿ ಅಥವಾ ತೊಡೆಯ ಮೇಲೆ ಕುಳ್ಳಿರಿಸಿಕೊಂಡು ಬುದ್ಧಿಗಲಿಸುವ ಕೋಮಲ ಹೃದಯ ಅಣ್ಣನದು. ಅವನು ಹೇಳುವ ರೀತಿ ಅಷ್ಟು ಮಧುರವೂ, ಸುಕುಮಾರವೂ, ಕರುಣಾರ್ದ್ರವೂ ಆಗಿದೆ. ಅದನ್ನು ಹಾಗೆ ಹೇಳಬಾರದೆಂದು ಪ್ರತಿಭಟಿಸಲು ಯಾರಿಗೂ ಸಾಧ್ಯವಿಲ್ಲ. ಅವನ ಮಾತುಗಳಲ್ಲಿ ಅಷ್ಟೊಂದು ಸೌಕುಮಾರ್ಯವಿದೆ, ಪ್ರಸನ್ನತೆಯಿದೆ, ಅನುಭವವಿದೆ, ಕರುಣೆಯಿದೆ, ಪ್ರೇಮವಿದೆ, ಹಿತವಿದೆ. ಕ್ರೂರಸ್ವಭಾವದ ಜನರೂ ಸಹ ಅವುಗಳಿಂದ ಆಕರ್ಷಿತರಾಗಿ ಅವನ ಹತ್ತಿರ ಕುಳಿತು ಅವನ ಮಾತನ್ನು ಉತ್ಸಾಹದಿಂದ ಕೇಳುತ್ತಿದ್ದರು.

ಜೀವಂತನಾಗಿದ್ದಾಗ ಒಂದು ಪುಣ್ಯ ಕೆಲಸವನ್ನೂ ಮಾಡದೆ, ಕೇವಲ ಸ್ವಾರ್ಥತೆಯಿಂದ ಹಣವನ್ನು ಗಳಿಸಿ, ಒಬ್ಬರಿಗೊಂದು ಕಾಸನ್ನೂ ಕೊಡದೆ, ಒಂದು ತುತ್ತು ಅನ್ನವನ್ನೂ ಹಾಕದೆ, ಕುಡಿಯಲು ಇಷ್ಟು ನೀರನ್ನೂ ಕೊಡದೆ ಇರುವವನಿಗೆ ಕೊನೆಯಲ್ಲಿ ದೇವನು ಹೇಗೆ ಸದ್ಗತಿಯನ್ನು ಕೊಟ್ಟಾನು ? ಹೀಗೆ

ಮನುಷ್ಯನ ಸ್ವಾರ್ಥತೆಯನ್ನು ಅಣ್ಣನು ಕೆಲವು ವೇಳೆ ದೂಷಿಸಿದ್ದರೂ, ಆ ಮಾತಿನಲ್ಲಿ ಕ್ರೌರ್ಯವಿಲ್ಲ, ಆಗ್ರಹವಿಲ್ಲ, ದುರ್ಭಾವನೆಯಿಲ್ಲ. ಅವನ ಬೋಧೆಯ ರೀತಿಯೇ ಇಂತಹದು. "ಉಂಬಾಗ ಳಿಲ್ಲೆಂಬ, ಉಡುವಾಗಳಿಲ್ಲೆಂಬ, ಬಂಧುಗಳು ಬಂದಾಗಳಿಲ್ಲೆಂಬ, ಲಿಂಗಕ್ಕೆ ಇಲ್ಲೆಂಬ, ಜಂಗಮಕ್ಕೆ ಇಲ್ಲೆಂಬ, ಬಂದ ಪುರಾತನರಿಗೆ ಇಲ್ಲೆಂಬ, ಸಾವಾಗ ದೇಹವನು ದೇಗುಲಕ್ಕೆ ಒಯ್ಯ ಎಂಬ ಜೀವನಿಗೆ ಹೆಣ ಬಿಟ್ಟಿ ಹೇಳಿತ್ತೇ ದೇವಾ" ಎಂದು ಹೇಳುವ ಅಣ್ಣನ ಮಾತಿನಲ್ಲಿ ನಯವೂ ಇದೆ, ನ್ಯಾಯವೂ ಇದೆ. "ನೀರ ಬೊಬ್ಬುಳಿಕೆಗೆ ಕಬ್ಬುನದ ಕಟ್ಟು ಕೊಟ್ಟು ಸುರಕ್ಷಿತವ ಮಾಡುವ ಭರವ ನೋಡಾ. ಮಹಾದಾನಿ ಕೂಡಲಸಂಗಯ್ಯನ ಪೂಜಿಸಿ ಬದುಕೋ ಕಾಯವ ನಿಶ್ಚಯಿಸದೆ." ಹೀಗೆ ಶರೀರ ನಶ್ವರವಾದರೂ ಯಾವ ಗಳಿಗೆಯಲ್ಲಿ ಪ್ರಾಣಹೋದೀತೋ ಎಂಬುದನ್ನರಿಯದೆ ಜನರು ಪಾಡುಬೀಳುತ್ತಿದ್ದಾರೆ. ಅವರಿಗೆ ವಸ್ತುಸ್ಥಿತಿಯ ಅರಿವಿಲ್ಲ. ಹೀಗೆ ಅಣ್ಣನು ಜನರನ್ನು ವಿಡಂಬನಮಾಡಿದ್ದರೂ ಅದರಲ್ಲಿ ಕ್ರೂರತನವಿಲ್ಲ. "ದೇವನು ಮಹಾದಾನಿ, ಅವನೇ ಎಲ್ಲರಿಗೂ ಕೊಡುವವನು. ಅವನು ಕೊಡದಿದ್ದರೆ, ಮಾನವನು ತಾನಾಗಿ ಏನನ್ನೂ ಪಡೆಯಲಾರನು. ಆದರೆ, ಇದರ ಅರಿವಿಲ್ಲದೆ ವಸ್ತುಸಂಗ್ರಹದಲ್ಲೂ, ಅದರ ರಕ್ಷಣೆಯಲ್ಲೂ ಮುಳುಗಿಹೋಗಿ ಮಾನವನು ಮಹಾದಾನಿಯನ್ನು ಮರೆತನಲ್ಲಾ! ಇರುವಷ್ಟೇ ಅಲ್ಪಕಾಲದಲ್ಲಿ ಪರಲೋಕಸಾಧನೆಗೆ ಸಮುಚಿತವಾದ ಸನ್ಮಾರ್ಗವನ್ನು ಮಾನವನು ಹಿಡಿಯಲಿಲ್ಲವಲ್ಲಾ" ಎಂದು ಅಣ್ಣನು ಕರಗಿ ಕೊರಗಿ ವಾಸ್ತವಾಂಶವನ್ನು ಜನರಿಗೆ ವಿನಯದಿಂದಲೂ ನಿರ್ಮಲಮನೋಭಾವದಿಂದಲೂ ತಿಳಿಸಿರುವನು.

ಮಾನವನ ಪ್ರಗತಿಗೆ ಶತ್ರುಗಳಾದರೋ ಹೊರಗಿನವರಲ್ಲ. ಆದರೆ ಅವರು ಅಂತಶ್ಶತ್ರುಗಳು; ಹೃದಯದಲ್ಲಿಯೇ ಅಡಗಿದ್ದಾರೆ. ಇವುಗಳಿಗೆ ವಶವಾಗದಂತೆಯೂ, ಮನಸ್ಸು ಪ್ರಾಪಂಚಿಕಸುಖಗಳಲ್ಲಿ ಮಗ್ನವಾಗದಂತೆಯೂ ಮಹಾದೇವನಲ್ಲಿಯೇ ಮನಸ್ಸನ್ನು ಸೇರಿಸಿ, ನಿತ್ಯವಾದ ಆತ್ಮಾನಂದವನ್ನು ಅನುಭವಿಸುವಂತೆಯೂ ಮಾನವನನ್ನು ಅಣ್ಣನು ನಮ್ರತೆಯಿಂದ ಕೇಳಿಕೊಳ್ಳುತ್ತಾನೆ. ನಮ್ಮ ಸಿರಿಯು ಶಾಶ್ವತವಲ್ಲದಿದ್ದರೂ ಅದು ಬರುವುದು ಈಶ್ವರಾನುಗ್ರಹದಿಂದ, ಅದು ಹೋಗುವುದೂ ಆತನ ಸಂಕಲ್ಪದಿಂದಲೇ. ಆತನ ಅನುಗ್ರಹವಾದರೋ ಸುಮ್ಮನೆ ಬಾರದು. ಅದಕ್ಕಾಗಿ ಮಾನವರು ನಿರಂತರವೂ ಮಹಾದೇವನನ್ನು ಪೂಜಿಸಿ ಧ್ಯಾನಿಸಿ ಅವನ ಸೇವೆಯಲ್ಲಿ ನಿರತರಾಗಿರಬೇಕು. ಅಹಂಕಾರವೆಂಬ ಮದಗಜವನೇರಿ, ಇಂದ್ರಿಯಗಳೆಂಬ ಕುದುರೆಗಳಿಗೆ ಧೀನರಾಗಿ, ರಾಗದ್ವೇಷಗಳಿಂದ ಕೂಡಿದವರು ಎಂದಿಗೂ ಸದ್ಗತಿಯನ್ನು ಪಡೆಯಲಾರರು. ಸತೀಸುತರನ್ನು ತೊರೆದು ಕಾಡಿಗೆ ಹೋಗಿ ಇಂದ್ರಿಯನಿಗ್ರಹಮಾಡಿ ವೈರಾಗ್ಯದಿಂದ ತಪಸ್ಸನ್ನಾಚರಿಸಬೇಕೆಂದು ಅಣ್ಣನು ಯಾರಿಗೂ ಹೇಳಲಿಲ್ಲ. "ಇಂದ್ರಿಯನಿಗ್ರಹವಮಾಡಿದರೆ ಹೊಂದುವುವು ದೋಷಗಳು. ಮುಂದೆ ಬಂದು ಕಾಡುವುವು ಪಂಚೇಂದ್ರಿಯಗಳು. ಸತಿಪತಿರತಿಸುಖವ ಬಿಟ್ಟರೆ ಸಿರಿಯಾಳ ಚೆಂಗಳೆಯರು ? ಸತಿಪತಿರತಿ ಸುಖಭೋಗೋಪಭೋಗ ವಿಳಾಸಂಗಳ ಬಿಟ್ಟರೆ ಸಿಂಧು ಬಲ್ಲಾಳರು? ನಿಮ್ಮ ಮುಟ್ಟಿ ಪರಧನ ಪರಸತಿಯರಿಗೆಳಸಿದರೆ ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಯ್ಯ." ಹೀಗೆ ಸ್ವಸ್ತ್ರೀಯಲ್ಲಿ ಅನುರಕ್ತರಾಗಿ ಇಂದ್ರಿಯಭೋಗದಲ್ಲಿದ್ದುಕೊಂಡೇ ಜನರು ನಿರ್ಲಿಪ್ತರಾಗಿ ಸತ್ಯಶುದ್ಧಕಾಯಕದಿಂದ ಬಂದದ್ದನ್ನು ಶಿವಾರ್ಪಣ

ಮಾಡುವುದರಿಂದಲೇ ಶಿವಾನುಗ್ರಹವನ್ನು ಪಡೆದು ಶಿವಾನಂದವನ್ನು ಇಲ್ಲಿಯೇ ಈ ದೇಹದಲ್ಲಿಯೇ ಈ ಪ್ರಪಂಚದಲ್ಲಿ ಬಾಳುವಾಗಲೇ ಅನುಭವಿಸಬಲ್ಲರೆಂಬುದು ಅಣ್ಣನ ಆಶಯು. ಇಂದ್ರಿಯನಿಗ್ರಹಮಾಡಿ ಮನಸ್ಸನ್ನು ಶುದ್ಧಗೊಳಿಸಬೇಕೆಂಬುದು ಕಡೆಯಲ್ಲಿ ವ್ಯತ್ಯಸ್ತ ಫಲವನ್ನು ಕೊಡುವುದು. ಇಂದ್ರಿಯದಮನವು ನಮ್ಮ ಭಯದುಃಖಗಳನ್ನು ತಾತ್ಕಾಲಿಕವಾಗಿ ಕಡಿಮೆ ಮಾಡಿದರೂ, ಪರಧನಪರಸ್ತ್ರೀಯರಿಗೆಳಸದಂತೆ ಮನಸ್ಸನ್ನು ತಿದ್ದಿಕೊಂಡು ಸನ್ಮಾರ್ಗದಲ್ಲಿ ನಡೆಯುವವನಿಗೇ ದೇವನೊಲಿಯುವನು. ಪರನಾರಿಯರ ಸಂಗ ಮತ್ತು ಪರಧನದಾಮಿಷ ಇವನ್ನು ತೊರೆದವನೇ ಅಂತರಂಗಶುದ್ಧಿಯಿಂದ ಶಿವನಿಗೆ ಪ್ರಿಯನಾಗಬಲ್ಲನು. ಇಂತಹ ಪ್ರೇಮವನ್ನು ಸಾಧಿಸಲು ಮಾನವನು ಕಾಡಿಗೆ ಹೋಗಿ ತಪಸ್ಸನ್ನಾಚರಿಸಬೇಕಾಗಿಲ್ಲವೆಂಬುದೇ ಅಣ್ಣನ ಆಶಯ. ಒಲ್ಲೆನೆಂಬ ವೈರಾಗ್ಯವಾಗಲೀ, ಬೇಕೆಂಬ ಆಶೆಯಾಗಲಿ, ಶಿವಭಕ್ತನಿಗೆ ಸಲ್ಲವು. ಭಕ್ತನು ಸತ್ಯಶುದ್ಧಕಾಯಕದಿಂದ ದೊರೆತಷ್ಟನ್ನು ನಿರಭಿಮಾನದಿಂದ ಲಿಂಗಾರ್ಪಣಮಾಡುತ್ತ, ಲಿಂಗದೊಡನೆ ಪ್ರಸಾದವನ್ನು ಭೋಗಿಸುತ್ತ ನಿತ್ಯತೃಪ್ತನಾಗಿರಬೇಕೆಂಬುದೇ ಅಣ್ಣನ ಧರ್ಮಬೋಧೆ ಎನಿಸಿರುವುದು. ಇದೇ ಶಿವಪಥವೂ ಆಗಿರುವುದು.

ಉಪಸಂಹಾರ

ಅಣ್ಣನು ಷಟ್ಸ್ಥಲಸಿದ್ಧಾಂತವನ್ನು ಚೆನ್ನಾಗಿ ಅರಿತು ಅದು ಪಂಡಿತಪಾಮರರಿಬ್ಬರಿಗೂ ಸುಗಮವಾದ ಉಪಾಯವೆಂದು ನಿರ್ಧರಿಸಿದನು; ಅದರ ಸಾಧನೆಗೆ ಭಕ್ತಿಯೆಂಬ ಭದ್ರವಾದ ತಳಹದಿಯನ್ನು ಹಾಕಿಕೊಟ್ಟನು. ಕಡೆಗೆ ಇನ್ನೇನೂ ಕೈಲಾಗದಿ

ದ್ದರೂ ಭಕ್ತಿಯಿಂದ ಒಮ್ಮೆ 'ಶಿವ ಶರಣು' ಎನ್ನಿರಿ ಮುಕ್ತಿ ದೊರೆಯುವುದು" ಎಂಬ ಅತಿಸುಲಭೋಪಾಯವನ್ನು ಅವನು ಹೇಳಿಕೊಟ್ಟನು. "ಹೊಲಬುಗೊಂಡರಸಬೇಡ. ಬಲಿತು ತರ ಬೇಡ. ಒಲಿದೊಮ್ಮೆ ಶಿವಶರಣೆನ್ನಿರಯ್ಯ, ಒಂದು ಸೊಲ್ಲಿಂಗೆ ಮುಕ್ತಿಸಿದ್ಧಿ, ಕೂಡಲಸಂಗಮದೇವ ಭಕ್ತಿಲಂಪಟನಾಗಿ." ಅಣ್ಣನು ಭಕ್ತನ ದಾರಿಯನ್ನು ಇಷ್ಟು ಸುಲಭಗೊಳಿಸಿದ್ದಾನೆ. ಆ ಭಕ್ತನಿಗೆ ಯೋಗ್ಯತೆ ಇದ್ದು ಐಕ್ಯಸ್ಥಲದ ಅದ್ವೈತಕ್ಕೆ ಏರ ಬಹುದಾದರೆ ಆಗತ್ಯವಾಗಿ ಆಗಬಹುದು, ಆದರೆ ಒಮ್ಮೆಗೆ ಐಕ್ಯಸ್ಥಿತಿಗೇರುವುದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಹಾಗೆ ಹೋರಾಡಿದ ಅಲ್ಲಮನು ತಾನು ಅಹಂಕಾರಿಯಾದೆನೆಂದೂ, ಸೋಽಹಂ ಭಜನೆಯಿಂದ ತಾನು ಭ್ರಮಿತನಾದೆನೆಂದೂ, ಹೇಳಿ ಕೊಂಡಿದ್ದಾನೆ; ಮತ್ತು ಅಣ್ಣನ ಭಕ್ತಿಪಂಥದಿಂದ ತಿಳಿವನ್ನು ಪಡೆದು, ಅದಕ್ಕೆ ಕೃತಜ್ಞತೆಯನ್ನೂ ಸೂಚಿಸಿದ್ದಾನೆ. "ಅದ್ವೈತವ ನುಡಿದು ಅಹಂಕಾರಿಯಾದೆನಯ್ಯ, ಬ್ರಹ್ಮವ ನುಡಿದು ಭ್ರಮಿತ ನಾದೆನಯ್ಯ. ಶೂನ್ಯವ ನುಡಿದು ಸುಖದುಃಖಕ್ಕೆ ಗುರಿಯಾದೆ ನಯ್ಯ, ಗುಹೇಶ್ವರಾ, ನಿಮ್ಮ ಶರಣಸಂಗನ ಬಸವಣ್ಣನ ಸಾನ್ನಿಧ್ಯ ದಿಂದ ನಾನು ಸದ್ಭಕ್ತನಾದೆನಯ್ಯ" ಎಂದು ಅಲ್ಲಮನು ಬಸವಣ್ಣನ ಸಂಪರ್ಕದಿಂದ ತಾನು ಸದ್ಭಕ್ತನಾದೆನೆಂದು ಹೇಳಿ ಕೊಂಡಿದ್ದಾನೆ. ಅಕ್ಕಮಹಾದೇವಿಯಂತೂ ಬಸವಣ್ಣನು ಜಗದ್ಧಿ ತಾರ್ಥವಾಗಿ ಮರ್ತ್ಯಕ್ಕೆ ಬಂದು ವೀರಶೈವಮಾರ್ಗವನ್ನು ವಿಸ್ತಾರಗೊಳಿಸಿದ್ದಕ್ಕಾಗಿ ಅವನ ಶ್ರೀಪಾದಕ್ಕೆ ಅಹೋರಾತ್ರಿ ಯಲ್ಲೂ ನಮೋ ನಮೋ ಎಂದು ಬದುಕಿದೆನೆಂದು ಹೇಳಿದ್ದಾಳೆ. ಹೀಗೆ ಶರಣರೆಲ್ಲರ ಮೆಚ್ಚುಗೆಗೆ ಪೂರ್ಣಪಾತ್ರನಾದ ಬಸವಣ್ಣನು ಭಕ್ತಿಗಾಕರನಾಗಿ ನಮ್ಮೆಲ್ಲರ ಹೃದಯದಲ್ಲಿ ಅಚ್ಚಳಿಯದಂತೆ ನೆಲಸಿರುವನು.

ಷಟ್ಸ್ಥಲಾಚರಣೆಯನ್ನು ಜೀವನದಲ್ಲಿ ಗುರುತಿಸಲು ಬಹಳ ಸುಲಭಮಾರ್ಗವನ್ನು ಅಣ್ಣನು ತಿಳಿಸಿದ್ದಾನೆ. "ಭಕ್ತನೆಂತೆಂಬೆನಯ್ಯ, ಭವಿಸಂಗ ಬಿಡದನ್ನಕ್ಕ ? ಮಾಹೇಶ್ವರನೆಂತೆಂಬೆನಯ್ಯ, ಪರಸ್ತ್ರೀ ಪರರ ಅರ್ಥದಾಸೆ ಬಿಡದನ್ನಕ್ಕ ? ಪ್ರಸಾದಿ ಎಂತೆಂಬೆನಯ್ಯ, ಆಧಿವ್ಯಾಧಿ ನಷ್ಟವಾಗದನ್ನಕ್ಕ. ಪ್ರಾಣಲಿಂಗಿ ಎಂತೆಂಬೆನಯ್ಯ, ಪ್ರಾಣ ಸುಸ್ಥಿರವಾಗದನ್ನಕ್ಕ ? ಶರಣನೆಂತೆಂಬೆನಯ್ಯ, ಪಂಚೇಂದ್ರಿಯ ನಾಸ್ತಿಯಾಗದನ್ನಕ್ಕ ? ಐಕ್ಯನೆಂತೆಂಬೆನಯ್ಯ, ಜನನಮರಣ ವಿರಹಿತವಾಗದನ್ನಕ್ಕ ? ಇಂತಪ್ಪ ಭಾಷೆ ವ್ರತ ವೇಷಗಳ ನಾನರಿಯೆನಯ್ಯ. ಅಘಟಿತ ಘಟಿತ ವರ್ತಮಾನವ ನಾನರಿಯೆನಯ್ಯ. ನಿಮ್ಮ ಶರಣರ ತೊತ್ತು ಭೃತ್ಯಾಚಾರವ ಮಾಡುವೆ ದೇವಾ." ಹೀಗೆ ಆರು ಸ್ಥಲಗಳ ಆಚರಣೆಯ ಕ್ರಮವನ್ನೂ, ಒಂದೊಂದರ ವೈಶಿಷ್ಟ್ಯವನ್ನೂ ಒಂದೊಂದೇ ಮಾತಿನಲ್ಲಿ ಅಣ್ಣನು ತಿಳಿಯಪಡಿಸಿ ಭೃತ್ಯಾಚಾರವನ್ನು ಪ್ರಶಂಸಿಸಿದ್ದಾನೆ. "ಎನಗಿಂತ ಕಿರಿಯರಿಲ್ಲ, ಶಿವಭಕ್ತರಿಗಿಂತ ಹಿರಿಯರಿಲ್ಲ" ಎಂಬ ಅವನ ಮಾತು ನಮ್ಮ ಹೃದಯದಲ್ಲಿ ನಿರಂತರವೂ ಕಾರ್ಯೋನ್ಮುಖವೂ ವೀರ್ಯವತ್ತರವೂ ಆಗಿ ನಮ್ಮ ರಕ್ತದಲ್ಲಿ ವ್ಯಾಪಿಸಿ ನಮ್ಮನ್ನು ಹುರಿದುಂಬಿಸುತ್ತಿದೆ.

ಸರಳವಾದ ನಡತೆಗೂ ಸದಾಚರಣೆಗೂ ದೇವನೊಲಿಯುವಷ್ಟು ಸುಲಭವಾಗಿ ಜಪತಪೋನುಷ್ಠಾನಗಳಿಗೊಲಿಯುವುದಿಲ್ಲ. ಈ ವಿಷಯವು ಎಲ್ಲರಿಗೂ ತಿಳಿದಿದೆ. ಆದರೆ ಸಾವಿರದಲ್ಲೊಬ್ಬನು ಇದನ್ನು ಆಚರಣೆಗೆ ತರುತ್ತಾನೆ. ಆದ್ದರಿಂದ ಜ್ಞಾನದೊಡನೆ ಕ್ರಿಯಾಚರಣೆಯನ್ನೂ ಸಮಪ್ರಧಾನವಾಗಿ ಎಣಿಸುವ ಆದರ್ಶ ಮಾರ್ಗವನ್ನೂ ಅಣ್ಣನು ಎತ್ತಿಹಿಡಿದನು. ಅರಿಯದೆ ಮಾಡುವ ಕ್ರಿಯೆಯೂ, ಕ್ರಿಯೆಯಿಲ್ಲದ ಬರಿಯ ಅರಿವೂ ವ್ಯರ್ಥ. ಅಣ್ಣನ

ದೈನಂದಿನದ ಬಯಕೆಯನ್ನು ಕೇಳಿ ನಾವು ಆನಂದಮುಗ್ಧರಾಗು
ತ್ತೇವೆ. ತನ್ನನ್ನು ಪಾವನಗೊಳಿಸಿ ಶರಣರ ಪಾದಕ್ಕೆ ತೊಡಿಗೆ
ಯಾಗಿ ಮಾಡುವಂತೆ ಸಂಗಮನಾಥನನ್ನು ಅವನು ಬಹಳ
ವಿನಯದಿಂದ ಬೇಡಿಕೊಳ್ಳುತ್ತಾನೆ. ಅವನ ಮೊರೆ ಹೀಗಿದೆ :
"ಕರಗಿಸಿ ಎನ್ನ ಮನದ ಕಾಳಿಕೆಯ ಕಳೆಯಯ್ಯಾ. ಒರೆಗೆ
ಬಣ್ಣಕ್ಕೆ ತಂದೆನ್ನ ಪುಟವಿಕ್ಕಿ ನೋಡಯ್ಯ. ಕಡಿಹಕ್ಕೆ ಬಡಿಹಕ್ಕೆ
ತಂದೆನ್ನ ಕಡಿಯಾಣೆಯ ಮಾಡಿ ನಿಮ್ಮ ಶರಣರ ಪಾದಕ್ಕೆ ತೊಡಿ
ಗೆಯ ಮಾಡಿ ಸಲಹು ದೇವ." ನಮಗೂ ಇಂತಹ ಬಯಕೆ
ಯುಂಟಾದರೆ ದೇವನು ನಮ್ಮನ್ನು ಎಂದಿಗೂ ಕೈಬಿಡುವನಲ್ಲ.
ನಮ್ಮಲ್ಲಿ ದೃಢವಿಲ್ಲದೆ, ಹಾಗದ ಕೆರಹವ ಹೊರಗೆ ಕಳೆದು,
ದೇವಾಲಯದಲ್ಲಿ ದೇವನ ಮುಂದೆ ನಿಂತು ದೇವಧ್ಯಾನವ
ಮಾಡದೆ, ತನ್ನ ಕೆರಗಳು ಎಲ್ಲಿ ಕಳವಾಗುವುವೋ ಎಂದು
ಯೋಚಿಸತೊಡಗಿದರೆ, ನಮಗೆ ದೇವಾನುಗ್ರಹ ಹೇಗೆ ದೊರೆ
ಕೀತು ? ಮಾನವರ ಚಿತ್ತವೃತ್ತಿ ಇಷ್ಟು ಕೆಳಮಟ್ಟಕ್ಕೆ ಇಳಿದಿದೆ
ಎಂಬುದನ್ನು ಅಣ್ಣನು ಎಷ್ಟು ಸೂಕ್ಷ್ಮವಾಗಿ ಅರಿತಿದ್ದನು ! ದೇವ
ಸ್ಥಾನಕ್ಕೆ ಹೋಗುವ ಅನೇಕರ ಮನಸ್ಸು ದೇವರೆದುರಿಗೆ ನಿಂತು
ಹೊರಗಿನ ವಿಷಯವನ್ನು ಚಿಂತಿಸುತ್ತಿರುವುದು ನಿಜ. ಆದ್ದ
ರಿಂದಲೇ ಅಂತಹವರು ನಿಶ್ಚಿಂತತೆಯಿಂದ ಮನೆಯಲ್ಲಿ ಕುಳಿತು,
ಅಂತರಂಗದೊಳಗೆ ಗುಪ್ತವಾಗಿ ನೆಲಸಿರುವ ಪರಮಾತ್ಮನನ್ನು
ಗುರು ಅನುಗ್ರಹಿಸಿರುವ ಇಷ್ಟಲಿಂಗದೊಳಗೆ ಸತತ ನಿರೀಕ್ಷಣ
ದಿಂದ ಕಂಡು, ಅದನ್ನು ತಮ್ಮೊಳಗಿನ ಜ್ಯೋತಿಯೊಳಗೆ ಬೆರೆಸು
ವುದು ಉತ್ತಮವಾದ ಮಾರ್ಗವೆಂದು ಅಣ್ಣನು ಹೇಳಿದ್ದಾನೆ.
ಉಗ್ರಸಾಧನೆಯಿಂದ ಇದು ಸಾಧ್ಯವಾಗುವುದಲ್ಲದೆ ಬರಿಯ
ಬಾಯಿಮಾತಿನಿಂದ ಆಗಲಾರದು. ಅಂಗಗುಣವಾದ ಭೇದ

ದೃಷ್ಟಿಯನ್ನು ತೊಳೆದು, ಲಿಂಗಗುಣವಾದ ಸಮದೃಷ್ಟಿಯನ್ನು ಬರಮಾಡಿಕೊಂಡರೆ ತಾನೇ ಸ್ವಯಂಲಿಂಗವಾಗುವನು. ಈ ಸಮದೃಷ್ಟಿಯಿಂದ, ಭಕ್ತಿ, ವೈರಾಗ್ಯ, ಶಾಂತಿ, ಕ್ಷಮೆ, ಧರ್ಮ, ಸದಾಚಾರ, ವಿನಯ, ಮೃದುವಚನಗಳು ಸಹಜವಾಗಿ ದೊರಕುತ್ತವೆ. ಇವಕ್ಕಿಂತಲೂ ಬೇರೆ ಪರಮೈಶ್ವರ್ಯವಿನ್ನೆಲ್ಲಿದ್ದೀತು ? ಇದರಿಂದಲೇ ಮಾನವನ ಉದಾರವರ್ತನೆ ಮತ್ತು ಉದಾತ್ತಭಾವನೆಗಳು ನಿರರ್ಗಳವಾಗಿ ಬೆಳೆಯಬಲ್ಲವು.

ಅಣ್ಣನ ಜೀವನದಿಂದ ಪ್ರತಿಯೊಬ್ಬನೂ ಮುಖ್ಯವಾಗಿ ಕಲಿಯುವ ಮಹಾಪಾಠ ಒಂದಿದೆ. "ಯಾರೊಬ್ಬರೂ ತಮ್ಮ ಉದ್ಧಾರಕಾರ್ಯದಲ್ಲಿ ನಿರಾಶರಾಗಬೇಕಾಗಿಲ್ಲ. ಎಲ್ಲರಿಗೂ ಹಿರಿಯ ಆಶೆ ಪರಮಾತ್ಮನೇ ಆಗಿರುವುದರಿಂದ, ಅವನ ಅನುಭವ ಪಡೆದವರನ್ನು ಮಾನವನು ಸ್ವಾಗತಿಸಿ ಗೌರವಿಸುವುದರಿಂದ ತನ್ನ ಉದ್ಧಾರವನ್ನು ಸಾಧಿಸಬಹುದು. ಆದ್ದರಿಂದ ಆತ್ಮೋದ್ಧಾರ ಎಷ್ಟೇ ಗಹನವಾದರೂ, ಅದು ಯಾರಿಗೂ ಮೀರಿದ್ದಲ್ಲ. ಅನುಭವಿಗಳ ಸಂಗದಿಂದ ಅದು ಸುಗಮವಾಗುತ್ತದೆ." ಈ ಬಗೆಯ ಮಹತ್ತರವಾದ ಪಾಠವನ್ನು ಅಣ್ಣನು ತನ್ನ ದೃಷ್ಟಾಂತದಿಂದ ಎಲ್ಲರಿಗೂ ತಿಳಿಯಪಡಿಸಿದ್ದಾನೆ.

ಪರಮಾತ್ಮನಾದರೋ ಯಾರನ್ನೂ ಬೇಡನು, ಬೆಸಗೊಳ್ಳನು; ಎರೆದರೆ ನೆನೆಯನು, ಮರೆದರೆ ಬಾಡನು. ಆದುದರಿಂದ ಅವನು ಒಲಿಯುವುದು ಅನುಭವಿಗಳ ಮೂಲಕವೇ. ತಳಕ್ಕೆ ನೀರೆರೆದರೆ ಮರವು ಮೇಲೆ ಪಲ್ಲವಿಸುವುದು. ಹೀಗೆ ಭಕ್ತರನ್ನೂ ಶರಣರನ್ನೂ ಸಂತೋಷಗೊಳಿಸುವುದರಿಂದಲೇ ಪರಮಾತ್ಮನು ಪ್ರಸನ್ನನಾಗುವನು. ಲಿಂಗಪೂಜೆಯ ಫಲವಾದರೋ ಶರಣರು ಮನೆಗೆ ಬರಲೆಂಬ ಸದುದ್ದೇಶವೇ ಆಗಿದೆ. ಶರಣರು ಮನದೆರೆದು ಮಾತ

ನಾಡಿದರೆ ಅವರ ಹೃದಯದಲ್ಲಿ ಶೋಭಿಸುತ್ತಿರುವ ಲಿಂಗದೇವ ನನ್ನು ಅವರ ಆ ಮಾತಿನಲ್ಲಿಯೇ ನಾವು ಕಾಣಬಹುದು. ಶಿವನಿಗಿಂತಲೂ ಶರಣರು ಅಧಿಕರು. ಶಿವನು ಅವರ ಮನದ ಕೊನೆಯ ಮೊನೆಯಮೇಲೆ ಅಡಗಿರುವನು. ಶಿವನು ತನಗಾದ ಅಪಚಾರವನ್ನು ಸಹಿಸಿದರೂ, ತನ್ನ ಭಕ್ತರಿಗೂ ಶರಣರಿಗೂ ಆದ ಅಪಮಾನವನ್ನು ಎಂದಿಗೂ ಕ್ಷಮಿಸನು. ಭಕ್ತವತ್ಸಲನಾದ ದೇವನು ಯಾವಾಗಲೂ ತನ್ನ ಭಕ್ತರನ್ನೇ ಮುಂದುವರಿಸುವನು. ಭಕ್ತರು ಪುಷ್ಪದಂತೆ ಮೃದುವಾದುದರಿಂದ ನಮಗೆ ಶಿವನಿ ಗಿಂತಲೂ ಸುಲಭರು. ಅವರೊಡನೆ ಮರೆತು ಸರಸವಾಡಿದರೆ ಸುಣ್ಣದಕಲ್ಲನ್ನು ಮಡಿಲಲ್ಲಿ ಕಟ್ಟಿಕೊಂಡು ಮಡುವ ಬಿದ್ದಂತೆ, ನಮಗೆ ಸರ್ವನಾಶ ಸಂಭವಿಸೀತು. ಆದ್ದರಿಂದಲೇ ಅವರು ಮನೆಗೆ ಬಂದರೆ ಅಣ್ಣನು ಆನಂದದಿಂದ ನಲಿದಾಡುತ್ತಿದ್ದನು; ಉಬ್ಬಿ ಕೊಬ್ಬಿ ಹರುಷದಿಂದ ಓಲಾಡುತ್ತಿದ್ದನು; ಹೀಗೆ ಭಕ್ತರ–ಶರಣರ ಸಮಾಗಮದಿಂದ ಅವನಿಗೆ ಆಗುತ್ತಿದ್ದ ಆನಂದ ಅಪಾರ ಮತ್ತು ಅನಂತ. ಸಾಸಿವೆಯ ಮೇಲೆ ಸಾಗರ ಹರಿದಂತಾಗು ತ್ತಿತ್ತು ಅಣ್ಣನಿಗೆ ಶರಣರ ಸಮಾಗಮದ ಸುಖ. ಹೊಲಬು ಗೆಟ್ಟ ಶಿಶು ತನ್ನ ತಾಯನರಸುವಂತೆ, ಬಳಿದಪ್ಪಿದ ಪಶು ತನ್ನ ಹಿಂಡನರಸುವಂತೆ, ಅವನು ಯಾವಾಗಲೂ ಭಕ್ತರ ಮತ್ತು ಶರಣರ ಬರವನ್ನು ಬಯಸುತ್ತಿದ್ದನು. ದಿನಕರನುದಯಕ್ಕೆ ಕಮಲ ವಿಕಸಿತವಾದಂತೆ ಅವನಿಗೆ ಶರಣರ ಬರವು ಹೆಚ್ಚಿನ ಸಂತೋಷ ವನ್ನು ನೀಡುತ್ತಿತ್ತು. ಭ್ರಮರಕ್ಕೆ ಪರಿಮಳದ ಬಂಡುಂಬ ಚಿಂತೆ ಯಾದರೆ, ಅಣ್ಣನಿಗೆ ಕೂಡಲಸಂಗಮದೇವನ ಭಕ್ತರ ಮತ್ತು ಶರಣರ ಚಿಂತೆ ನಿರಂತರವೂ ಇರುತ್ತಿತ್ತು. ಜಗತ್ತಿನಲ್ಲಿ ಎಲ್ಲರನ್ನೂ ಶಿವನೆಂದೇ ಕಾಣುತ್ತಿದ್ದುದರಿಂದ ಯಾರಮೇಲೆಯೂ ಅವನು

ಕೋಪಿಸುತ್ತಿರಲಿಲ್ಲ. ಒಮ್ಮೆ ಕೋಪಮಾಡಿದರೆ ಸರ್ವನಾಶವಾಗುವುದೆಂದು ಅಣ್ಣನು ದೃಢವಾಗಿ ನಂಬಿದ್ದನು. ಕೋಪಿ ಮಜ್ಜನಕ್ಕೆರೆದರೆ ಅದು ಮಜ್ಜನವಾಗದೆ ರಕ್ತದ ಧಾರೆ ಎನಿಸುವುದು. ಪಾಪಿ ಹೂವನೇರಿಸಲು ಮಸೆದಾಯುಧದ ಗಾಯವಾಗುವುದು, ಕೋಪದಿಂದ ಮಾಡುವ ಪೂಜೆ ಪರಮಾತ್ಮನಿಗೆ ಸಲ್ಲದು. ಕೋಪತಾಪಗಳಿಂದ ದೂರನಾಗಿ ಶುದ್ಧಮನದಿಂದ ಜಗತ್ತನ್ನು ನೋಡುವವನು ನಿತ್ಯಾನಂದವನ್ನು ಪಡೆಯುವನು. ಇದೇ ಅವನಿಗೆ ಪರಮೈಶ್ವರ್ಯ. ಇಂತಹ ಪರಮಾನಂದವನ್ನು ಮಾನವನಿಗೆ ದೊರಕಿಸಲು ಅಣ್ಣನು ನಿರಂತರವೂ ಶ್ರಮಿಸಿ ಕೃತಕೃತ್ಯನಾದನು. ಆದ್ದರಿಂದಲೇ ಅವನು ತೋರಿಸಿದ ವಿಶ್ವಪ್ರೇಮದ ಹಾದಿಯಲ್ಲಿ ನಾವು ನಿರಂತರವೂ ನೆಮ್ಮದಿಯಿಂದ ಬಾಳಬಹುದಾಗಿದೆ.

ಪ್ರಪಂಚದಲ್ಲಿ ಹುಟ್ಟಿದ ಮೇಲೆ ಸಂಸಾರದಲ್ಲಿ ಕಷ್ಟನಷ್ಟಗಳು ಇದ್ದೇ ಇರುತ್ತವೆ. ಇವನ್ನು ಮಹತ್ತರವೆಂದು ಭಾವಿಸದೆ, ಇವಕ್ಕೆ ಹೆದರಿ ನಿರುತ್ಸಾಹದಿಂದ ಹೆಜ್ಜೆಹೆಜ್ಜೆಗೂ ಸಾಯದೆ, ಇವನ್ನು ಧೈರ್ಯದಿಂದ ಹಿಮ್ಮೆಟ್ಟಿಸುವ ಎದೆಗಾರಿಕೆಯನ್ನು ಮಾನವನು ಅಣ್ಣನ ಆದರ್ಶದ ಸಾಧನೆಯಿಂದ ಪಡೆಯಬಹುದಾಗಿದೆ. ಕಷ್ಟದುಃಖಗಳ ಮಧ್ಯೆ ನಿಂತು ಅಳುವುದು ಹೇಡಿತನ. ಇವನ್ನು ಸಂತೋಷದಿಂದ ನಗುನಗುತ ಸ್ವಾಗತಿಸುವುದು ಧೀರತನ. ಸಂಸಾರಸಾಗರದಲ್ಲಿ ಈಜುವುದು, ಇದ್ದು ಜಯಿಸುವುದು ಮಾನವನ ವಿವೇಕವನ್ನು ವ್ಯಕ್ತಪಡಿಸುತ್ತದೆ. ಈ ಸಂಸಾರದಲ್ಲಿ ಜ್ಞಾನಿಗಳೊಡನೆ, ಶರಣರೊಡನೆ, ಭಕ್ತರೊಡನೆ ಬೆರೆತು, ತನ್ನ ಕರ್ತವ್ಯಗಳನ್ನು ಶ್ರದ್ಧೆಯಿಂದ ಭಗವದಾರಾಧನೆಯೆಂದು ಭಾವಿಸಿ ಮಾಡುತ್ತಿರುವುದೇ ಮಾನವನ ನಿತ್ಯಾರ್ಚನೆ ಎನಿಸುವುದು.

ಸಂಸಾರವನ್ನು ಬಿಡಬೇಕೆಂದು ಯಾವ ಧರ್ಮೋದ್ಧಾರಕನೂ ಯಾರಿಗೂ ಹೇಳಿಲ್ಲ. ಸಂಸಾರದಲ್ಲಿ ಇದ್ದು ಅದರ ಅಭಿಮಾನ ವನ್ನು ಬಿಟ್ಟು ಅದನ್ನು ನಡೆಸುವಂತೆ ಎಲ್ಲರೂ ಹೇಳಿದ್ದಾರೆ. ಹೆಂಡತಿಮಕ್ಕಳೊಡನೆ ಬಾಳಂತ್ತ, ಅವರ ಮೇಲಿನ ವ್ಯಾಮೋಹ ವನ್ನು ತೊರೆದು, ಅವರೊಳಗೆ ಈಶ್ವರನು ಗೋಪ್ಯವಾಗಿರು ವುದನ್ನು ಗಮನಿಸಿ, ಆ ಈಶ್ವರನೇ ಎಲ್ಲಾ ರೂಪಗಳಿಂದಲೂ ಎಲ್ಲಾ ವ್ಯವಹಾರಗಳನ್ನೂ ಮಾಡಿಸುತ್ತಿರುವನೆಂದು ತಿಳಿದು, ಎಲ್ಲರನ್ನು ಶುದ್ಧಹೃದಯದಿಂದಲೂ ನಿರ್ಮಲಭಾವದಿಂದಲೂ ಪ್ರೀತಿಸಿ ಗೌರವಿಸುವುದಷ್ಟನ್ನು ಮಾತ್ರವೇ ಮಾನವನು ಕಲಿಯ ಬೇಕೆಂದು ಧರ್ಮೋದ್ಧಾರಕರು ನಮಗೆ ಎಚ್ಚರಿಸಿದ್ದಾರೆ. ಮನವಚನಕಾಯಂಗಳಿಂದಲೂ ಸರ್ವಜೀವಿಗಳಿಗೆ ಲೇಸನೇ ಬಯಸುವುದು ಮಾನವನ ಹಿರಿಯ ಆದರ್ಶವೆನಿಸಿದೆ. ಇಂದ್ರಿಯ ನಿಗ್ರಹವಾಗಲೀ, ವೈರಾಗ್ಯವಾಗಲೀ ಅವನ ಆದರ್ಶವಲ್ಲ. ಪರಮಾತ್ಮನ ಸೇವೆಗೆ ಆ ಇಂದ್ರಿಯಗಳ ಉಪಯೋಗ ಅತ್ಯಾವಶ್ಯಕ ವಾದುದರಿಂದ ಅವನ್ನು ನಿಗ್ರಹಿಸಿ ತಾನು ಮನೆಯ ಒಂದು ಕೋಣೆಯಲ್ಲಿ ಕುಳಿತರೆ ಫಲವಿಲ್ಲ. ಅವುಗಳನ್ನು ವ್ಯವಸ್ಥಿತ ಮಾರ್ಗದಲ್ಲಿ ಉಪಯೋಗಿಸುವ ಜಾಣ್ಮೆ ಮಾನವನಿಗೆ ಈಗ ಬೇಕಾಗಿದೆ. ಕಾಮಿನೀಕಾಂಚನಗಳನ್ನು ಪರಮಾತ್ಮನ ಅರ್ಚನೆಗೂ, ಗುರುಜಂಗಮರ ಸೇವೆಗೂ ಉಪಯೋಗಿಸುತ್ತ ಬಂದರೆ, ಇಂದ್ರಿಯಗಳು ಮಾನವನಿಗೆ ಪ್ರತಿಬಂಧಕವಾಗಲಾರವು. ಆದ್ದರಿಂದ ವಿಹಿತಮಾರ್ಗದಲ್ಲಿ ಅವನ್ನು ಪಳಗಿಸಿಕೊಳ್ಳುವುದು ಆವಶ್ಯಕ. ಅದರಂತೆ ವೈರಾಗ್ಯದಿಂದ ದೇಹವನ್ನು ಒಣಗಿಸು ವುದೂ ಯುಕ್ತವಲ್ಲ. ಒಲ್ಲೆನೆಂಬ ವೈರಾಗ್ಯವೂ, ಬೇಕೆಂಬ ದೇಹವಾಸನೆಯೂ ಭಕ್ತನಿಗೆ ಹೊಂದಿಕೆಯಾಗುವುದಿಲ್ಲ. ತನ್ನ

ದೇಹದ ದುಡಿಮೆಯಿಂದ ದೊರೆತ ಪದಾರ್ಥವನ್ನು ದೇವನಿಗರ್ಪಿಸಿ ಭೋಗಿಸುವುದೇ ಮಾನವನಿಗೆ ಸುಖದ ತೌರುಮನೆ. ದೇವನನ್ನೊಲಿಸಲು ಬಂದ ಈ ಪ್ರಸಾದಕಾಯವನ್ನು ಕೆಡಿಸಬಾರದು. ಹಾಗೆಯೇ ಇದನ್ನು ಹೆಚ್ಚು ಆರೈಕೆಯಿಂದ ಬೆಳಸಲೂಬಾರದು ಮತ್ತು ಉದಾಸೀನತೆಯಿಂದ ಒಣಗಿಸಲೂಬಾರದು. ಇದನ್ನು ದೇವನ ಸೇವೆಗಾಗಿ ಮೀಸಲಾಗಿಟ್ಟು ಯಥೋಚಿತವಾಗಿ ರಕ್ಷಣೆ ಮಾಡಲೇಬೇಕಾಗಿದೆ. ಬೆಳಗಾದರೆ ಮಹಾದೇವನ ಸೇವೆ, ಭಕ್ತರನ್ನು ಸಂತೋಷಪಡಿಸುವಿಕೆ, ಇದಕ್ಕಾಗಿ ಸತ್ಯಶುದ್ಧವಾದ ಕಾಯಕ, ಮಹಾದೇವನ ಯಥಾರ್ಥವಾದ ಅನುಭವವನ್ನು ತನ್ನಲ್ಲಿ ಅಳವಡಿಸಿಕೊಳ್ಳುವಿಕೆ, ಇವುಗಳಲ್ಲಿಯೇ ಯಾವನು ಹೊತ್ತು ಕಳೆಯುವನೋ ಅವನು ಮಹಾದೇವನಿಗೆ ಸಮ್ಮತನಾಗಿ ಅಮೃತಪುತ್ರನೆನಿಸುವನು. ಇಂತಹ ಸದ್ಭಕ್ತನ ದರ್ಶನದಿಂದ ಎಂತಹ ಪಾಪಿಯೂ ಶುದ್ಧನಾಗುವನು; ಪತಿತನೂ ಉದ್ಧಾರನಾಗುವನು. ಹೀಗೆ ಅಣ್ಣನು ತನ್ನ ದಿವ್ಯ ಆದರ್ಶದಿಂದ ಮಾನವರೆಲ್ಲರನ್ನೂ ಅಂತರ್ಮುಖಿಗಳನ್ನಾಗಿ ಮಾಡಿ, ಒಳಗಿನ ದಿವ್ಯಪ್ರಕಾಶದ ಪರಿಚಯಮಾಡಿಸಿ, ಅವರ ಸರ್ವತೋಮುಖವಾದ ಪ್ರಗತಿಯನ್ನು ಸಾಧಿಸಿ, ಎಲ್ಲರ ನಿರ್ಮಲಹೃದಯದಲ್ಲೂ ಚಿಜ್ಜ್ಯೋತಿಯಾಗಿ ಪ್ರಕಾಶಿಸುತ್ತಿರುವನು. ಭಕ್ತನಾಗಿ, ಧರ್ಮಬೋಧಕನಾಗಿ, ಸಮಾಜಸುಧಾರಕನಾಗಿ, ಮತಪ್ರಚಾರಕನಾಗಿ ಅವನು ಸಲ್ಲಿಸಿರುವ ಸೇವೆ ವ್ಯಕ್ತಿಯ, ಸಮಾಜದ ಹಾಗೂ ರಾಷ್ಟ್ರದ ಸುಧಾರಣೆಗೆ ಮೇಲ್ಪಂಕ್ತಿಯಾಗಿರುವುದು. ಅವನು ವೀರಶೈವರಿಗೆ ಮಾತ್ರವಲ್ಲದೆ ಸಮಸ್ತ ಮಾನವರಿಗೂ ಆದರ್ಶಬೋಧಕನಾಗಿರುವನು. ಕರ್ಣಾಟಕಕ್ಕೆ ಮಾತ್ರವಲ್ಲದೆ, ಭರತಖಂಡಕ್ಕೂ ಮತ್ತು ಇಡೀ ಪ್ರಪಂಚಕ್ಕೂ ಅವನು ಮಾರ್ಗದರ್ಶಕನಾದ ಮಹಾಪುರುಷನಾಗಿರುವನು.

ಅಣ್ಣನ ಈ ಉದಾತ್ತ ಜೀವನವನ್ನು ಚಿತ್ರಿಸುವಂತೆ ಡಾ. ರಾಧಾಕೃಷ್ಣನ್‌ರವರು ಹೀಗೆ ಹೇಳಿರುವುದು ಬಹಳ ಸಮಂಜಸವೂ, ಸಮಯೋಚಿತವೂ ಆಗಿದೆ :

"The ideal of the Hindu Dharma is to make all men Brahmins, all people prophets." (The Heart of Hindustan, P. 22) "It is essential that Upanayana should be performed for all Hindus, for all are capable of the highest goal of spiritual insight." (Religion and Society. p. 13).

ಹಿಂದೂಧರ್ಮದ ಈ ಉದಾತ್ತ ಧ್ಯೇಯವನ್ನು ಅಣ್ಣನು ಸ್ವಂತ ಆಚರಣೆಯಿಂದ ಬೆಳಕಿಗೆ ತಂದನು : ಅವನ ದೃಷ್ಟಿಯಲ್ಲಿ ಪ್ರತಿಯೊಬ್ಬ ಮಾನವನೂ ಸತ್ಯಶುದ್ಧ ಕಾಯಕದಿಂದ ಸಚ್ಚರಿತನಾಗಿ ಬಾಳುತ್ತ, ಸತ್ಯದ ಸಾಕ್ಷಾತ್ಕಾರದಿಂದ ತನ್ನ ಜನ್ಮವನ್ನು ಸಾರ್ಥಕಪಡಿಸಿಕೊಳ್ಳಬಹುದು. ಸತ್ಯದ ಅನುಭವಕ್ಕೆ ಎಲ್ಲರಿಗೂ ಸಮಾನವಾದ ಅಧಿಕಾರವಿದೆ. ಎಲ್ಲರೂ ಬ್ರಹ್ಮಜ್ಞಾನದಿಂದ ಬ್ರಾಹ್ಮಣರೆನಿಸಿ ಲೋಕದ ಕಲ್ಯಾಣವನ್ನು ಸಾಧಿಸಬಹುದು. ಹಾಗೆ ಸಾಧಿಸದೆ ಕೇವಲ ಸ್ವಾರ್ಥದಲ್ಲಿಯೇ ನಿರತನಾದವನು ಭೂಮಿಗೆ ಹೊರೆಯಾಗುವನು. ಅವನಿಗೆ ಇಹವೂ ಇಲ್ಲ, ಪರವೂ ಇಲ್ಲ. ಸತ್ಯವನ್ನು ತಿಳಿದು ಸಾಧನೆಯಿಂದ ಅನುಭವಿಸಲಿಕ್ಕೆ ಎಲ್ಲರಿಗೂ ಒಂದೇ ಬಗೆಯ ಅವಕಾಶವಿದೆ. ಇದಕ್ಕೆ ಪ್ರಪಂಚವೇ ವಿಶಾಲವಾದ ಕಾರ್ಯಕ್ಷೇತ್ರ ; ಇದೇ ಉತ್ತಮವಾದ ಶಿಕ್ಷಕ. ನಮ್ಮ ಎಲ್ಲಾ ಲೋಪದೋಷಗಳನ್ನೂ ತಿದ್ದಿ ಬಳಕೆಯ ನಾಣ್ಯದಂತೆ ನಮ್ಮನ್ನು ಚೆನ್ನಾಗಿ ಪಳಗಿಸುವ ಟಂಕಸಾಲೆಯೇ ಈ ಪ್ರಪಂಚವಾಗಿರುವುದರಿಂದ, ಇಲ್ಲಿ ನಮಗೆ ದೊರಕುವ ಪ್ರತಿ

ಯೊಂದು ಘಟನೆಯೂ ಒಂದೊಂದು ಅನುಭವವನ್ನು ದೊರಕಿ ಸುತ್ತಾ ಜೀವನದ ಪರಿಪೂರ್ಣತೆಯನ್ನು ಸಾಧಿಸಲಿರುವುದು. ಆದ್ದರಿಂದ ಯಾರೊಬ್ಬರೂ ಲೋಕದ ಸಂಘಟನೆಗಳಿಗೆ ಹೆದರಿ, ಸಾಕಷ್ಟು ಅನುಭವವನ್ನು ಪಡೆಯದೆ, ಮಾನಸಿಕ ಬೌದ್ಧಿಕ ಆಧ್ಯಾತ್ಮ ವಿಕಾಸವನ್ನು ಹೊಂದದೆ, ತಮ್ಮ ಜೀವನವನ್ನು ಕಗ್ಗತ್ತಲೆಯಲ್ಲಿ ಕೊನೆಗಾಣಿಸಬೇಕಾಗಿಲ್ಲ. ತಿಳಿದವನು ಸಹನೆ ಯಿಂದ ನೆರೆಹೊರೆಯವರ ಲೋಪದೋಷಗಳನ್ನು ಗಮನಿಸಿ, ಸಾವಧಾನದಿಂದ ಅವನ್ನು ಅವರ ಗಮನಕ್ಕೆ ತಂದು ಅವರನ್ನು ತಿದ್ದುವುದರಿಂದ ತಾನೂ ಉದ್ಧಾರನಾಗುವನು. ಇದರಿಂದ ತನ್ನಂತೆ ಇತರರೂ ಸತ್ಯಾನ್ವೇಷಿಗಳೇ ಇರುವರೆಂಬ ಉದಾರಭಾವ ಪ್ರತಿಯೊಬ್ಬರ ಆಚರಣೆಯಲ್ಲೂ ಬಂದು, ಲೋಕದಲ್ಲಿ ವ್ಯಾಪಿಸಿ ರುವ ಅಜ್ಞಾನ ಅಹಂಕಾರ ಸಂಶಯ ಭ್ರಾಂತಿಗಳು ತೊಲಗಲಿಕ್ಕೆ ಅವಕಾಶವಾಗುತ್ತದೆ. ಈ ಕಾರ್ಯವನ್ನು ಬಸವಣ್ಣನು ಶಕ್ತಿ ಮೀರಿ ನಡೆಸಿ ಲೋಕಮಾನ್ಯನೆನಿಸಿರುವನು. ಅವನು ಮೊದಲಿ ನಿಂದ ಕೊನೆಯವರೆಗೂ ಭಕ್ತಸ್ಥಿತಿಯಲ್ಲಿಯೇ ಬಾಳುತ್ತ ಗುರು ಜಂಗಮರಿಗೆ ಅನನ್ಯಭಕ್ತಿಯಿಂದ ಸೇವೆಮಾಡುತ್ತ ಐಕ್ಯ ಸ್ಥಿತಿಯ ದಿವ್ಯಾನಂದವನ್ನು ಪಡೆದು, ಪರಮಾತ್ಮನಲ್ಲಿ ಸಮರಸ ವಾಗಿ ಬೆರೆತು ಅಮೃತನಾಗಿರುವುದರಿಂದ, ಇಂತಹ ಅಮೃತ ಸ್ಥಿತಿ ಸಾಮಾನ್ಯಮಾನವರೆಲ್ಲರಿಗೂ ಉತ್ತಮಸಾಧನೆಯಿಂದ ದೊರಕಲಿರುವುದೆಂಬುದಕ್ಕೆ ಬಸವಣ್ಣನ ಜೀವನ ಉತ್ತಮ ನಿದರ್ಶನವಾಗಿರುವುದು.

ಕೆ.ಸಂ. ೨೮೩೨೫—ಎಂ.ಯು.ಪಿ.ಎಂ.—೧೦,೦೦೦ ಪ್ರತಿಗಳು—೧೭–೭–೮೭

ಕೆಲವು ಸಾಹಿತ್ಯ ಕೃತಿಗಳು

೧. ಕುಮಾರವ್ಯಾಸ—ಎಸ್. ವಿ. ರಂಗಣ್ಣ
೨. ಹಂಪೆಯ ಹರಿಹರ—ಡಿ. ಎಲ್. ನರಸಿಂಹಾಚಾರ್
೩. ಕನ್ನಡ ಸಾಹಿತ್ಯ—ಕೆ. ವೆಂಕಟರಾಮಪ್ಪ
೪. ಪಂಪ—ತೀ. ನಂ. ಶ್ರೀಕಂಠಯ್ಯ
೫. ಕರ್ಣಾಟಕ ಕಾದಂಬರಿ—ವಿ. ಸೀತಾರಾಮಯ್ಯ
೬. ಕಾಳಿದಾಸನ ಕಾವ್ಯಗಳು—ಎಸ್. ರಾಮಚಂದ್ರರಾವ್
೭. ಭಾಸ—ಡಾ. ಎಚ್. ಎಲ್. ಹರಿಯಪ್ಪ
೮. ಸರ್ವಜ್ಞಕವಿ—ಎ. ಆರ್. ಕೃಷ್ಣಶಾಸ್ತ್ರೀ
೯. ಇಂಗ್ಲಿಷ್ ಪ್ರಬಂಧಗಳು—ಎಸ್. ಮಂಜುನಾಥ್
೧೦. ಅಕ್ಕಮಹಾದೇವಿ—ಎಸ್. ವಿ. ಪರಮೇಶ್ವರಭಟ್ಟ
೧೧. ಕುಮಾರವ್ಯಾಸ ವಾಣಿ—ಎಸ್. ವಿ. ರಂಗಣ್ಣ
೧೨. ನಯಸೇನ—ಜಿ. ವೆಂಕಟಸುಬ್ಬಯ್ಯ
೧೩. ತೆಲುಗು ಚಾಟುಪದ್ಯಗಳು—ಕೆ. ವೆಂಕಟರಾಮಪ್ಪ
೧೪. ಲಕ್ಷ್ಮೀಶ—ಎನ್. ಅನಂತರಂಗಾಚಾರ್
೧೫. ಮುದ್ದಣ—ತ. ಸು. ಶಾಮರಾವ್
೧೬. ಜನಪದ ಮುಕ್ತಕಗಳು—ಎಚ್. ಎಂ. ಶಂಕರನಾರಾಯಣರಾವ್
೧೭. ಭಾವಗೀತೆ—ಎಸ್. ವಿ. ಪರಮೇಶ್ವರಭಟ್ಟ
೧೮. ಮಹಾಭಾರತ—ಡಾ. ಕೆ. ಕೃಷ್ಣಮೂರ್ತಿ
೧೯. ನೇಮಿಚಂದ್ರ—ಎನ್. ಅನಂತರಂಗಾಚಾರ್
೨೦. ಶ್ರೀನಾಥ—ಕೆ. ವೆಂಕಟರಾಮಪ್ಪ
೨೧. ಷಡಕ್ಷರದೇವ—ದೇ. ಜವರೇಗೌಡ
೨೨. ಚಿತ್ರಾಂಗದಾ—ಉ. ಕಾ. ಸುಬ್ಬರಾಯಾಚಾರ್
೨೩. ಸಂಚಿಯ ಹೊನ್ನಮ್ಮ—ಎಚ್. ಎಂ. ಶಂಕರನಾರಾಯಣರಾವ್
೨೪. ವಾಲ್ಮೀಕಿ ರಾಮಾಯಣ—ಉ. ಕಾ. ಸುಬ್ಬರಾಯಾಚಾರ್
೨೫. ಮಹಾಕವಿ ಬಾಣ—ಟಿ. ಎಸ್. ಕೃಷ್ಣಮೂರ್ತಿ
೨೬. ತುಳಸೀದಾಸ—ಡಾ. ಹಿರಣ್ಮಯ
೨೭. ವೇಮನ—ಕೆ. ವೆಂಕಟರಾಮಪ್ಪ
೨೮. ಕನ್ನಡದಲ್ಲಿ ಅನುಭಾವ ಸಾಹಿತ್ಯ—ಡಾ. ಎಚ್. ತಿಪ್ಪೇರುದ್ರಸ್ವಾಮಿ

೨೯. ಅಲ್ಲಮಪ್ರಭು—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೦. ಕಾಳಿದಾಸನ ನಾಟಕಗಳು—ಡಾ. ಕೆ. ಕೃಷ್ಣಮೂರ್ತಿ
೩೧. ಅಣ್ಣನ ಆದರ್ಶ—ಡಾ. ಟಿ. ಜಿ. ಸಿದ್ಧಪ್ಪಾರಾಧ್ಯ
೩೨. ಹೊಸಗನ್ನಡ ಭಾವಗೀತೆಗಳಲ್ಲಿ ಜೀವನ ವಿಕಾಸ—ದೇವಂಗಿ ಟಿ. ಚಂದ್ರಶೇಖರ
೩೩. ಸೂರದಾಸ—ಎಂ. ಎಸ್. ಕೃಷ್ಣಮೂರ್ತಿ
೩೪. ಜನ್ನ—ಡಾ. ಸಿ. ಪಿ. ಕೃಷ್ಣಕುಮಾರ್
೩೫. ರತ್ನಾಕರ ಮಹಾಕವಿ—ಜಿ. ಬ್ರಹ್ಮಪ್ಪ
೩೬. ಮಾಘಕವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೩೭. ನಿಜಗುಣಶಿವಯೋಗಿ—ಎಚ್. ಗಂಗಾಧರನ್
೩೮. ಮುದ್ರಾರಾಕ್ಷಸ—ಡಾ. ಎನ್. ಎಸ್. ಅನಂತರಂಗಾಚಾರ್
೩೯. ರಾಘವಾಂಕ—ರಾಮೇಗೌಡ
೪೦. ಮೂರನೆಯ ಮಂಗರಸ ಕವಿ—ಹಂಪ ನಾಗರಾಜಯ್ಯ
೪೧. ನಾಗಚಂದ್ರ—ಡಾ. ಸಿ. ಪಿ. ಕೃಷ್ಣಕುಮಾರ್
೪೨. ವಡ್ಡಾರಾಧನೆ—ಹಂಪ ನಾಗರಾಜಯ್ಯ
೪೩. ಮಹಾಕವಿ ಭಾರವಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೪. ಕವಿ ಮುರಾರಿ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೫. ಚನ್ನಬಸವಣ್ಣ—ಓ. ಎನ್. ಲಿಂಗಣ್ಣಯ್ಯ
೪೬. ಕವಿ ಶ್ರೀ ಹರ್ಷ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೪೭. ಕಬೀರದಾಸ—ಡಾ. ಹಿರಣ್ಮಯ
೪೮. ವಿದ್ಯಾಪತಿ—ಎಂ. ಎಸ್. ಕೃಷ್ಣಮೂರ್ತಿ
೪೯. ಕವಿ ಭಟ್ಟನಾರಾಯಣ—ವಿದ್ವಾನ್ ಎಂ. ಜಿ. ನಂಜುಂಡಾರಾಧ್ಯ
೫೦. ಕಾವ್ಯದಲ್ಲಿ ಧ್ವನಿ—ಗುರುಪಾದ ಕೆ. ಹೆಗಡೆ
೫೧. ಪೊನ್ನ—ಎನ್. ಅನಂತರಂಗಾಚಾರ್
೫೨. ಎಡೆಯೂರು ತೋಂಟದ ಸಿದ್ಧಲಿಂಗಯತಿ—ಓ. ಎನ್. ಲಿಂಗಣ್ಣಯ್ಯ
೫೩. ದೇವರ ದಾಸಿಮಯ್ಯ—ಕೆ. ಅನಂತರಾಮು
೫೪. ಸಂಸ್ಕೃತ ಸಾಹಿತ್ಯ—ಡಾ. ಆರ್. ಎಸ್. ಶಿವಗಣೇಶಮೂರ್ತಿ
೫೫. ಚಾಮುಂಡರಾಯ—ಡಾ. ಟಿ. ವಿ. ವೆಂಕಟಾಚಲಶಾಸ್ತ್ರೀ
೫೬. ಶ್ರೀ ಸಮರ್ಥ ರಾಮದಾಸರು—ಬಿ. ಪಿ. ಚಂದ್ರಾಬಾಯಿ
೫೭. ಉಪಭಾಷಾ ಅಧ್ಯಯನ—ಶಾಲಿನಿ ರಘುನಾಥ
೫೮. ಭಾರತೀಯ ಮಹಿಳಾ ಪರಂಪರೆ—ಬಿ. ಪಿ. ಚಂದ್ರಾಬಾಯಿ
೫೯. ಬಂಧುವರ್ಮ—ಬಿ. ಎಸ್. ಸಣ್ಣಯ್ಯ
೬೦. ಶ್ರೀರಾಮಾಯಣದರ್ಶನಂ—ಒಂದು ಸಮೀಕ್ಷೆ—ಡಾ. ಸಿ.ಪಿ. ಕೃಷ್ಣಕುಮಾರ್